
ಸಂಪುಟ 24 ಸಂಚಿಕೆ 42
ಅಕ್ಟೋಬರ್ 20, 2002 ಬೆಲೆ ರೂ. 3.00
ದುಡಿವ ಜನರ ಪ್ರಾಣಮಿತ್ರ



ಕೃಷ್ಣನ ಕಸರತ್ತು ಕುರ್ಚಿಯುದ್ದೇ ಮುಸಲತ್ತು

ಜಮ್ಮು-ಕಾಶ್ಮೀರ: ಎನ್‌ಡಿಎ ಕೂಟಕ್ಕೆ ಜನರ ತಿರಸ್ಕಾರ





ತಮಿಳುನಾಡು ಭತ್ತದ ಕಣದಲ್ಲಿ ಅನ್ನಕ್ಕಾಗಿ ಹಾಹಾಕಾರ

"ಜಾಗತಿಕ ಯಜಮಾನಿಕೆ, ವಿಶ್ವಬಂಡವಾಳದ ಹವಣಿಗೆ"

– ಬರಗೂರು



ಉತ್ತರ ಕನ್ನಡದ ಅತಿಕ್ರಮಣದಾರರು-ಹೋರಾಟದ ಮಾರ್ಗದಲ್ಲಿ

ಜಿಲ್ಲೆಯ ತುಂಬಾ ಹೋರಾಟದ ಅಲೆ ಎದ್ದಿದೆ. ಕಾವೇರಿಯ ಗಲಾಟೆ, ನಾಗಪ್ಪನ ಅಪಹರಣಗಳು ಸುದ್ದಿ ಮಾಧ್ಯಮಗಳ, ಇಲೆಕ್ಟ್ರಾನಿಕ್ ಮಾಧ್ಯಮಗಳ ಸ್ಥಳವನ್ನು ಅತಿಕ್ರಮಿಸಿರುವುದರಿಂದ ಅತಿಕ್ರಮಣದಾರರ ಸಮಸ್ಯೆ ಮತ್ತು ಹೋರಾಟ ಇನ್ನೂ ರಾಜ್ಯಮಟ್ಟದಲ್ಲಿ ದೊಡ್ಡ ಸುದ್ದಿಯಾಗಲೇ ಇಲ್ಲ.

ರಾಜಕೀಯದ ಕುದುರೆ ಲೆಕ್ಕಾಚಾರದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರಗಳು ನಿರ್ಣಾಯಕ ಪಾತ್ರ ವಹಿಸುತ್ತಿರುವುದರಿಂದ ಸಹಜವಾಗಿಯೇ ಅಲ್ಲಿಯ ಸಮಸ್ಯೆ ಇಡೀ ರಾಜ್ಯದ ಸಮಸ್ಯೆ ಎಂಬಂತೆ ಫೋಕಸ್ ಆಗುತ್ತವೆ. ನೈಜವಾದದ್ದಾದರೂ ಉಳಿದ ಚಿಕ್ಕಪುಟ್ಟ ಜಿಲ್ಲೆಗಳ (4-5 ಎಂಎಲ್ಎಗಳಿರುವ ಜಿಲ್ಲೆ) ಸಮಸ್ಯೆ



ಗೌಣವಾಗುತ್ತದೆ. ಹಾಗೆಯೇ ಅತಿಕ್ರಮಣದಾರರ ಸಮಸ್ಯೆ ಕೂಡ.

ಶಿರಸಿ, ಸಿದ್ದಾಪುರ, ಯಲ್ಲಾಪುರ ಮತ್ತು ಹೊನ್ನಾವರಗಳಲ್ಲಿ ಹೋರಾಟ ಪ್ರಬಲವಾಗಿ ಮತ್ತು ನಿರಂತರವಾಗಿ ನಡೆಯುತ್ತಿದೆ. ಮೆರವಣಿಗೆ, ಸಮಾವೇಶ, ಮುತ್ತಿಗೆ, ರಸ್ತೆ ತಡೆ, ರೈಲು ತಡೆ ಇತ್ಯಾದಿಗಳು ವಿವಿಧ ಸಂಘಟನೆಗಳಡಿ ನಡೆಯುತ್ತಿದೆ. ಭಟ್ಕಳದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಹೊನ್ನಾವರದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(DYFI), ಅತಿಕ್ರಮಣದಾರರ ಹಿತರಕ್ಷಣಾ ಸಮಿತಿ, ಶಿರಸಿಯಲ್ಲಿ ಹಿಂದುಳಿದ ವರ್ಗದ ವೇದಿಕೆ, ಉಭಯ ಜನತಾದಳಗಳು, ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಯಲ್ಲಾಪುರದಲ್ಲಿ ಉಭಯ ಜನತಾದಳ ಮತ್ತು ಅಹಿಂದ ಸಂಘಟನೆ, ಸಿದ್ದಾಪುರದಲ್ಲಿ ಅತಿಕ್ರಮಣದಾರರ ಹೋರಾಟ ಸಮಿತಿ, ಕಾಂಗ್ರೆಸ್ಸಿನ ವಿವಿಧ ಬಣಗಳು ಹೋರಾಟದಲ್ಲಿ ತೊಡಗಿಕೊಂಡಿವೆ. ಈ ಹೋರಾಟಕ್ಕೆ ಬಹುತೇಕ ರಾಜಕೀಯ ಪಕ್ಷಗಳು ಬೆಂಬಲ ಕೊಟ್ಟಿವೆ. ಕೆಲವರು ಬೆಂಬಲ ಕೊಟ್ಟ ನಾಟಕ ನಡೆಸುತ್ತಿದ್ದಾರೆ.

ಅಕ್ಟೋಬರ್ 1 ರಂದು ಹೊನ್ನಾವರದಲ್ಲಿ, ಹೊನ್ನಾವರ-ಕುಮಟಾ-ಭಟ್ಕಳ ತಾಲೂಕುಗಳ ಅತಿಕ್ರಮಣದಾರರ ಸಮಾವೇಶ ಮತ್ತು ಮೆರವಣಿಗೆಯನ್ನುಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(DYFI) ಮತ್ತು ಅರಣ್ಯ ಅತಿಕ್ರಮಣದಾರರ ಹಿತರಕ್ಷಣಾ ಸಮಿತಿ ಜಂಟಿಯಾಗಿ ನಡೆಸಿತು.

ಸಾಲ್ಕೋಡು, ಹಿರೇಬೈಲ್, ಪ್ರಭಾತನಗರ, ಮಾಳ್ಕೋಡು.. ಹೀಗೆ ಹತ್ತು ಹಲವು ಗ್ರಾಮಗಳಲ್ಲಿ ಸಭೆ ನಡೆಸಿದ ನಂತರ ನಡೆದ ಈ ಸಮಾವೇಶ ಹೊನ್ನಾವರ ನಗರದಲ್ಲೊಂದು ದಾಖಲೆ ಸ್ಥಾಪಿಸಿತು. 2500 ರಿಂದ 3000 ರಷ್ಟಿದ್ದ ಜನರು "ಅರಣ್ಯ ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ ತನ್ನಿ", "ಓಟು ಕೇಳಲು ಬರುವವರೆ ಭೂಮಿ ಉಳಿಸಲು ಬನ್ನಿ", "ಭೂಮಿ ಪಡೆಯುವುದು ನಮ್ಮ ಜನ್ಮಸಿದ್ಧ ಹಕ್ಕು", " ಜೈಲಿಗಾದರೂ ಹೋದೆವು ಭೂಮಿ ಬಿಡೆವು", "ಭೂಮಿಯಿಂದ ಒಕ್ಕಲೆಬ್ಬಿಸಲು ಬಂದಿರುವ ರಾಜ್ಯ-ಕೇಂದ್ರ ಸರ್ಕಾರಕ್ಕೆ ಧಿಕ್ಕಾರ" "ನ್ಯಾಯ ನಮ್ಮಲ್ಲಿದೆ, ನ್ಯಾಯಾಲಯ ನಿಮ್ಮಲ್ಲಿದೆ" - ಮುಂತಾದ ಘೋಷಣೆಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಹಶೀಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಅರ್ಪಿಸಿದರು. ನೂರಾರು ಸಂಖ್ಯೆಯಲ್ಲಿದ್ದ ಮಹಿಳೆಯರು ಸೇರಿದಂತೆ ಸ್ಥಳದಲ್ಲಿ ಹಾಜರಿದ್ದ ಅರಣ್ಯ ಉಪಸಂರಕ್ಷಣಾಧಿಕಾರಿಗಳಿಗೆ ನಮ್ಮ ಭೂಮಿ ತೆರವುಗೊಳಿಸಲು ಬರಬೇಡಿ, ಬಂದರೆ ನಾವು ಸಹನೆ ಕಳೆದುಕೊಳ್ಳ ಬೇಕಾಗುತ್ತೆ ಎಂದು ಎಚ್ಚರಿಕೆ ಕೊಟ್ಟರು.



ಇದಕ್ಕಿಂತ ಮೊದಲು ನಡೆದ ಸಮಾವೇಶವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ(ಸಿಪಿಐಎಂ) ರಾಜ್ಯ ಕಾರ್ಯದರ್ಶಿ ಮತ್ತುಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಎನ್.ನಾಗರಾಜ್ ಉದ್ಘಾಟಿಸಿ ಮಾತನಾಡಿದರು. "ಕೌರವ-ಪಾಂಡವರ ನಡುವಿನ ಸಮರ ಇದು. ಭೂಮಿ ಕೇಳುತ್ತಿರುವ ಪಾಂಡವ ಸೈನ್ಯ (ಅತಿಕ್ರಮಣದಾರರು, ರೈತರು) ಮತ್ತು ಒಂದಿಂಚು ಭೂಮಿಯನ್ನು ಕೊಡಲಾರೆವು ಎಂದು ಹೊರಟಿರುವ ಕೌರವ ಸೈನ್ಯದ ನಡುವೆ ಯುದ್ಧ ನಡೆದಿದೆ. ಕೌರವರ ಸೈನ್ಯದಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸುಪ್ರಿಂ ಕೋರ್ಟ್ ಇದೆ. ಕುರುಕ್ಷೇತ್ರ ಯುದ್ಧದಲ್ಲಿ ಭೂಮಿ ಕೊಡಲಾರೆವು ಎಂದ ಕೌರವರು ಸೋಲನುಭಿಸಿದಂತೆ ಅತಿಕ್ರಮಣದಾರರ ಸೈನ್ಯದ ಎದುರು ವಿರೋಧಿಗಳು ಸೋಲುವುದು ಅನಿವಾರ್ಯ. ಅದಕ್ಕಾಗಿ ಪಕ್ಷಾತೀತವಾಗಿ ಹೋರಾಟ ನಡೆಸಬೇಕಾಗಿದೆ ಎಂದರು. ಅರಣ್ಯ ಇಲಾಖೆ ಈಗ ಬೆಳೆಸುತ್ತಿರುವುದು ಕಾಡಲ್ಲ. ಅದು ಅಕೇಶಿಯಾ ನೀಲಗಿರಿ ಗಿಡಗಳ ನೆಡುತೋಪು. ಇಲಾಖೆ ಈ ಗಿಡಮರವನ್ನು 5-6 ವರ್ಷಗಳಲ್ಲಿ ಕಡಿದು ಬೋಳಾಗಿಸುತ್ತಿವೆ. ಕಡಿಯಲೆಂದೇ ಬೆಳೆಸುತ್ತಿರುವ ಈ ಮರವನ್ನು ರೈತರು, ಕೃಷಿಕಾರ್ಮಿಕರು ಕಡಿದರೇನು ತಪ್ಪು? ನಿಜವಾದ ಅರಣ್ಯ ರಕ್ಷಕರು ಕಾಡಿನಲ್ಲಿರುವ ಕಂದಮ್ಮಗಳಾದ ಕುಣಬಿ, ಸಿದ್ದಿ, ಗೊಂಡ, ಹಾಲಕ್ಕಿ ಜನಾಂಗದವರನ್ನು ಒಳಗೊಂಡಂತೆ ಬುಡಕಟ್ಟಿನವರು, ಆದಿವಾಸಿಗಳು ಸರಕಾರದಿಂದ ಇವರು ಅರಣ್ಯ ರಕ್ಷಣೆಯ ಬಗ್ಗೆ ಪಾಠ ಕಲಿಯಬೇಕಾಗಿಲ್ಲ. ಇವರೆಲ್ಲಾ ಕಾಡನ್ನು ದೇವರೆಂದು ಪ್ರೀತಿಸುವ ಜನರು. ಇಲ್ಲಿರುವ ಕೃಷಿಯೋಗ್ಯ ಬಂಜರು ಭೂಮಿ, ವಾಸ ಭೂಮಿಗಳನ್ನು ವಶಪಡಿಸಿಕೊಳ್ಳುವ ಹಕ್ಕು ಇಲ್ಲಿಯ ಜನಕ್ಕಿದೆ. ರಾಜ್ಯದಲ್ಲಿರಬೇಕಾದ ಅರಣ್ಯವೆಲ್ಲವೂ ಉತ್ತರ ಕನ್ನಡದಲ್ಲಿಯೇ ಇರಬೇಕಾಗಿಲ್ಲ ಎಂದು ಹೇಳಿ ಸಾಗುವಳಿಗೆ ಯೋಗ್ಯವಾದ ಭೂಮಿ

ಪುಟ 9 ಕ್ಕೆ

ಬಿಜೆಪಿ ಮತ್ತು ಕಾಂಗ್ರೆಗಳ ಪ್ರತಿಭಟನಾ ಪ್ರಹಸನ

ಪ್ರಹಸನ1

ಬಿಜೆಪಿ ಕಾಂಗ್ರೆಗಳೆರಡೂ ಓಟಿನ ಲೆಕ್ಕಾಚಾರಕ್ಕೆ ಇಳಿದಿವೆ. ಎಲ್ಲಿ ಅತಿಕ್ರಮಣದಾರರ ಓಟು ತಮ್ಮಿಂದ ಆಚೆ ಹೋಗಿಬಿಡಬಹುದೆಂದು ಭಯ ಗೊಂಡು ತಾವೇ ಅತಿಕ್ರಮಣದಾರರ ರಕ್ಷಕರೆಂದು ಪೋಸು ಕೊಡುವ ಪ್ರಹಸನದಲ್ಲಿ ತೊಡಗಿ ಕೊಂಡಿದ್ದಾರೆ. ಅತಿಕ್ರಮಣದ ಸಮಸ್ಯೆಯ ಜನಕರೆನ್ನುವ ಸತ್ಯವನ್ನು ತಗ್ಗಿಸುವ ವ್ಯರ್ಥ ಪ್ರಯತ್ನ ಇದು.

'ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಅರಣ್ಯ ಭೂಮಿಯನ್ನು ಅರಣ್ಯೇತರ ಕಾರಣಕ್ಕಾಗಿ ಬಳಸಬಾರದು' ಎಂದು 1980ರ ಅರಣ್ಯ ಕಾಯ್ದೆ ಹೇಳುತ್ತದೆ. ಹಾಗಾಗಿ ಕೇಂದ್ರ ಸರ್ಕಾರ ಈಗ ಅತಿಕ್ರಮಣ ಮಾಡಿದ ಭೂಮಿಯ ಮಂಜೂರಾತಿಗೆ 'ಅನುಮತಿ' ನೀಡಬೇಕಾಗಿದೆ. ಹಿಂದೆ ವಿವಿಧ ಸಂದರ್ಭದಲ್ಲಿ ಸಾವಿರಾರು ಹೆಕ್ಟೇರ್ ಭೂಮಿಗೆ ಕೇಂದ್ರ ಸರ್ಕಾರ ಅನುಮತಿ ಕೊಟ್ಟಿದೆ. ಆದರೆ ಈಗ ಅರಣ್ಯ ಕಾಯ್ದೆಗೆ ತಿದ್ದುಪಡಿ ತರುವ ಸುಗ್ರೀವಾಜ್ಞೆ ತರಬೇಕಾದ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಕೈಕಟ್ಟಿ ಕುಳಿತಿದೆ. ಆದರೆ ಆ ಪಕ್ಷಗಳ ನಾಯಕರು ತಮ್ಮ ಪಕ್ಷದ ಮೇಲೆ ಒತ್ತಡ ತಂದು ಸಮಸ್ಯೆ ಬಗೆಹರಿಸಲು ಪ್ರಯತ್ನಿಸುವ ಬದಲು ಜಿಲ್ಲೆಯಲ್ಲಿ ಬಲಗೊಳ್ಳುತ್ತಿರುವ ಹೋರಾಟವನ್ನು ಒಡೆಯುವ ದುರ್ಬಲಗೊಳಿಸುವ ಕಾಯಕದಲ್ಲಿ ನಿರತ ಆಗಿದ್ದಾರೆ. ಹೊನ್ನಾವರ ಭಟ್ಕಳಗಳಲ್ಲಿ ಎಲ್ಲಾ ಸಂಘಟನೆ, ಪಕ್ಷಗಳು ಸೇರಿ ಹೋರಾಟ ರೂಪಿಸಿ ದ್ದರೆ, ಬಿಜೆಪಿ ಅದಕ್ಕಿಂತ 3-4 ದಿನ ಮೊದಲು ಯಾವ ತಯಾರಿ ಇಲ್ಲದೆ ಪ್ರತಿಭಟನಾ ಸಭೆ ನಡೆಸಿ ಇದಕ್ಕೆಲ್ಲ ರಾಜ್ಯದ ಕಾಯ್ದೆ ಸರಕಾರವೇ ಕಾರಣ ಎಂದು ಬೊಬ್ಬೆಹೊಡೆಯುತ್ತಿದೆ. ಇನ್ನೊಂದು ಕಡೆ DYFI, KPRS ಸಂಘಟನೆಯಡಿ ಹೋರಾಟ ನಡೆಸುತ್ತಿರುವಲ್ಲಿ ಮನೆಮನೆಗೆ ತೆರಳಿ ಹೋರಾಟಕ್ಕೆ ಹೋಗದಂತೆ ಜನರ ಮನ ಒಲಿಸಲು ತೊಡಗಿದೆ.

ಕೈಕಾಲು ಕಡಿಸುವ ಬಿಜೆಪಿ ನಾಯಕ

ಬಿಜೆಪಿಯ ಮಾಜಿ ಸಂಸದ ಅನಂತಕುಮಾರ್ ಹೆಗಡೆ ಮುಂಡಗೋಡಿನಲ್ಲಿ ಭಾಷಣ ಮಾಡಿ ಅತಿಕ್ರಮಣ ತೆರವುಗೊಳಿಸಲು ಬಂದ ಅರಣ್ಯ ಇಲಾಖೆಯ ಅಧಿಕಾರಿಗಳ ಕೈ ಕಡಿಯಿರಿ. ಕೈಕಡಿದವರಿಗೆ 10 ಸಾವಿರ ರೂಪಾಯಿ ಬಹುಮಾನ ಇದೆ ಎಂದು ಘೋಷಿಸಿದರು. ಕೈಕಾಲು ಕಡಿಯುವ, ಚೂರಿಹಾಕುವ ಸಂಸ್ಕೃತಿಯನ್ನೇ ಮೊದಲಿನಿಂದ ರೂಪಿಕೊಂಡ ಆರ್.ಎಸ್.ಎಸ್ ಮೂಲದ ಇವರು ತಮ್ಮ ಪಕ್ಷದ ನೇತೃತ್ವದ ಕೇಂದ್ರಸರ್ಕಾರದ ತಪ್ಪನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಬಿಜೆಪಿ ಶಾಸಕರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಶಾಸಕ ಎಂ.ಪಿ.ಕರ್ಕಿ ಶಿವಾನಂದ ನಾಯ್ಕ ಮೊದಲಾದವರು ಇಷ್ಟೊಂದು ಉಗ್ರವಾಗಿ ಭಾಷಣ ಮಾಡದಿದ್ದರೂ ಜನರನ್ನು ತಪ್ಪುದಾರಿಗೆ ಎಳೆಯಲು ಸಾಧ್ಯಂತವಾಗಿ ಪ್ರಯತ್ನಿಸುತ್ತಿದ್ದಾರೆ.

ಪ್ರಹಸನ 2

ಜಿಲ್ಲೆಯಲ್ಲಿ ಜನರ ಪ್ರತಿಭಟನೆ ಜೋರಾಗುತ್ತಿದ್ದಂತೆ ಕಾಂಗ್ರೆಸ್ ವಲಯದಲ್ಲಿ ಗಾಬರಿ ಹುಟ್ಟಿದೆ. ಚಳುವಳಿ ಜೋರಾಗುತ್ತಿದ್ದರೂ ಸಂಸದೆ ಮಾರ್ಗರೇಟ್ ಆಳ್ವ ಕ್ಷೇತ್ರಕ್ಕೆ ಮುಖ ಹಾಕದಿರುವುದು, ಸಚಿವ ದೇಶಪಾಂಡೆ ಜಿಲ್ಲೆಯ ಕಡೆ ತಿರುಗಿ ನೋಡದಿರುವುದು - ಪ್ರಜ್ಞಾವಂತ ಹೋರಾಟಗಾರರ ಟೀಕೆಗೆ ಗುರಿಯಾಗಿತ್ತು. ಹೋರಾಟದ ನಾಯಕತ್ವ ನೀಡಿದವರು ಕೇಂದ್ರ ಮತ್ತು ರಾಜ್ಯ ಸರ್ಕಾರದ ವೈಫಲ್ಯವನ್ನು ಉದಾಹರಣೆಯೊಂದಿಗೆ ವಿವರಿಸುತ್ತಿದ್ದರು. ಇದರಿಂದ ಎಚ್ಚರಾದ ಕಾಂಗ್ರೆ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಶಿರಸಿಯಲ್ಲಿ ಜಿಲ್ಲಾಮಟ್ಟದ ಸಮಾವೇಶವೊಂದನ್ನು ನಡೆಸಿತು. ಜಿಲ್ಲೆಯ ಊರೂರಿಗೆ ಟೆಂಪೋ ಕಳುಹಿಸಿ, ಬಂದವರಿಗೆಲ್ಲ ಮಧ್ಯಾನ್ಹದ ಊಟ ಹಾಕಿಸಿ ದೇಶಪಾಂಡೆ ಮತ್ತು ಮಾರ್ಗರೇಟ್ ಆಳ್ವರಿಂದ ಆಶೀರ್ವಚನ ಕೊಡಿಸಿದರು. ಪ್ರತಿಭಟನೆ ನಡೆಸುತ್ತಿದ್ದವರನ್ನು ಖಂಡಿಸುವ ಈ ನಾಯಕರು ಅತಿಕ್ರಮಣದಾರರ ಹಿತರಕ್ಷಿಸುತ್ತೇವೆಂದು, ಸಾಗುವಳಿದಾರರ ಒಂದೇ ಒಂದು ಇಂಚು ಜಾಗವನ್ನು ತೆಗೆಯಲು ಮುಂದಾಗದಂತೆ ಅರಣ್ಯ ಇಲಾಖೆಗೆ ಸೂಚಿಸುವುದಾಗಿ ಹೇಳಿದರು. ಯಾರೂ ಹೋರಾಟ ಮಾಡಬಾರದೆಂದು ಅಪ್ಪಣೆ ಕೊಡಿಸಿ ವಾಪಸಾದರು. ಆದರೆ ಅದರ ಮರುದಿನ ಕೆಲವು ಕಡೆ ಅತಿಕ್ರಮಣದಾರರ ಬೇಲಿ ಕಿತ್ತ ಬಗ್ಗೆ ದೂರುಗಳು ಬಂದಿವೆ ಎಂದಾದ ಮೇಲೆ ನಾಯಕರ ಮಾತಿಗೇನು ಬೆಲೆ ಉಳಿಯಿತು. ಅವರು ಸುರಿಸಿದ ಮೊಸಳೆ ಕಣ್ಣೀರಿಗೆಬದಲಾಗಿ ವಿಧಾನಸೌಧದಲ್ಲಿ ಕುಳಿತು ಅಗತ್ಯ ಕಾಗದ ತಯಾರಿಸಿ ಕೇಂದ್ರದ ಮೇಲೆ ಒತ್ತಡ ತರುವ ಕಾರ್ಯ ಮಾಡಬಹುದಾಗಿತ್ತು. ಇಷ್ಟಲ್ಲದರ ಮಧ್ಯೆ ಕಾಡಿದ ಪ್ರಶ್ನೆ ಕಾಂಗ್ರೆನವರು ಯಾರ ವಿರುದ್ಧ ಪ್ರತಿಭಟನಾ ಸಭೆ ನಡೆಸಿದರು? ಅವರು ಸಭೆ ನಡೆದ ಮರುದಿನ ಹೊನ್ನಾವರದ ಗೇರುಸೊಪ್ಪಾ ಆರ್‌ಎಫ್‌ಓ ಕಛೇರಿಗೆ ಮುತ್ತಿಗೆ ಹಾಕಿದ್ದು ಕಾಂಗ್ರೆ ಮತ್ತು ಬಿಜೆಪಿ ಹೆಚ್ಚು ದಿನ ಜನರನ್ನು ಮೋಸ ಗೊಳಿಸಲು ಸಾಧ್ಯವಿಲ್ಲ ಎನ್ನುವುದನ್ನು ತೋರಿಸುವಂತಿತ್ತು.



ತೀವ್ರಗೊಂಡ ಬರ - ಕಾಳಜಿಯ ಸರ್ಕಾರವೆಲ್ಲಿ?

ಈವಾರ ಕರ್ನಾಟಕ ಒಂದು ನೋಟ —— ಎಸ್.ವೈ.ಗುರುಶಾಂತ್

ಮುಂಗಾರು ಮಳೆ ಪೂರ್ಣ ಕೈಕೊಟ್ಟಾಯಿತು. ಹಿಂಗಾರಿನ ಮಳೆಯು ಪೂರ್ಣಧರೆಗಿಳಿವ ಸಂದರ್ಭದಲ್ಲಿ ಇಲ್ಲ. ಹೀಗಾಗಿ ಬರಗಾಲ ಇನ್ನೂ ತೀವ್ರಗೊಳ್ಳುವ ಎಲ್ಲಾ ಸೂಚನೆಗಳೂ ಇವೆ. ಕಳೆದ ವರುಷವೂ ಬರಗಾಲ ಅನುಭವಿಸಿದ್ದ ಕೃಷಿ ಕೂಲಿಕಾರರು ತೀವ್ರ ಸಂಕಷ್ಟದಲ್ಲಿದ್ದಾರೆ. ದನ ಕರುಗಳಿಗೆ ಮೇವು ನೀರಿನ ಸಮಸ್ಯೆ ದುತ್ತೆಂದು ಎದ್ದು ನಿಂತಿದೆ. ಜನರಿಗಾದರೂ ಕುಡಿಯಲು ನೀರು ಬೇಕಲ್ಲ ಅಂದು ದುಡಿದರೆ ಮಾತ್ರ ತುತ್ತಿನ ಚೀಲ ತುಂಬುವ ಕೋಟ್ಯಾಂತರ ಜನರ ತಲ್ಲಣಗಳಿಗೆ ಪರಿಹಾರವೇನು? ಇಂತಹ ಸಂದರ್ಭದಲ್ಲಿ ರಾಜ್ಯದ ರೈತ ಕೂಲಿಕಾರರ ನೆರವಿಗೆ ಧಾವಿಸುವ ಸರ್ಕಾರವೇ ಇಲ್ಲದಿರುವುದು ಕಳವಳಿಕಾರಿ ಸಂಗತಿ. ಕಾವೇರಿ ನದಿ ನೀರಿನ ವಿವಾದ, ಸಮಸ್ಯೆಯ ಗೋಜಲುಗಳಿವೆ ನಿಜ. ಇದರತ್ತ ಗಮನವೂ, ಅತ್ಯಗತ್ಯ ನಿಜ. ಆದರೆ ಕೃಷ್ಣರವರ ಸರ್ಕಾರದ ದುಷ್ಟ ಹಾಗೂ ಪರಿಗಣನೆಗಳನ್ನು ನೋಡಿದರೆ ರಾಜ್ಯದ ಇಡೀ ಜನತೆಯ ಬಗೆಗೆ ಕಾಳಜಿ ಇದೆಯೇ ಎಂಬ ಪ್ರಶ್ನೆ ಏಳುತ್ತದೆ. ಪಾದಯಾತ್ರೆ ಮೂಲಕ ಪಂಚಜನ್ಯ ಮೊಳಗಿಸುವ ಕೃಷ್ಣರಿಗೆ ಕೋಟ್ಯಾಂತರ ಜನರ ಬದುಕು ಕಾಣುವುದಿಲ್ಲವೇ? ಕೇಂದ್ರ ಸರ್ಕಾರದಿಂದ ಲಕ್ಷಾಂತರ ಟನ್ ಆಹಾರಧಾನ್ಯ ರಾಜ್ಯಕ್ಕೆ ತರುವಲ್ಲಿ ತಮ್ಮದೇ ಸಾಧನೆಯೆಂದು ಬಿಜೆಪಿ ಕಾಂಗ್ರೆಸ್ ನಾಯಕರು ಬೊಗಳೆ ಹೊಡೆಯುತ್ತಿದ್ದರೂ ಅದು ತಲುಪಿದ್ದೆಲ್ಲಿಗೆ? ಈಗ ಬಿಡುಗಡೆಯಾಗಿದೆಯನ್ನಲಾದ ಹಣ, ಧಾನ್ಯಗಳ ಹಂಚಿಕೆ ಬಗ್ಗೆ ತನಿಖೆಯಾದರೆ ಆಂಧ್ರ ನಾಯ್ಡು ಸರ್ಕಾರದಲ್ಲಿ ಸಿಕ್ಕಿ ಬಿದ್ದಂತೆ ಹಲವು ಹೆಗ್ಗಣಗಳು ಬಯಲಿಗೆ ಬಂದಾವು. ವಿರೋಧ ಪಕ್ಷಗಳಿಗೂ ಸಮಯವಿಲ್ಲ. ರೈತರ ಸಾಲ ಮನ್ನಾ, ವ್ಯಾಪಕ ಬರ ಪರಿಹಾರ ಕಾಮಗಾರಿ, ಕೂಲಿಗಾಗಿ ಕಾಳು ಯೋಜನೆಯ ಸಮರ್ಪಕ ಅನುಷ್ಠಾನ, ಸರ್ಕಾರಿ ಕಾಮಗಾರಿಗಳಲ್ಲಿ ಯಂತ್ರ ಬಳಕೆಯ ನಿಷೇಧ, ಎಲ್ಲಾ ಬಡವರಿಗೆ ಹಳದಿ ಪಡಿತರ ಕಾರ್ಡುಗಳ ಶೀಘ್ರ ವಿತರಣೆ, ಕಾಮಗಾರಿಗಳಲ್ಲಿನ ಭ್ರಷ್ಟಾಚಾರ ತಡೆಗಟ್ಟಲು ಬಿಗಿ ಕ್ರಮ, ಕೇಂದ್ರ ಸರ್ಕಾರದ ನೆರವು ನಿಜರೂಪದಲ್ಲಿಜಾರಿ ಮುಂತಾದ ಬೇಡಿಕೆಗಳಿಗಾಗಿ ಸಿಪಿಐ(ಎಂ) ಆಗ್ರಹಿಸುತ್ತಿದೆ. ಆದರೆ ಕರ್ನಾಟಕ ಸರ್ಕಾರ ಕಾವೇರಿ ಜಲ ವಿವಾದವನ್ನೇ ನೆಪವಾಗಿಟ್ಟುಕೊಂಡು ಉಲ್ಬಣಗೊಳ್ಳುತ್ತಿರುವ ಬರ ಎದುರಿಸುವ ಕರ್ತವ್ಯದಿಂದ ನುಣುಚಿಕೊಳ್ಳುತ್ತಿದೆ. ಕರ್ನಾಟಕ ಪ್ರಾಂತ ರೈತ ಸಂಘ ಕೂಲಿಕಾರರ ಸಂಘಗಳು ಹೋರಾಟ ಮುಂದುವರಿಸಿದ್ದು, ವ್ಯಾಪಕ ಬೆಂಬಲ ನೀಡಬೇಕು. ಕೃಷ್ಣ ಈ ಸಮಸ್ಯೆಯತ್ತ ತುರ್ತು ಕ್ರಮ ವಹಿಸಬೇಕು. ಕೃಷ್ಣರೊಂದಿಗೆ ಕಾಲುಹಾಕುತ್ತಿರುವ ಹೈದ್ರಾಬಾದ್ ಕರ್ನಾಟಕ, ಉತ್ತರ ಕರ್ನಾಟಕದ ವರಪುತ್ರರೆಂದು ಗಮನಿಸಿಕೊಳ್ಳುತ್ತಿರುವ ಸಚಿವ, ಜನ ಪ್ರತಿನಿಧಿಗಳು ಮುಖ್ಯಮಂತ್ರಿ ಮುಂದಾದರೂ ಜನರ ನಿಟ್ಟುಸಿರು ನಿವಾರಿಸಿಕೊಳ್ಳಬೇಕು. ಇಲ್ಲವಾದರೆ ಕೃಷ್ಣರಾದಿಯಾಗಿ ಹೇಳುವ ಇವರ ಕರ್ನಾಟಕ ಯಾವುದು ಎಂದು ಜನ ಪ್ರಶ್ನಿಸುತ್ತಿರುವುದಕ್ಕೆ ಉತ್ತರವನ್ನಾದರೂ ಹೇಳಬೇಕು.

○

ವೀರಪ್ಪನ್ ಮರು ಬೆದರಿಕೆ

ಮಾಜಿ ಸಚಿವ ನಾಗಪ್ಪನವರನ್ನು ನರಹಂತಕ ವೀರಪ್ಪನ್ ಅಪಹರಿಸಿ 50 ದಿನಗಳು ದಾಟುತ್ತಿವೆ. ನಾಗಪ್ಪನವರ ಬಿಡುಗಡೆ ಹೇಗೆ ಎಂದರೆ ಪೊಲೀಸ್ ಕಾರ್ಯಾಚರಣೆ ಸಂಧಾನ ಎಂಬ ಎರಡೂ ಮಾತುಗಳನ್ನು ಸರ್ಕಾರ ಆಡುತ್ತಿದೆ. ಕಾರ್ಯಾಚರಣೆಗೆಂದು ಬಂದ ಕೇಂದ್ರ ಪಡೆಯ ತುಕಡಿ ತಮ್ಮ ಗೂಡಿಗೆ ಮರಳಿದೆ. ಸರ್ಕಾರದಲ್ಲಿ ಒಂದು ಸ್ಪಷ್ಟ ಕಾರ್ಯಾಚರಣೆ ಮಾರ್ಗ ಇಲ್ಲವೇ ಎಂಬ ಅನುಮಾನ ಬರುತ್ತಿದೆ. ಉನ್ನತ ದರ್ಜೆಯ ಅಧಿಕಾರಿಗಳಲ್ಲಿ ಏಕ ಅಭಿಪ್ರಾಯ ಇಲ್ಲದಿರುವುದು ಬೆಳಕಿಗೆ ಬಂದಿದೆ. ಇಂತಹ ಸನ್ನಿವೇಶದಲ್ಲಿ ನಾಗಪ್ಪ ಅವರ ಕುಟುಂಬ, ಅಭಿಮಾನಿಗಳ ಆತಂಕ ಹೆಚ್ಚುತ್ತಿದೆ. ಈಗಲೂ ಹೊಣೆಯಿಂದ ತಪ್ಪಿಸಿಕೊಳ್ಳಲು, ಕಾವೇರಿ ವಿವಾದ ರಕ್ಷಣಾ ಗುರಾಣಿಯಂತೆ ಕೃಷ್ಣರಿಗಿದೆ.



ಇಷ್ಟು ದಿನಗಳಾದರೂ ಏನೊಂದೂ ಸಿಗದೆ ಕಾಡುಗಳ್ಳ ವೀರಪ್ಪನ್ ಕ್ರೋಧದಿಂದ ಆರ್ಭಟಿಸಿದ್ದಾನೆ. ರಾಷ್ಟ್ರ, ಅಂತರಾಷ್ಟ್ರೀಯ ಕುಖ್ಯಾತಿಯ, ಬಹಳಷ್ಟು ಜನರಿಗೆ ತುಂಬಾ ಬೇಕಾಗಿರುವ (wanted) ವೀರಪ್ಪನ್ ಬಗ್ಗೆ ಇಂತಹ ನಿರ್ಲಕ್ಷ್ಯ ಸಹಜವಾಗಿ ಕೆರಳಿಸಿರಬಹುದು. ಈ ವಾರದಲ್ಲಿ ಒಂದು ಇತ್ಯರ್ಥಕ್ಕೆ ಬರದೇ ಇದ್ದಲ್ಲಿ ನಾಗಪ್ಪರನ್ನು ಕೊಂದು ಬಿಡುವುದಾಗಿ ಬೆದರಿಕೆಯೊಡ್ಡಿದ (ಬೇಡಿಕೆಗಳ) ಕ್ಯಾಸೆಟ್ ಬಂದಿದೆ. ಏನು ಮಾಡಲು ಹೇಸದ ವೀರಪ್ಪನ್ ಕ್ರಮ ಆತಂಕ ಹುಟ್ಟಿಸಿದೆ. ಸರ್ಕಾರ ಇನ್ನಾದರೂ ಡೋಲಾಯಮಾನದ ನಿರ್ಲಕ್ಷ್ಯದ, ಹಗುರವಾದ ನಿಲುವು ತಾಳದೇ ನಾಗರೀಕನ ಜೀವನ ರಾಜ್‌ರವರದ್ದಾದರೂ, ನಾಗಪ್ಪನವರದಾದರೂ ಒಂದೇ ಎಂದು ತುರ್ತು ಕಾರ್ಯಾಚರಣೆಗೆ ಇಳಿಯಬೇಕು.

ಮತೀಯ ಶಕ್ತಿಗಳ ದಮನ ಅಗತ್ಯ

ಹುಬ್ಬಳ್ಳಿಯೀಗ ಪ್ರಕ್ಷುಬ್ಧ, ಭುಗಿಲೆದ್ದ ಕೋಮುಗಲಭೆ. ಇರಿತಕ್ಕೆ ಒಬ್ಬನ ಬಲಿ. ಕರ್ಫ್ಯೂ ಹೇರಿಕೆ. ಯಾವ ಕ್ಷಣದಲ್ಲೂ ಮತ್ತೇ ಗಲಭೆ ಮರುಕಳಿಸುವ ಆತಂಕ. ಈ ಹಿಂದೆ ನಾವು ಎಚ್ಚರಿಸಿದಂತೆ ಕೆ.ಆರ್. ನಗರದಿಂದ ಹರಪನಹಳ್ಳಿ, ಬೆಳಗಾಂ, ಆಳಂದ, ಹುಬ್ಬಳ್ಳಿ, ಹೀಗೆ ರಾಜ್ಯದಲ್ಲಿ ಬಿಡಿ ಬಿಡಿಯಾದ ಘಟನೆಗಳು ಎಂಬಂತೆ ಕಂಡರೂ ವ್ಯವಸ್ಥಿತವಾದ ಗಲಭೆ ಹಬ್ಬುತ್ತಿವೆ. ಕೆಲವೇ ದಿನಗಳ ಹಿಂದೆ ಹುಬ್ಬಳ್ಳಿಯಲ್ಲಿ ಬಜರಂಗದಳದ ಕುಖ್ಯಾತ ಸಂಚಾಲಕ ಪ್ರಮೋದ್ ಮುತಾಲಿಕ್ ಪತ್ರಿಕಾಗೋಷ್ಠಿಯಲ್ಲಿ ಉದ್ರೇಕಕಾರಿಯಾಗಿ ಶಾಂತಿ ಸೌಹಾರ್ದತೆ ಕದಡುವ ಮಾತನ್ನಾಡಿದ ವರದಿಯಾಗಿದೆ.

ಕರ್ನಾಟಕದಲ್ಲಿ ಮೂರು ಲಕ್ಷ ಬಜರಂಗದಳ ಕಾರ್ಯಕರ್ತರಿಗೆ ತ್ರಿಶೂಲ ವಿತರಿಸುವುದಾಗಿ ಘೋಷಿಸಿದ್ದಾನೆ. ಈ ಪ್ರಕಟನೆಯ ಒಂದೆರಡು ದಿನಗಳಲ್ಲೇ ಹುಬ್ಬಳ್ಳಿಯಲ್ಲಿ ಗಲಭೆ ಸಂಭವಿಸಿವೆ. ಎಂಬುದು ಗಮನಿಸಬೇಕು, ಹಾಗೆಯೇ ಮಂಗಳೂರಿಗೆ ಬಂದಿದ್ದ ವಿ.ಹಿಂ.ಪ. ಅಶೋಕ ಸಿಂಘಾಲ್ ಅಲ್ಪ ಸಂಖ್ಯಾತರ ಮೇಲೆ ದ್ವೇಷ ಕಾರಿ ಹೋಗಿದ್ದಾರೆ. ದಕ್ಷಿಣದ ರಾಜ್ಯಗಳಲ್ಲಿ ಬಿಜೆಪಿಯನ್ನು ಗಟ್ಟಿಗೊಳಿಸಲು, ಆರ್.ಎಸ್.ಎಸ್. ಬಲಗೊಳ್ಳಲು ಅವರು ನಿರ್ಧಾರ ಮಾಡಿದ ಬೆನ್ನಲ್ಲೇ ಕೋಮುಗಲಭೆಗಳು ಭುಗಿಲೇಳತೊಡಗಿದೆ. ಕ್ಷುಲ್ಲಕ ಕಾರಣ ನೆಪವೊಡ್ಡಿ ಗಲಭೆ ಹುಟ್ಟುಹಾಕಲಾಗುತ್ತಿವೆ. ಅದರ ಜೊತೆಗೆ ಬಿಜೆಪಿ ಹಳ್ಳಿಗಳತ್ತ ನಡೆ ಎಂದು ನಾಯಕರು ತಿರುಗುತ್ತಿದ್ದಾರೆ. ಇಷ್ಟೆಲ್ಲ ನಡೆಯುತ್ತಿದ್ದರೂ ಕಾಂಗ್ರೆಸ್ ಸರ್ಕಾರ ನೋಡಿಯೂ ನೋಡದಂತೆ ವರ್ತಿಸುತ್ತಿದೆ. ಸಮಾಜದಲ್ಲಿ ಅಶಾಂತಿ ಹುಟ್ಟು ಹಾಕಿ ಒಡಕು ತರುತ್ತಿರುವ ಮತೀಯ ಶಕ್ತಿಗಳನ್ನು ಹತ್ತಿಕ್ಕಲು ಸರ್ಕಾರ ದೃಢ ಕ್ರಮ ಕೈಗೊಳ್ಳಬೇಕು.

ಜಾತೀಯವಾದಿಗಳ ಸ್ವಾರ್ಥದ ದುಷ್ಟಕರ್ತೆಯಿಂದಾಗಿ ಕೋಮುದಳ್ಳುರಿಯಲ್ಲಿ ಮತ್ತೆ ಉರಿಯುತ್ತಿರುವ ಹುಬ್ಬಳ್ಳಿ ಮಹಾನಗರ

ಹುಬ್ಬಳ್ಳಿಯು ಕೋಮು ಗಲಭೆಗೆ ಪೈಶಾಚಿಕ ಕೃತ್ಯದಿಂದ ವಾಣಿಜ್ಯ ನಗರದ ಖ್ಯಾತಿಯಿಂದ ಸರಿದು ದಾರಿದ್ರ್ಯದ ಸಾಲಿಗೆ ಸರಿಯುತ್ತಿದೆ. ಕೋಮುದಳ್ಳುರಿಯಿಂದ ವಾಣಿಜ್ಯ ಉದ್ಯಮ ಬೆಳೆಯುತ್ತಿಲ್ಲ. ಇದ್ದ ಉದ್ಯಮಗಳು ಮುಚ್ಚಿಕೊಂಡು ಹೋಗಿವೆ. ಇಲ್ಲವೇ ಬೇರೆಡೆಗೆ ಸ್ಥಳಾಂತರಗೊಂಡಿದೆ. ಹೊಸ ಉದ್ಯಮಿದಾರರು ಹುಬ್ಬಳ್ಳಿಗೆ ಬರುತ್ತಿಲ್ಲ. ಹೀಗಾಗಿ ನಿರುದ್ಯೋಗ ದಾರಿದ್ರ್ಯ ಹೆಚ್ಚುತ್ತಿದೆ. ಆಡಳಿತ ಯಂತ್ರ ನಿಷ್ಕ್ರಿಯವಾಗಿವೆ.



ಅಕ್ಟೋಬರ್ 5 ರ ಶನಿವಾರದಂದು ಬೆಳಗಿನ ಜಾವದಲ್ಲಿ ಹುಬ್ಬಳ್ಳಿಯ ಪ್ರಸಿದ್ಧ ಶ್ರೀ ಸಿದ್ದಾರೂಢ ಮಠದಲ್ಲಿ ದಸರಾ ಹಬ್ಬದ ಮೊದಲು ದಿನ ಮುಸ್ಲೀಮರ ಜಾಗರಣೆ ಮಾಡುವ ಹಬ್ಬವಿದ್ದು ಅಂದು ಜಾಗರಣೆ ಮಾಡಿದ ಕೆಲವೇ ಕೆಲವು ಸಮಾಜ ಘಾತಕರು ಶ್ರೀ ಸಿದ್ದಾರೂಢ ಮಠದಲ್ಲಿ ಕಲ್ಲು ತೂರಾಡಿ ಮಠಕ್ಕೆ ದಕ್ಕೆ ತರಲು ಪ್ರಯತ್ನಿಸಿದ್ದಾರೆ.

ಅದಕ್ಕೂ ಮೊದಲಿನ ಪ್ರಯತ್ನಿಸಿದ್ದಾರೆ. ಹಳೆ - ಹುಬ್ಬಳ್ಳಿಯ ಚನ್ನಪೇಟೆಯಲ್ಲಿ ಹಿಂದೂ-ಮುಸ್ಲೀಮರ ಗುಂಪು ಘರ್ಷಣೆಯಾಗಿದೆ. ಒಂದು ರಿಕ್ಷಾ ಜಕಂ ಆಗಿದೆ. ಈ ಎರಡೂ ಘರ್ಷಣೆ ದಸರಾ ಹಬ್ಬದ ದಿನದ ಕೋಮು ಗಲಭೆಗೆ ಸೂಚನೆ ಎಂಬಂತೆ ನಡೆದಿದ್ದರೂ ಬಂಧಿಸಿ ಶಿಕ್ಷಿಸುವಲ್ಲಿ ವಿಫಲರಾಗಿದ್ದಾರೆ. ಇದಕ್ಕೆ ಉಭಯ ಕೋಮಿನ ಶಾಸಕರು ಪ್ರೋತ್ಸಾಹಿಸಿದ್ದಾರೆ.

ಅಕ್ಟೋಬರ್ 7 ರ ಸೋಮವಾರ ನಗರದ ಗುರುಸಿದ್ದೇಶ್ವರ ನಗರ ಹತ್ತಿರ ಹಿಂದೂ ವ್ಯಕ್ತಿಯೊಬ್ಬ ಮುಸ್ಲೀಮರ ಓಣಿಯಲ್ಲಿ ಮೂತ್ರ ವಿಸರ್ಜನೆ ಮಾಡಿದನು ಎಂಬ ನೆಪ ಮೂಡಿ ಅಂದು ರಾತ್ರಿ 11.00 ಘಂಟೆಗೆ ಗುರುಸಿದ್ದೇಶ್ವರ ನಗರದ ಕಮರಿ ಪೇಟೆಯಲ್ಲಿ, ತುಮಕೂರ ಓಣಿಯಲ್ಲಿ, ದಿವಟೆ ಓಣಿಯಲ್ಲಿ, ಅರಳೀಕಟ್ಟೆ ಓಣಿಯಲ್ಲಿ ಕಲ್ಲು ತೂರಾಟ, ಬಾಟಲಿ ತೂರಾಟ ಹಾಗೂ ಮೊದಲೇ ತಯಾರಿಸಿದ. ಸುಟ್ಟ ಬಲ್ಬ್‌ಗಳಲ್ಲಿ ಆಸಿಡ್ ಹಾಕಿದ್ದನ್ನು ಸಹ ತೂರಿದ್ದಾರೆ. ಕೆಲ ಮನೆಗಳಲ್ಲಿ ಹೆಂಗಸರ ಮೇಲೆ ಕೈ ಮಾಡಿ ಎಳೆದಾಡಿದ್ದಾರೆ. ಇದಕ್ಕೆ ಪೋಲೀಸರು ಜಾಗ್ರತರಾಗಿ ಕ್ರಮವಹಿಸಿದ್ದೇವೆ ಎಂದು ತೋರಿದ ಕೊಡಲು ಅಮಾಯಕರ ಮೇಲೆ ಗುಂಡು ಹಾರಿಸಿದ್ದಾರೆ.
ಶ್ರೀಮತಿ ಸಾವಿತ್ರಿಬಾಯಿ ಬದ್ದಿ ವಯಸ್ಸು:45 (ತೊಡೆಗೆ), ಕಾಶೀನಾಥ ರತನ ವಯಸ್ಸು:20 (ಬುಜಕ್ಕೆ) ಎಂಬಿಬ್ಬರು ಗುಂಡಿನಿಂದ ಗಾಯಗೊಂಡಿದ್ದಾರೆ.

ಮಾರನೇ ದಿನ -. ಮದ್ಯಾಹ್ನ ಆಟೋ ಮೊಬಾಯಿಲ್ ಅಂಗಡಿಯಲ್ಲಿ ಕೆಲಸ ಮಾಡುವ 22 ವಯಸ್ಸಿನ ಯುವಕ ಸಂತೋಷ ಕಡಗದ ಎಂಬುವನು ಕೆಲಸ ಮುಗಿಸಿ ಮನೆಗೆ ತೆರಳುವಾಗ ಇಸ್ಲಾಂಪೂರ ಓಣಿಯಲ್ಲಿ ಒಂದು ಕೋಮಿನ ಗುಂಪು ಮಾರಣಾಂತಿಕ ಹಲ್ಲೆ ನಡೆಸಿ ಚರಂಡಿಯಲ್ಲಿ ಎಸೆದಿದ್ದರು. ನಂತರ ಆತನಿಗೆ ಆಸ್ಪತ್ರೆಗೆ ಸಾಗಿಸುವಾಗ ಅತೀ ರಕ್ತಸ್ರಾವದಿಂದ ಮೃತಪಟ್ಟಿದ್ದಾನೆ.

ಅಕ್ಟೋಬರ್8ರ ಮಂಗಳವಾರ ಸಾಯಂಕಾಲ 6 ಘಂಟೆಯಿಂದ ಮರುದಿನ 8 ಘಂಟೆಯವರೆಗೆ ಹಾಗೂ ಅದೇ ದಿನ 9 ಘಂಟೆಯಿಂದ ಅಕ್ಟೋಬರ್‌ರವರೆಗೆ ಕರ್ಫ್ಯೂ ವಿಧಿಸಲಾಗಿದೆ.

ಇವೆಲ್ಲಕ್ಕಿಂತ ಮುಖ್ಯವಾಗಿ ಸರ್ಕಾರ ಮತ್ತು ಪೋಲೀಸ್ ಇಲಾಖೆ ದುಷ್ಕರ್ಮಿಗಳನ್ನು ಬಂಧಿಸಿ ಉಗ್ರ ಶಿಕ್ಷೆ ವಿಧಿಸುವಲ್ಲಿ ವಹಿಸುವಲ್ಲಿ ವಿಫಲವಾಗಿದೆ.

ಯಾರು ಸಮಾಜ ಘಾತಕರು, ಯಾರು ಅಮಾಯಕರು ಎಂದು ಪೋಲೀಸ್ ಇಲಾಖೆಗೆ ಗೊತ್ತಿದ್ದರೂ ಸಹ ಪೂರ್ವ ಯೋಜಿತ ಅನಾಹುತ ತಪ್ಪಿಸುವ ಕ್ರಮ ಜರುಗಿಸುತ್ತಿಲ್ಲ.

ಘಟನೆಗೆ ಸಂಬಂಧಿಸಿದಂತೆ 17 ಜನ ಮುಸ್ಲಿಂರನ್ನು ಬಂಧಿಸಿದರೆ ಅಷ್ಟೇ ಸಮ ಬಲ ಸಂಖ್ಯೆ ಹಿಂದೂಗಳನ್ನು ಬಂಧಿಸುವಂತೆ ಶಾಸಕರು ಯಶಸ್ವಿಯಾಗಿದ್ದಾರೆ. ಒಟ್ಟು ಬಂಧಿತರು 34 ಜನ ಆದರೆ ಇವರೆಲ್ಲರೂ ಅಮಾಯಕರು, ಸಮಾಜಘಾತುಕ ರೌಡಿಗಳು ರಾಜಾರೋಷವಾಗಿ ಇದ್ದಾರೆ. ಇನ್ನೂ ಅನೇಕ ಧಾರ್ಮಿಕ ಸ್ಥಳಗಳಲ್ಲಿ ಮಾರಕಾಸ್ತ್ರಗಳನ್ನು ಸಂಗ್ರಹವಿದೆ ಎಂದೂ ಪೋಲೀಸರಿಗೆ ಎರಡೂ ವಾರ ಮುಂಚೆ ಗೊತ್ತಿದ್ದರೂ ಅದರ ಮೇಲೆ ಕ್ರಮ ಮಾತ್ರ ವಹಿಸುತ್ತಿಲ್ಲ.

ರಾಜ್ಯ ಬರಗಾಲದಿಂದ ತತ್ತರಿಸುತ್ತಿದ್ದರೆ ಹುಬ್ಬಳ್ಳಿಯ ಪಟ್ಟಭದ್ರ ಹಿತಾಸಕ್ತಿಗಳು ಸ್ವಾರ್ಥಕ್ಕಾಗಿ ಕೋಮುಗಲಭೆಯಲ್ಲಿ ನಿರತರಾಗಿದ್ದಾರೆ.

- ಡಿ.ಹೆ.ಗೋಂದಕರ

ದ.ಕ. ಜಿಲ್ಲಾ ರೈತರ ಸಮಾವೇಶ

ಆಗಸ್ಟ್ 8 ರಂದು ರ ಆದಿತ್ಯವಾರದಂದು ಬೆಳ್ತಂಗಡಿ ಸಮಾಜ ಮಂದಿರದಲ್ಲಿ ದ.ಕ. ಜಿಲ್ಲಾ ರೈತ ಸಂಘದ ಸಮ್ಮೇಳನವು ಬೆಳ್ತಂಗಡಿ ತಾಲೂಕು ರೈತ ಸಂಘದ ಅಧ್ಯಕ್ಷರಾದ ಕಾಂ। ರುಕ್ಮಯ್ಯ ಭಂಡಾರಿಯವರು ಧ್ವಜಾರೋಹಣ ಮಾಡುವುದರೊಂದಿಗೆ ಪ್ರಾರಂಭವಾಯಿತು. ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ। ಕೆ.ಆರ್. ಶ್ರೀಯಾನ್‌ರವರು ಉದ್ಘಾಟನಾ ಭಾಷಣ ಮಾಡುತ್ತಾ ಕೇಂದ್ರ ಹಾಗೂ ರಾಜ್ಯದ ಕಾಂಗ್ರೆಸ್ ಸರಕಾರಗಳು ಅನುಸರಿಸುತ್ತಿರುವ ಜನವಿರೋಧಿ ನೀತಿಯಿಂದಾಗಿ ರೈತ ಸಮುದಾಯವು ಕಂಗೆಟ್ಟಿದ್ದು ರೈತರ ಉಳಿವಿಗಾಗಿ ಸರಕಾರ ಮಧ್ಯೆ ಪ್ರವೇಶಿಸಬೇಕಾದುದು ಅತೀ ಅಗತ್ಯ. ಸರಕಾರ ಎಚ್ಚೆತ್ತು ರೈತರ ನೆರವಿಗೆ ಬಾರದಿದ್ದರೆ ರೈತರು ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ ಬೀದಿಗಿಳಿದು ಹೋರಾಡಲು ಸಿದ್ಧರಾಗಿರಬೇಕು ಎಂದು ಕರೆ ನೀಡಿದರು.

ಜಿಲ್ಲಾ ರೈತ ಸಂಘದ ಜೊತೆ ಕಾರ್ಯದರ್ಶಿ ಕಾಂ. ಬಿ.ಎಂ. ಭಟ್ ಸ್ವಾಗತಿಸಿದರು. ನಂತರ ಅಗಲಿದ ಮುಖಂಡರುಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾಂ। ಅಬ್ರಹಾಂ ಕರ್ಕಡರು ವಹಿಸಿದರು. ಕಾರ್ಯದರ್ಶಿಯವರು ಕಳೆದ 3 ವರ್ಷದ ವರದಿಯನ್ನು ಸಮಾವೇಶದಲ್ಲಿ ಮಂಡಿಸಿದರು. ವರದಿಯ ಮೇಲೆ ಚರ್ಚೆ ನಡೆಸಿ ವರದಿಯನ್ನು ಅಂಗೀಕಾರಗೊಳಿಸಿದ ನಂತರ ಈ ಕೆಳಗಿನ ಠರಾವುಗಳನ್ನು ಸಭೆಯುಲ್ಲಿ ಮಂಡಿಸಲಾಯಿತು.

1.ದ.ಕ. ಜಿಲ್ಲೆಯಲ್ಲಿ ಮಂಗಳೂರು ಮೆಸ್ಕಂ ಕಛೇರಿಯ ಎದುರುಗಡೆ ವಿದ್ಯುತ್ ದರ ಏರಿಸಿದುದನ್ನು ಮತ್ತು ರಾಜ್ಯದ ಕಾಂಗ್ರೆಸ್ ಸರಕಾರ ವಿದ್ಯುತ್ತನ್ನು ಖಾಸಗೀಕರಣಗೊಳಿಸಿದ ವಿರುದ್ಧ, ಈ ನೀತಿಯನ್ನು ಕೈಬಿಡಬೇಕೆಂದು ಒತ್ತಾಯಿಸುವ ಹೋರಾಟ ನಡೆಸಬೇಕೆಂದು ತೀರ್ಮಾನಿಸಲಾಯಿತು.

2.ಹಾಸನ - ಮಂಗಳೂರು ರೈಲು ಸಂಚಾರವನ್ನು ಕೇಂದ್ರ ಸರಕಾರ ಕೂಡಲೇ ಪ್ರಾರಂಭಿಸಬೇಕು.

3.ಬೆಲೆ ಕುಸಿತದಿಂದಾಗಿ ರೈತರು ಕಂಗೆಟ್ಟಿರುವಾಗ. ರೈತರು ಬ್ಯಾಂಕಿನಿಂದ ಪಡೆದ ಸಾಲದ ಬಡ್ಡಿ ಮನ್ನಾ ಮಾಡಬೇಕು ಹಾಗೂ ಹೊಸ ಸಾಲವನ್ನು ದೀರ್ಘಾವದಿ ಸಾಲವನ್ನಾಗಿ ಪರಿವರ್ತಿಸಬೇಕು.

4.ಕೃಷಿ ಕೂಲಿಗಾರರಿಗೆ ನಿವೃತ್ತಿ ವೇತನ ಜಾರಿಮಾಡಬೇಕು.

5.ತೋಡುಗಳಲ್ಲಿ ತುಂಬಿದ ಹೈಗೆ ತೆಗೆದು ರೈತರಿಗೆ ಕೃಷಿ ಮಾಡಲು ಅನುಕೂಲಮಾಡಿಕೊಡಬೇಕು.

6.ಸಿ.ಆರ್. ಝಡ್. ಕಾನೂನನ್ನು ಈ ಕೂಡಲೇ ಕೈಬಿಡಬೇಕು.

7.ರೈತರ ಬೆಳೆಗೆ ಬೆಲೆ ಕುಸಿದಿರುವ ಈ ಸಂದರ್ಭದಲ್ಲಿ ಅಡಿಕೆ, ಭತ್ತ ಕಾಫಿ, ರಬ್ಬರ್ ಮುಂತಾದವುಗಳಿಗೆ ಬೆಂಬಲ ಬೆಲೆ ನೀಡಬೇಕು.

8.ಸರಕಾರಿ ಜಾಗದಲ್ಲಿ ರೈತರು ಸ್ವಾದೀನಪಡಿಸಿದ್ದನ್ನು ಕೃಷಿ ಮಾಡಿ ಮನೆ ಕಟ್ಟಿರುವ ರೈತರಿಗೆ ಸಕ್ರಮ ಮಾಡಬೇಕು. ಅದರಲ್ಲಿ ಇದೀಗ ಕಾಂಗ್ರೆಸ್ ಸರಕಾರದ ಆಡಳಿತಾವಧಿಯಲ್ಲಿ ಸರಕಾರಿ ಭೂಮಿಯು ರೆವೆನ್ಯೂ ಇಲಾಖೆಗೆ ಸೇರಿದ್ದು ಎಂದು ನೆಪ ಮಾಡಿ ಬಡವರನ್ನು ಒದ್ದೋಡಿಸುವುದನ್ನು ಕೂಡಲೇ ನಿಲ್ಲಿಸಬೇಕು. ಆ ಸ್ಥಳವನ್ನು ಸಕ್ರಮ ಮಾಡಬೇಕೆಂದು ಒತ್ತಾಯಿಸಲಾಯಿತು. ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು 10. ಕಿ.ಮೀ. ಹೊರಗಡೆ ಮನೆ ಕಟ್ಟಿ ಕೃಷಿ ಮಾಡಿದವರಿಗೆ ಸರಕಾರದ ಈಗಿನ ಕಾನೂನಿನಿಂದಾಗಿ ವಂಚನೆಯಾಗಿದೆ. ಈ ಕಾನೂನನ್ನು ತಿದ್ದುಪಡಿ ಮಾಡಿ ಗಡಿ ಗುರುತಿಸದೆ, ಸಕ್ರಮಗೊಳಿಸಬೇಕು.

9.ಇತ್ತೀಚೆಗೆ ಟ್ರಿಬ್ಯುನಲ್‌ಗೆ ಅರ್ಜಿ ಸಲ್ಲಿಸಲ್ಪಟ್ಟ ಬಡ ರೈತ ಕೃಷಿ ಕಾರ್ಮಿಕರಿಗೆ ಅರ್ಜಿ ಇತ್ಯರ್ಥಗೊಳಿಸದೆ ಇರುವುದರಿಂದ ಅದನ್ನು ತಕ್ಷಣ ತನಿಖೆಗೆ ತೆಗೆದುಕೊಂಡು ಬಡ ಕಾರ್ಮಿಕರಿಗೆ ಹಕ್ಕು ಪತ್ರ ನೀಡಬೇಕು.

ಈ ಮೇಲೆ ಒತ್ತಾಯಿಸಲಾದ ಬೇಡಿಕೆಗಳನ್ನು ಪಡೆಯಲು ಜಿಲ್ಲೆಯ ರೈತರ ಕೃಷಿ ಕೂಲಿಗಾರರನ್ನು ರಾಜ್ಯ ಕಾಂಗ್ರೆಸ್ ಸರಕಾರದ ಜನವಿರೋಧಿ ನೀತಿಯನ್ನು ಮತ್ತು ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಭೂನ್ಯಾಯ ಮಂಡಳಿಯು ಭೂ ಮಾಲಿಕರಿಗೆ ಅನುಕೂಲ ಮಾಡಿಕೊಟ್ಟಿರುವ ಸರಕಾರದ ನೀತಿಯನ್ನು ವಿರೋಧಿಸಲು ತೀವ್ರ ರೀತಿಯ ಹೋರಾಟ ನಡೆಸಲು ಮುಂದಾಗಬೇಕೆಂದು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಕರೆ ನೀಡಿದರು.

ಸಿ.ಐ.ಟಿ.ಯುವಿನ ಜಿಲ್ಲಾ ಉಪಾಧ್ಯಕ್ಷ ಯು.ಬಿ. ಲೋಕಯ್ಯರವರು ಶುಭ ಸಂದೇಶ ನೀಡಿ ಮಾತನಾಡಿದರು. ಹಾಗೆಯೇ ಬಂಟ್ವಾಳ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಸಂಜೀವ ಬಂಗೇರ ಶುಭ ಕೋರಿದರು.

ನೂತನ ಪದಾಧಿಕಾರಿಗಳು

ಅಧ್ಯಕ್ಷರಾಗಿ : ಅಬ್ರಹಾಂ ಕರ್ಕಡ

ಉಪಾಧ್ಯಕ್ಷರಾಗಿ :ಎಸ್.ಎಮ್. ಹರಿದಾಸ್, ಪಾಲ್ ಡಿ.ಸೋಜಾ ಯು.ಬಿ. ಲೋಕಯ್ಯ, ಕಾಂ. ಬಿ. ವಾಸುಗಟ್ಟಿ

ಪ್ರಧಾನ ಕಾರ್ಯದರ್ಶಿ :ರಾಮಚಂದ್ರ ಉಚ್ಚಿಲ್

ಜೊತೆ ಕಾರ್ಯದರ್ಶಿಗಳು: ಬಿ.ಎಂ. ಭಟ್, ಶ್ರೀನಿವಾಸ ಆಳ್ವ, ಯಾದವ ಶೆಟ್ಟಿ

ಕೋಶಾಧಿಕಾರಿ:ಕೃಷ್ಣಪ್ಪ ಕೊಂಚಾಡಿ

ಹೀಗೆ 29 ಜನರ ನೂತನ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು. ಉಪಾಧ್ಯಕ್ಷರಾದ ಕಾಂ। ಎಸ್.ಎಂ. ಹರಿದಾಸ್ ಧನ್ಯವಾದ ಹೇಳಿದರು.

ವಿದ್ಯುತ್ ದರ ಏರಿಕೆ ಮೂಲಕ ಖಾಸಗೀಕರಣಕ್ಕೆ ಸಿದ್ಧತೆ, ಸರಕಾರದ ನೀತಿಗೆ ಖಂಡನೆ

ದ.ಕ. ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಬೃಹತ್ ಪ್ರದರ್ಶನ

ವಿದ್ಯುತ್ ದರಗಳನ್ನು ವಿಪರೀತವಾಗಿ ಏರಿಸಲು ಅನುಮತಿ ನೀಡಿರುವ ಕರ್ನಾಟಕ ಸರಕಾರದ ತೀರ್ಮಾನದ ವಿರುದ್ಧ ಆಗಸ್ಟ್ 27 ರಂದು ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಯವರ ಕಛೇರಿ ಮುಂದೆ 2 ಸಾವಿರಕ್ಕೂ ಹೆಚ್ಚು ರೈತ ಕೃಷಿ ಕೂಲಿಕಾರರ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಹಿರಿಯ ರೈತ ಕಾರ್ಮಿಕ ಮುಖಂಡ ಮತ್ತು ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಕೆ. ಆರ್.ಶ್ರೀಯಾನ್‌ರವರು ಮಾತನಾಡುತ್ತಾ ಎಸ್.ಎಮ್.ಕೃಷ್ಣ ಸರಕಾರವು ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಹಾಕಲು ಮತ್ತು ರೈತರ ಮೇಲೆ ದರ ಏರಿಕೆಯ ಹೊರೆಯನ್ನು ಹೊರಲು ತೀರ್ಮಾನಿಸುವ ಮೂಲಕ ತನ್ನ ರೈತ ವಿರೋಧಿ ನೀತಿಯನ್ನು ಪ್ರದರ್ಶಿಸಿದೆ ಎಂದು ಟೀಕಿಸಿದರು.

ಈಗಾಗಲೇ ಕೃಷಿ ರಂಗದ ಬಿಕ್ಕಟ್ಟಿನಿಂದಾಗಿ ಹತಾಶರಾಗಿ ಆತ್ಮಹತ್ಯೆಗೆ ಶರಣಾಗುತ್ತಿರುವ ರೈತರು ವಿದ್ಯುತ್ ದರ ಏರಿಕೆಯ ಹೊಸ ದಾಳಿಯ ಪರವಾಗಿ ಹತಾಶರಾಗಿದ್ದಾರೆ. ವಿಶ್ವಬ್ಯಾಂಕಿನ ನಿರ್ದೇಶನಕ್ಕೆ ಶರಣಾಗಿ ಬಿ.ಜೆ.ಪಿ ನೇತೃತ್ವದ ಎನ್.ಡಿ.ಎ ಕೇಂದ್ರ ಸರಕಾರವು ಹೊಸ ವಿದ್ಯುತ್ ನೀತಿಯನ್ನು ರೂಪಿಸಿದ್ದು ಕರ್ನಾಟಕ ಸರಕಾರವು ಅದನ್ನು ಅತೀ ಉತ್ಸಾಹದಿಂದ ಜಾರಿ ಮಾಡುವ ಮೂಲಕ ವಿದ್ಯುತ್ ರಂಗವನ್ನು ಖಾಸಗೀ ಬಂಡವಾಳಗಾರರ ಮತ್ತು ಬಹುರಾಷ್ಟ್ರೀಯ ಬಂಡವಾಳಗಾರರ ಸುಲಿಗೆಗೆ ತೆರೆದಿಡುವ ಹುನ್ನಾರದ ಅಂಗವಾಗಿ ಹೊಸ ವಿದ್ಯುತ್ ವಿತರಣ ಸಂಸ್ಥೆಗಳನ್ನು ರಚಿಸಲಾಗಿದೆ ಎಂಧರು. ಜಿಲ್ಲೆಯ ಎಲ್ಲಾ ವಿಭಾಗಗಳ ಜನರು ಸರಕಾರದ ಜನ ವಿರೋಧಿ ವಿದ್ಯುತ್ ನೀತಿಯ ವಿರುದ್ಧ ಸಮರಶೀಲ ಹೋರಾಟಗಳಿಗೆ ಸಿದ್ಧರಾಗಬೇಕೆಂದು ಕರೆ ನೀಡಿದರು.

ಸಿ.ಐ.ಟಿ.ಯು ಮುಂದಾಳು ಬಿ.ಮಾಧವನವರು ಮಾತನಾಡುತ್ತಾ ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಮೂಲಕ ಮುಂದಿನ ದಿನಗಳಲ್ಲಿ ವಿದ್ಯುತ್‌ಚ್ಛಕ್ತಿಯ ಮೇಲಿನ ಸಬ್ಸಿಡಿಗಳನ್ನು ರದ್ದು ಮಾಡಿ ರೈತರ ಮೇಲೆ ಅಗಾಧ ಪ್ರಮಾಣದ ಹೊರೆ ಹೊರಿಸುವ ಹುನ್ನಾರ ನಡೆಯುತ್ತಿದೆಯೆಂದು ಟೀಕಿಸಿದರು. ಬೃಹತ್ ಪ್ರಮಾಣದ ವಿದ್ಯುತ್ ಸೋರಿಕೆಯನ್ನು ತಡೆಗಟ್ಟಲು ವಿಫಲವಾದ ಸರಕಾರವು ವಿದ್ಯುತ್ ದರ ಏರಿಕೆಯ ಮೂಲಕ ಎಲ್ಲಾ ವಿಭಾಗಗಳ ಜನರನ್ನು ಶೋಷಣೆ ಮಾಡುತ್ತಿದೆ ಎಂದರು.

ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್, ಅಧ್ಯಕ್ಷ ಅಬ್ರಹಾಂ ಕರ್ಕಡರು ಮಾತನಾಡಿದರು.

ಯು:ಬಿ.ಲೋಕಯ್ಯನವರು ವಂದಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಬಿ.ಎಂ.ಭಟ್ಟ, ಹರಿದಾಸ, ಯಾದವ ಶೆಟ್ಟಿ, ಬಿ.ವಾಸು ಗಟ್ಟಿ, ಪಾಲಿ ಡಿ ಸೋಜ, ಮಂಜಪ್ಪ ಕೆ, ಕೃಷ್ಣಪ್ಪ ಕೊಂಚಾಡಿ, ಶ್ರೀನಿವಾಸ ಆಳ್ವ ಉಡುಪಿ ಜಿಲ್ಲೆಯಿಂದ ಡೇವಿಡ ಕರ್ಕಡ, ದಾಸ್ ಭಂಡಾರಿ ಮೊದಲಾದವರು ವಹಿಸಿದರು. ಜಿಲ್ಲೆಯ ಎಲ್ಲಾ ಕಡೆಯಿಂದ ಜನರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದರು

ಕೊಡಗು: ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡದ ಕಾಂಗ್ರೆಸ್ ಸರಕಾರ

ಗುಜರಾತಿನ ಅಕ್ಷರಧಾಮ ನಾರಾಯಣ ಸ್ವಾಮಿ ಮಂದಿರಕ್ಕೆ ನುಗ್ಗಿ ಭಯೋತ್ಪಾದಕರು ನಡೆಸಿದ ಧಾಳಿಯ ವಿರುದ್ಧ ಚಡ್ಡಿ ಪರಿವಾರ ರಾಷ್ಟ್ರವ್ಯಾಪಿ ಬಂದ್‌ಗೆ ಕರೆ ನೀಡಿತ್ತು. ಬಾಹ್ಯ ಭಯೋತ್ಪಾದಕರ ವಿರುದ್ಧ ದೇಶಿ ಭಯೋತ್ಪಾದಕರು ನೀಡಿದ್ದ ಬಂದ್ ಕರೆ ಇದಾಗಿತ್ತು.

ಇದಕ್ಕೊಂದು ನಿದರ್ಶನವೆಂಬಂತೆ ಕೊಡಿಗೆಯಲ್ಲಿ ನಡೆದ ಘಟನೆ. ಅಲ್ಲಿ ಚಡ್ಡಿ ಪರಿವಾರ ಟೈರುಗಳನ್ನು ಸುಟ್ಟು, ಮರಗಳನ್ನು ಕಡಿದು ಕಲ್ಲುಗಳನ್ನು ರಸ್ತೆಗಿಟ್ಟು ತೊಂದರೆ ಮಾಡುತ್ತಿದ್ದುದರ ವಿರುದ್ಧ ಪೋಲೀಸರು ಕಾರ್ಯಾಚರಣೆ ಮಾಡಿ ಲಘು ಲಾಠಿ ಪ್ರಹಾರ ಮಾಡಿ ಚದುರಿಸಿದರು. ಆಗ ಭಾಗಧ್ವಾಜಕ್ಕೆ ಪೋಲೀಸರು ಅಪಮಾನ ಮಾಡಿದರೆಂದು ಆರೋಪಿಸಿ, ಕುಶಾಲನಗರದಿಂದ ಒಂದೆರೆಡು ಲಾರಿಯಲ್ಲಿ ಜನ ತುಂಬಿಸಿಕೊಂಡು ಕೊಡಿಗೆಯತ್ತ ತೆರುಳುವಾಗಿ ಈ ಗುಂಪು ಕುಶಾಲನಗರದ ಮಸೀದಿಯ ಮೇಲೆ ಹಾಗೂ ಯುವ ಕಾಂಗ್ರೆಸ್ಸಿನ ಪ್ರ.ಕಾರ್ಯದರ್ಶಿ ತನ್ವೀರ್ ಅಹಮ್ಮದ್ ಎಂಬವರ ನಿವಾಸದ ಮೇಲೆ ಕಲ್ಲೆಸಿದಿದ್ದರು. ಆದರೆ ಮುಸ್ಲಿಮರು ಇದಕ್ಕೆ ಪ್ರತಿಕ್ರಿಯಿಸಲಿಲ್ಲ. ಉದ್ರೇಕಗೊಳ್ಳಲೂ ಇಲ್ಲ.

ಈ ಚಡ್ಡಿಗಳ ಪಡೆಯಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಅರುಣ್‌ಕುಮಾರ್ ಹಿಂಬಾಲಕರೇ ತುಂಬಿಕೊಂಡಿದ್ದರೂ, ತನ್ನ ಹಿಂಬಾಲಕರು ತನ್ವೀರ್ ಮನೆಯ ಮೇಲಿನ ಧಾಳಿ ನುಂಗಲಾರದ ತುತ್ತಾಗಿತ್ತು ಅರುಣ್‌ಕುಮಾರ್‌ಗೆ. ಆದ್ದರಿಂದ ಕಾಂಗ್ರೆಸ್ ಪ್ರಮುಖ ನರಸಿಂಹ ಮೂರ್ತಿ, ಚಿಕ್ಕಣ್ಣರೊಂದಿಗೆ ಸೇರಿ ಕುಶಾಲನಗರ ಠಾಣೆಗೆ ಮನಸ್ಸಿಲ್ಲದ ಮನಸ್ಸಿನಲ್ಲಿ ತೆರಳಿ ಪುಕಾರು ನೀಡಿದ ನಾಟಕವಾಡಿದರು.

ಜಿಲೆಯ ರಕ್ಷಣೆಯ ಸಂಪೂರ್ಣ ಜವಾಬ್ದಾರಿಯನ್ನು ಸಂಘ ಪರಿವಾರಕ್ಕೆ ಒಪ್ಪಿಸಿದ್ದ ಜಿಲ್ಲೆಯ ಪೋಲೀಸ್ ಇಲಾಖೆ ದೂರು ಸ್ವೀಕರಿಸಿದೆ. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ದೂರು ಸ್ವೀಕರಿಸಿದರೆ ಪರಿಸ್ಥಿತಿ ಬಿಗಡಾಯಿಸಲಾಗುವುದು ಎಂದು ಹೇಳಿ ಕಳುಹಿಸಿದರು. ತಮ್ಮ ಪಕ್ಷದ ಸರಕಾರವೇ ಇದ್ದರೂ ದೂರು ದಾಖಲಿಸಲು ಯಾವುದೇ ಪ್ರಯತ್ನ ನಡೆಸದೇ ಕಾಂಗ್ರೆಸ್ಸಿಗರು ಹಿಂದಕ್ಕೆ ಬಂದರು. ರೋಗಿ ಬಯಸಿದ್ದು, ವೈದ್ಯ ಹೇಳಿದ್ದೂ ಒಂದೇ ಆಗಿತ್ತು.

ತಮಗೆ ಅನ್ಯಾಯವಾದರೂ ಅದನ್ನು ಲೆಕ್ಕಿಸದ ಅಲ್ಪಸಂಖ್ಯಾತರು ಶುಕ್ರವಾರದಂದು ತಮ್ಮ ಪ್ರಾರ್ಥನೆ ಕಳೆದ ನಂತರ ಮಸೀದಿಗಳಿಂದ ಹೊರಕ್ಕೆ ಬಂದು ಶಾಂತ ಮೆರವಣಿಗೆ ನಡೆಸಿ ಸರ್ಕಲ್‌ನಲ್ಲಿ ಪರ್ವೆಜ್ ಮುಷಾರಫ್ ಪ್ರತಿಕೃತಿ ದಹನ ಮಾಡಿದರು. ಈ ರೀತಿ ಅಪೂರ್ವ ಸಾಮಾಜಿಕ ಕಳಕಳಿ ವ್ಯಕ್ತಪಡಿಸಿದುದು ಅಲ್ಪಸಂಖ್ಯಾತರು. ಇಲ್ಲಿ ವಿಚಿತ್ರವೆಂದರೆ ಚಡ್ಡಿಗಳ ಎಲ್ಲಾ ಮಂಗನಾಟಕ್ಕೂ ಬೆಂಬಲ ನೀಡಿದ ಪೋಲೀಸರು ಅಲ್ಪಸಂಖ್ಯಾತರ ಈ ಮೆರವಣಿಗೆಗೆ ಸಾಕಷ್ಟು ತೊಂದರೆ ನೀಡಿದರು. ಧ್ವನಿವರ್ಧಕಕ್ಕೆ ಅನುಮತಿ ನೀಡಲಿಲ್ಲ. ಮೆರವಣಿಗೆ ನಡೆಸಲು ಕೂಡ ತಕರಾರು ಮಾಡಿದರು.

ಇವರೊಂದಿಗೆ ಸೇರಿಕೊಂಡ ಕವಲ ಕಾಂಗ್ರೆಸ್ಸಿಗರು ಕೂಡ ಇದನ್ನು ತಡೆಯಲು ಪ್ರಯತ್ನ ನಡೆಸಿದರೂ ಅದು ಯಶಸ್ವಿಯಾಗಲಿಲ್ಲ. ಅಲ್ಪಸಂಖ್ಯಾತರ ಈ ಪ್ರತಿಭಟನೆ ಕಾಂಗ್ರೆಸ್ಸಿಗರು ಹ್ಯಾಪು ಮೊರೆ ಹಾಕುವಂತೆ ಮಾಡಿತ್ತು.



ಪೈಶಾಚಿಕ ಫ್ಯಾಸಿಸ್ಟ್ ಅಜೆಂಡಾ-ಬಂಡವಾಳ ಹಿಂತೆಗೆತ - ಮೋಸದ ಮಾತುಗಳು

ಇತ್ತೀಚಿನ ದಿನಗಳಲ್ಲಿ ಫ್ಯಾಸಿಸ್ಟಿಕ್ ಖಾವಿಪಡೆಯ ಎರಡು ವಿಚಾರಗಳು ಸ್ಪಷ್ಟತೆ ಬೇಕಾದವರಿಗೆ ಸ್ಪಷ್ಟವಾಗತೊಡಗಿವೆ. ಮೊದಲನೆಯದಾಗಿ, ಗುಜರಾತಿನ ಸರ್ಕಾರಿ ಪ್ರಾಯೋಜಿತ ಜನಾಂಗ ಹತ್ಯೆಯನ್ನು ಕೈಗೊಂಡ ನರೇಂದ್ರ ಮೋದಿಯವರು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಗುಜರಾತಿನ ಚುನಾವಣೆಯಲ್ಲಿ ಬಿಜೆಪಿಯನ್ನು ಮುನ್ನಡೆಸುತ್ತಾರೆ ಎಂದು ಗೃಹಸಚಿವ ಎಲ್.ಕೆ.ಅಡ್ವಾಣಿಯವರು ಘೋಷಿಸಿರುವುದು. ಎರಡನೆಯದಾಗಿ ವಾಜಪೇಯಿ ಸರ್ಕಾರ ಕೈಗೊಂಡಿರುವ ಬಂಡವಾಳ ಹಿಂತೆಗೆತ ನೀತಿಗೆ



ಸಂಬಂಧಿಸಿ ಅವರು ಆಡುತ್ತಿರುವ ಒಗಟಿನ ವಂಚನೆ.

ಮೊದಲನೆಯದಾಗಿ ಬಂಡವಾಳ ಹಿಂತೆಗೆತಕ್ಕೆ ಸಂಬಂಧಿಸಿ ವಿರೋಧವೆಂಬ ಬೊಗಳೆ ಬಿಡುತ್ತಿರುವ ರಕ್ಷಣಾಮಂತ್ರಿ ಜಾರ್ಜ್ ಫರ್ನಾಂಡೀಸ್, ಆರ್‌ಎಸ್‌ಎಸ್ ಮತ್ತವರ ಅಂಗವಾದ ಸ್ವದೇಶಿ ಜಾಗರಣ ಮಂಚ್‌ನ ವಿಷಯವನ್ನು ತೆಗೆದುಕೊಳ್ಳೋಣ. ಮೂರು ವರ್ಷಗಳಿಗೂ ಹೆಚ್ಚು ಸಮಯ ಈ ಸಂಘಟನೆಗಳು ಮತ್ತು ವ್ಯಕ್ತಿಗಳು ವಿರೋಧ ಪಕ್ಷಗಳ ಅಭಿಪ್ರಾಯಗಳಿಗೆ ಕಿವಿಗೊಡದೆ ಭಾರತದ ಸಂಪತ್ತನ್ನು ಕೊಳ್ಳೆ ಹೊಡೆಯಲು ಬಂಡವಾಳ ಹಿಂತೆಗೆತದ ಹೆಸರಿನಲ್ಲಿ ಅವಕಾಶ ಕೊಟ್ಟರು. ಆದರೆ ದಿಢೀರನೇ ಈ ಕ್ರಮಕ್ಕೆ ಈಗ ವಿರೋಧ ವ್ಯಕ್ತಪಡಿಸುತ್ತಿರುವುದಾದರೂ ಏಕೆ? ಬಂಡವಾಳ ಹಿಂತೆಗೆತದ ಮಂತ್ರಿಯವರ ಮಾತುಗಳನ್ನು ನಂಬಬಹುದಾದರೆ ಈ ವಿರೋಧವು ವ್ಯಾಪಾರಿ ವಲಯದ ಒಂದು ಹುಸಿ ಕದನ. ಮತ್ತೂ ಮುಂದುವರೆದು ಈತ ಹೇಳುವುದೇನೆಂದರೆ ಅವರ ಸಂಪುಟ ಸಹೋದ್ಯೋಗಿಗಳು ಎನ್‌ಡಿಎ ಜೊತೆಗಿರುವುದಕ್ಕಿಂತ ಹೆಚ್ಚಾಗಿ ಅವರ ವ್ಯಾಪಾರಿ ಯಜಮಾನರುಗಳ ಜೊತೆಯಲ್ಲಿದ್ದಾರೆ.

ಆದರೆ ಇದಕ್ಕೆ ವ್ಯತಿರಿಕ್ತವಾಗಿ ರಕ್ಷಣಾ ಮಂತ್ರಿಗಳು, ಪೆಟ್ರೋಲಿಯಂ ವಲಯದಲ್ಲಿ ದೊಡ್ಡ ಖಾಸಗಿ ಏಕಸ್ವಾಮ್ಯಗಳು ಮೂಡಿಬರುವುದನ್ನು ತಡೆಯಲು ನಾನಿದನ್ನು ವಿರೋಧಿಸುತ್ತಿದ್ದೇನೆ ಎಂದು ಹೇಳುತ್ತಾರೆ. ಹೆಚ್‌ಪಿಸಿಎಲ್ ಮತ್ತು ಬಿಪಿಸಿಎಲ್‌ಗಳನ್ನು ಪೆಟ್ರೋಲಿಯಂ ವಲಯದಲ್ಲಿ ಶಕ್ತಿಶಾಲಿಯಾಗಿರುವ ವ್ಯಾಪಾರಿಕುಳಗಳಿಗೆ ವರ್ಗಾಯಿಸಿ ಆ ವ್ಯಕ್ತಿಗಳನ್ನು ಆಯಕಟ್ಟಿನ ಪಾಲುದಾರನ್ನಾಗಿಸಿಕೊಳ್ಳಬಾರದು ಎಂಬುದು ಜಾರ್ಜ್ ಫರ್ನಾಂಡಿಸರ ವಾದ. ಆದರೆ ಐಪಿಸಿಐಯನ್ನು ರಿಲೆಯನ್ಸ್ ಕಂಪನಿಗೆ ವಹಿಸಿಕೊಡುವಾಗ ಇವರೇಕೆ ಮೌನವಾಗಿದ್ದರು? ಎಂಬ ಪ್ರಶ್ನೆ ಕೇಳಬೇಕಿದೆ. ಈ ಕ್ರಮವು ದೊಡ್ಡ ಏಕಸ್ವಾಮ್ಯವನ್ನು ಸೃಷ್ಟಿಸುವುದಿಲ್ಲವೇ? ಎಂದು ಕೇಳಬೇಕು. ಏಕಸ್ವಾಮ್ಯವನ್ನು ಮುರಿಯಲು ಮತ್ತು ಸ್ಪರ್ಧೆಯನ್ನು ಹೆಚ್ಚಿಸಲು ಬಂಡವಾಳ ಹಿಂತೆಗೆತ ಕ್ರಮಗಳನ್ನು ಅನುಸರಿಸಲಾಗುತ್ತಿದೆ ಎಂಬ ವಾಜಪೇಯಿಯವರ ಮಾತುಗಳನ್ನು ನಿರಾಕರಿಸಿದಂತಾಗುವುದಿಲ್ಲವೇ? ಐಪಿಸಿಎಲ್ ನ ಮಾರಾಟಕ್ಕೆ ಮೌನ ಸಮ್ಮತಿ ಸೂಚಿಸದ ಜಾರ್ಜ್ ಫರ್ನಾಂಡೀಸ್‌ರಿಗೆ ಬಿಪಿಸಿಎಲ್ ಮತ್ತು ಹೆಚ್‌ಪಿಸಿಎಲ್ ನ್ನು ಮಾರಾಟ ಮಾಡುವುದನ್ನು ವಿರೋಧಿಸಲು ಯಾವ ನೈತಿಕ ಹಕ್ಕಿದೆ?

ಸ್ಪಷ್ಟವಾಗಿ ಹೇಳುವುದಾದರೆ ಇವೆಲ್ಲ ಕಾರಣಗಳೇ ಅಲ್ಲ. ಕಳೆದ ಮೂರು ವರ್ಷಗಳಿಂದ ವಾಜಪೇಯಿ ಸರ್ಕಾರ ಅನುಸರಿಸಿದ ನೀತಿಗಳು ಜನರಿಗೆ ಭಾರಿ ಸಂಕಷ್ಟಗಳನ್ನು ತಂದಿದೆ. ಇದರಿಂದ ಜನರಲ್ಲಿ ಅಸಹನೆ ಬೆಳೆಯುತ್ತಿದೆ. ಇದನ್ನು ಮನವರಿಕೆ ಮಾಡಿಕೊಂಡು ಈಗ ದಿಢೀರೆಂದು ವಿರೋಧದ ನಾಟಕ ಮಾಡುತ್ತಿದ್ದಾರೆ. ಆಳುವ ಸರ್ಕಾರದ ವಿರುದ್ಧ ಜನರ ಆಕ್ರೋಶ ಮಡುಗಟ್ಟುತ್ತಿದೆ ಎಂಬ ಭಯ ಇವರನ್ನು ಕಾಡತೊಡಗಿದೆ. ಆದ್ದರಿಂದ ಮುಂಬರುವ ವಿಧಾನಸಭೆ ಮತ್ತು ಲೋಕಸಭೆಯ ಸರಣಿ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಈವಿಚಾರವನ್ನು ಎದುರಿಸುವುದು ಅವರಿಗೆ ಬೇಕಾಗಿದೆ. ಆದ್ದರಿಂದ ಜನರನ್ನು ವಂಚಿಸುವುದು ಮತ್ತು ಅವರ ಸಿಟ್ಟನ್ನು ಬೇರೆ ಕಡೆಗೆ ತಿರುಗಿಸುವುದು ಆಳುವಕೂಟಕ್ಕೆ ಅಗತ್ಯವಾಗಿದೆ. ಆದ್ದರಿಂದಲೇ ಬಂಡವಾಳ ಹಿಂತೆಗೆತಕ್ಕೆ ವಿರುದ್ಧದ ಈ ನಾಟಕ ಈಗ ಆರಂಭವಾಗಿದೆ. ಕಳೆದ ದಿನಗಳಲ್ಲಿ ಈ ನೀತಿಗಳನ್ನು ನಿರಂತರವಾಗಿ ವಿರೋಧಿಸುತ್ತಾ ಬಂದ ಮತ್ತು ಮುಂದೂ ವಿರೋಧಿಸುವ ಸಿಪಿಐ(ಎಂ) ಮತ್ತು ಎಡಪಕ್ಷಗಳನ್ನು ಗುರಿಯಾಗಿಸುವುದು ರಕ್ಷಣಾಮಂತ್ರಿಗಳ ಇಂಗಿತವಾಗಿದೆ.

ಫ್ಯಾಸಿಸ್ಟ್ ಶಕ್ತಿಗಳು ಜನರನ್ನು ದಾರಿ ತಪ್ಪಿಸಲು ಹೇಗೆ ವಿರೋಧ ಪಕ್ಷಗಳ ಸ್ಥಾನವನ್ನು ಆಕ್ರಮಿಸುತ್ತವೆ ಎಂಬುದರ ಅತ್ಯುತ್ತಮ ಉದಾಹರಣೆಯಾಗಿದೆ. ಹಲವಾರು ತಜ್ಞರು ಹೇಳಿರುವಂತೆ ಫ್ಯಾಸಿಸ್ಟ್ ಶಕ್ತಿಗಳು ಯಾವಾಗಲೂ ಚರ್ಚೆಯ ಎರಡೂ

ಸೀತಾರಾಂ ಯೆಚೂರಿ

ಬದಿಗಳಲ್ಲಿ ಇರುತ್ತವೆ. ಫ್ಯಾಸಿಸ್ಟರು ತಮ್ಮ ಆಡಳಿತದ ವಿರುದ್ಧವಿರುವ ಅಭಿಪ್ರಾಯವನ್ನು ವಿರೋಧಿ ಶಕ್ತಿಗಳು ಕ್ರೋಢೀಕರಿಸಿಕೊಳ್ಳದಂತೆ ತಡೆಯಲು ಈ ಆಟ ಆಡುತ್ತವೆ. ದಿಮಿತ್ರೊವ್ ಹೇಳಿರುವ ಹಾಗೆ 'ಬಂಡವಾಳಶಾಹಿಯ ಅತ್ಯಂತ ಪ್ರತಿಗಾಮಿ ವಿಭಾಗದ ಹಿತಾಸಕ್ತಿಗನುಗುಣವಾಗಿ ಫ್ಯಾಸಿಸಂ ಜನತೆಯ ಅತೃಪ್ತಿಯನ್ನು ವಿಚ್ಛೇದಿಸುತ್ತದೆ'. ಮುಂದುವರೆದು 'ಫ್ಯಾಸಿಸಂ ಸಾಮ್ರಾಜ್ಯಶಾಹಿಯ ಹಿತಾಸಕ್ತಿಗನುಗುಣವಾಗಿ ಕೆಲಸ ಮಾಡುತ್ತದೆ. ಆದರೆ ಜನತೆಯ ಹಿತರಕ್ಷಕನಂತೆ ವರ್ತಿಸಿ ಜನರನ್ನು ವಂಚಿಸಿ ರಾಷ್ಟ್ರೀಯ ಭಾವನೆಗಳನ್ನು ಕೆಣಕುತ್ತದೆ'.




ಕೃಪೆ: ದಿ ಹಿಂದು

ಭಾರತದ ಆರ್ಥಿಕತೆಯ ಆರೋಗ್ಯವೇ ಶಿಥಿಲಾವಸ್ಥೆಯಲ್ಲಿದೆ. ಇದು ಈಗಾಗಲೇ ಈ ಸರ್ಕಾರದ ನೀತಿಗಳಿಂದ ತೀವ್ರ ಸಂಕಟ ಅನುಭವಿಸುತ್ತಿರುವ ಜನರನ್ನು ಮತ್ತಷ್ಟು ಹಿಂಡುತ್ತದೆ ಮತ್ತು ತೀವ್ರ ಬರವು ಹಸಿವಿನಿಂದ ಸಾವಿಗೆ ಮತ್ತು ಆತ್ಮಹತ್ಯೆಗಳಿಗೆ ದಾರಿ ಮಾಡಿಕೊಡುತ್ತದೆ. ಸತತ ಎರಡು ವರ್ಷಗಳಲ್ಲಿ ಉದ್ಯೋಗಗಳು ನಾಶವಾಗಿವೆ. ಕೈಗಾರಿಕೆ ಸ್ಥಗಿತತೆ ಕಂಡಿವೆ. ಜಾಗತಿಕ ಆರ್ಥಿಕ ಹಿಂಜರಿತವು ಹೆಚ್ಚಿದಂತೆ ಕಾಣುತ್ತಿದ್ದ ಮಾಹಿತಿ ತಂತ್ರಜ್ಞಾನ ಕ್ಷೇತ್ರವನ್ನು ತಿರುವು ಮುರುವು ಗೊಳಿಸುತ್ತಿದೆ. ಈ ಸರ್ಕಾರವು ಸಾಮ್ರಾಜ್ಯಶಾಹಿಗಳು ಮತ್ತು ದೇಶೀಯ ದೊಡ್ಡ ಬಂಡವಾಳಿದಾರರ ಹಿತಾಸಕ್ತಿಗಳಿಗೆ ಕೆಲಸ ಮಾಡುತ್ತಿದೆ. ಆದರೆ ಈ ನೀತಿಗಳು ಜನರಿಗೆ ಮತ್ತಷ್ಟು ಸಂಕಷ್ಟಗಳನ್ನು ತರದೆ ಬೇರೆ ದಾರಿಯಿಲ್ಲ.

ಈ ಸನ್ನಿವೇಶದಲ್ಲಿ ತನ್ನ ನೆಲೆಯನ್ನು ಸ್ವಲ್ಪವಾದರೂ ಉಳಿಸಿಕೊಳ್ಳಲು ಬಿಜೆಪಿ ನೇತೃತ್ವದ ಎನ್‌ಡಿಎ ಜನರ ಗಮನಕ್ಕೆ ಬರುವಂತೆ ವಿರೋಧ ವ್ಯಕ್ತಪಡಿಸಬೇಕಿದೆ. ಬಂಡವಾಳ ಹಿಂತೆಗೆತಕ್ಕೆ ಸಂಬಂಧಿಸಿದ ನಾಟಕದ ನಿಜವಾದ ಉದ್ದೇಶ ಇದು.


ಜನರ ಹೆಚ್ಚುತ್ತಿರುವ ಆಕ್ರೋಶವನ್ನು ದಿಕ್ಕುತಪ್ಪಿಸಲು ಕೋಮು ವಿಭಜನೆಯನ್ನು ತೀವ್ರಗೊಳಿಸುವುದು ಖಾವಿಪಡೆಗಳಿಗೆ ಅನಿವಾರ್ಯವಾಗಿದೆ. ನರೇಂದ್ರಮೋದಿಯವರನ್ನು ಬೆಂಬಲಿಸುವ ಅಡ್ವಾಣಿಯವರನ್ನು ಈ ದೃಷ್ಟಿಕೋನ ದಿಂದಲೇ ನೋಡಬೇಕು. ಮುಂದಿನ ಚುನಾವಣೆಗಳಿಗೂ ಗುಜರಾತ್ ಫಲಿತಾಂಶ ಮಾದರಿಯಾಲಿದೆ ಎಂದೂ ಅಡ್ವಾಣಿ ಹೇಳುತ್ತಾರೆಂದರೆ ಅವರು ಇಡೀ ಭಾರತವನ್ನು 'ಮೋದೀಕರಣ' ಮಾಡಲು ಹೊರಟಿದ್ದಾರೆ.

ಆದರೆ ಭಾರತವನ್ನುಳಿಸಲು ಈ ಶಕ್ತಿಗಳನ್ನು ಏನಾದರೂ ಮಾಡಿ ಸೋಲಿಸಲೇಬೇಕಾಗಿದೆ.



ಕಾಶ್ಮೀರ ಚುನಾವಣೆ

ಯುದ್ಧೋನ್ಮಾದೀ ಅವಕಾಶವಾದೀ ರಾಜಕೀಯಕ್ಕೆ ಜನತೆಯ ಉತ್ತರ



ಜಮ್ಮು ಕಾಶ್ಮೀರದಲ್ಲಿ ನಡೆದ ಚುನಾವಣೆ ಪ್ರಜಾಪ್ರಭುತ್ವ ಮೌಲ್ಯಗಳಿಗೆ ದೊರೆತ ಜಯವಾಗಿದೆ. ಚುನಾವಣಾ ಪ್ರಕ್ರಿಯೆಗೆ ಅಡ್ಡಿಯುಂಟು ಮಾಡಲು ಪಾಕಿಸ್ತಾನೀ ಬೆಂಬಲಿತ ಉಗ್ರಗಾಮಿಗಳು ನಿರಂತರ ಹಿಂಸಾಕೃತ್ಯಗಳನ್ನೆಸಗಿದ್ದರೂ ಕೂಡ 44 ಪ್ರತಿಶತ ಮತ ಚಲಾವಣೆ ನಡೆದಿರುವುದು ಕಾಶ್ಮೀರದ ಜನರು ಪ್ರಜಾಪ್ರಭುತ್ತ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳ ಬಯಸುತ್ತಾರೆಂಬುದನ್ನು ಸಿದ್ಧಪಡಿಸಿ ತೋರಿಸಿದೆ. ಕಾಶ್ಮೀರದ ಜನ ಏನನ್ನು ಬಯಸುತ್ತಾರೆ ಎಂಬುದನ್ನು ಈ ಚುನಾವಣೆಯ ಮೂಲಕ ದೇಶದ ಜನರಿಗೆ ತೋರಿಸಿದ್ದಾರಲ್ಲದೆ ಮುಂದಿನ ಸರ್ಕಾರ ರಚಿಸುವವರು ಜನರ ಅಭಿಪ್ರಾಯಗಳಿಗೆ ಮನ್ನಣೆ ಕೊಡಲೇಬೇಕೆಂಬ ಪರಿಸ್ಥಿತಿಯನ್ನು ನಿರ್ಮಿಸಿದ್ದಾರೆ.

ಸಂವಿಧಾನದ 370ನೇ ಕಲಮಿನಡಿಯಲ್ಲಿ ರಾಜ್ಯಕ್ಕೆ ಸ್ವಾಯತ್ತತೆಯನ್ನು ನೀಡಬೇಕೆನ್ನುವ ಅಲ್ಲಿನ ಪ್ರಸ್ತಾಪದ ಕುರಿತು ಮಾತುಕತೆಗಳು ನಡೆದಿದ್ದರೆ ಚುನಾವಣಾ ಪ್ರಕ್ರಿಯೆಯಲ್ಲಿ ಜನರ ಪಾಲ್ಗೊಳ್ಳುವಿಕೆ ಇನ್ನೂ ಹೆಚ್ಚಾಗುತ್ತಿತ್ತು.

ಆಡಳಿತಾರೂಢ ನ್ಯಾಷನಲ್ ಕಾನ್‌ಫರೆನ್ಸ್ ಪಕ್ಷ ಕೇವಲ 28 ಸ್ಥಾನಗಳಿಸುವ ಮೂಲಕ ನೆಲ ಕಚ್ಚಿದೆ. ಒಮರ್ ಅಬ್ದುಲ್ಲಾ ಸೋಲುಂಡಿದ್ದಾರೆ. ಏಕೈಕ ದೊಡ್ಡ ಪಕ್ಷವಾದರೂ ಕೂಡ ತನ್ನ ಅವಕಾಶವಾದೀ ರಾಜಕೀಯಕ್ಕಾಗಿ ಕೇಂದ್ರದಲ್ಲಿ ಕೋಮುವಾದಿ ಬಿ.ಜೆ.ಪಿ ಜೊತೆ ಕೈಜೋಡಿಸಿದ್ದಕ್ಕೆ ಪಕ್ಷ ಪ್ರತಿಫಲವನ್ನು ಜನ ತೋರಿಸಿಕೊಟ್ಟಿದ್ದಾರೆ. ಫರೂಕ್ ಅಬ್ದುಲ್ಲಾರ ದುರಾಡಳಿತ ಕೂಡ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಕಾಶ್ಮೀರವನ್ನು 3 ಭಾಗವಾಗಿ ವಿಂಗಡಿಸ ಹೊರಟ ಸಂಘ ಪರಿವಾರದ ಕುಯುಕ್ತಿಗೆ ಉತ್ತರವೆನ್ನುವಂತೆ ಮತ್ತು ಕೋಮುವಾದೀ ರಾಜಕೀಯಕ್ಕೆ ಸವಾಲೆಸೆಯುವಂತೆ ಬಿ.ಜೆ.ಪಿಯನ್ನು ಕಾಶ್ಮೀರದ ಜನ ಮೂಲೆಗೆ ತಳ್ಳಿದ್ದಾರೆ. ಬಹಳ ಸ್ಥಾನಗಳನ್ನು ಗೆದ್ದು ಬಿಡುವ ಭರವಸೆ ಹೊಂದಿದ್ದ ಜಮ್ಮುವಿನಲ್ಲಿ ಕೂಡ ಬಿ.ಜೆ.ಪಿ ತರಗೆಲೆಯಾಗಿ ಹೋಗಿದೆ. ಹಿಂದೆ ಇದ್ದ 8 ಸ್ಥಾನಗಳನ್ನು ಕಳೆದುಕೊಂಡಿದ್ದಲ್ಲದೇ ಕೇವಲ ಒಂದೇ ಒಂದು ಸ್ಥಾನಗಳಿಸಿಕೊಳ್ಳುವಲ್ಲಿ ಸಫಲವಾಗಿದೆ. ಅಲೆ ಬಿದ್ದರೂ ಮೀಸೆಗೆ ಮಣ್ಣಿಲ್ಲ ಎಂಬ ಗಾದೆ ಮಾತಿನಂತೆ ಭಾರತೀಯ ಜನತಾ ಪಕ್ಷದ ಮುಖಂಡರು "ಇದು ಭಾರತಕ್ಕೆ ಸಿಕ್ಕ ಜಯ" ಎಂದಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳ ರಕ್ಷಣೆಗೆ, ಉಗ್ರವಾದೀ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುತ್ತಿರುವ ಸಿಪಿಐ(ಎಂ) ಪಕ್ಷ ಇರುವ ಸ್ಥಾನವನ್ನು ಉಳಿಸಿಕೊಂಡಿದ್ದಲ್ಲದೆ ಮತ್ತೊಂದು ಸ್ಥಾನವನ್ನು ಗಳಿಸಿಕೊಳ್ಳುವ ಮೂಲಕ ಮುನ್ನಡೆಯನ್ನು ಸಾಧಿಸಿದೆ.

ಕಾಂಗ್ರೆಸ್ 20 ಸ್ಥಾನಗಳನ್ನೂ, ಮುಫ್ತಿ ಮಹ್ಮದ್ ಸಯಿದ್ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷ 16 ಸ್ಥಾನಗಳನ್ನೂ ಗಳಿಸಿದೆ. ಅಷ್ಟೇನು ಮುಖ್ಯವಾಹಿನಿಯಲ್ಲಿಲ್ಲದ ಪಕ್ಷವಾಗಿದ್ದ ಜೆ.ಡಿ.ಪಿ ಇಂದು ಒಂದು ನಿರ್ಣಾಯಕ ಪಾತ್ರ ವಹಿಸುವ ಸ್ಥಿತಿಯಲ್ಲಿದೆ.ಇದರ ಜೊತೆ ಬಿ.ಎಸ್.ಪಿ 1, ಸ್ವತಂತ್ರರು 13, ಜೆ.ಕೆ.ಎನ್.ಪಿ.ಪಿ - 4, ಇತರರು 4 ಆರಿಸಿ ಬಂದಿದ್ದಾರೆ.

ಈ ಚುನಾವಣೆಯ ನಂತರದಲ್ಲಿ ಮುಂದೆ ಬರುವ ಸರ್ಕಾರದ ಜೊತೆ ಕೇಂದ್ರ ಸರ್ಕಾರ ಸ್ವಾಯತ್ತೆಯ ಪ್ರಸ್ತಾಪದ ಕುರಿತು ಮಾತನಾಡಲೇ ಬೇಕಾಗುತ್ತದೆ ಮತ್ತು ಬಹಳ ಕಾಲದಿಂದ ಇದ್ದ ರಾಜಕೀಯ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ. ಈ ಚುನಾವಣೆಯ ಮೂಲಕ ಪ್ರಜಾಪ್ರಭುತ್ತ ಮೌಲ್ಯಗಳಲ್ಲಿ ತಮಗೆ ಇರುವ ನಂಬಿಕೆಯನ್ನು ಜನ ಪುನರುಚ್ಚರಿಸಿದ್ದಾರಲ್ಲದೆ ಉಗ್ರವಾದಿಗಳಿಗೆ ಸ್ವಲ್ಪ ಎಚ್ಚರಿಕೆಯನ್ನು ನೀಡಿದ್ದಾರೆ.

ಕೃಷ್ಣನ ಕಸರತ್ತು ಕುಚಿ

ಎಸ್.ಎಂ. ಕೃಷ್ಣರ ನೆತ್ತಿಯ ಮೇಲೆ ಈಗ ತಮಿಳುನಾಡು ಹೂಡಿರುವ ಎರಡು ನ್ಯಾಯಾಂಗ ಆರಂಭದಿಂದಲೂ ಕಾರ್ಯ ಸಾದುವಾಗ ಸೂಕ್ತ ನಿಲುಮೆ ತಾಳಿ ಸಮಚಿತ್ತದ ಹೆಜ್ಜೆ ಇಡುವ ಅಕ್ಟೋಬರ್ 24 ರ ಒಳಗೆ ತನ್ನ ಬಲ ಕ್ರೋಡಿಕರಿಸಿಕೊಳ್ಳಲು ಯತ್ನಿಸುತ್ತಿದೆ. ಅಧಿಕಾರ ಕುಚಿ ಸಚಿವರು, ಅಧಿಕಾರಿಗಳ ದಂಡೆ ಅವರನ್ನು ಹಿಂಬಾಲಿಸಿ ಆಡಳಿತ ಯಂತ್ರ ಜನಸಾಮಾನ್ಯನ ಹುಲುಸಾಗಿ ಬೆಳೆಸಲು ಅದರ ಫಲ ಸೆಳೆಯಲು ವಿರೋಧಪಕ್ಷಗಳೂ,ಆಡಳಿತ ಪಕ್ಷದೊಂದ ಜನರ ಹಿತಾಸಕ್ತಿಗೆ ನಿಜವಾದ ಕಾಳಜಿ ಇದೆಯೇ? ಪಾದಯಾತ್ರೆ ಸಾಧಿಸುವುದೇನು? ಅದರತ್ತ ಒಂದು ನೋಟ.

ಮುಖ್ಯಮಂತ್ರಿಗಳು, ಕಾಂಗ್ರೆಸ್ ಅಧ್ಯಕ್ಷರು 'ವಾಕ್' ಮಾಡುತ್ತಿರುವಾಗ ಸಂಪುಟದ ಎಲ್ಲಾ ಸಚಿವರು, ವಿವಿಧ ಸಂಸ್ಥೆಗಳ ಮುಖ್ಯಸ್ಥರು, ಜನಪ್ರತಿನಿಧಿ, ಅಧಿಕಾರಿಗಳು ಆ ತಂಡದಲ್ಲಿ ನೆರೆದಿದ್ದಾರೆ. ಸುತ್ತಮುತ್ತ ಬೀಡುಬಿಟ್ಟಿದ್ದಾರೆ. ವಿಧಾನಸೌಧದಲ್ಲಿ, ಕಛೇರಿಗಳಲ್ಲಿಯೂ ಜನಸಾಮಾನ್ಯರಿಗೆ ಸಿಗುತ್ತಿಲ್ಲ. ಆಡಳಿತ ಗರ ಬಡಿದಂತೆ ನಿಷ್ಕ್ರಿಯಗೊಂಡಿದೆ. ಈಗಾಗಲೇ ಭಿನ್ನಮತೀಯರ ಗದ್ದಲದಲ್ಲಿ, ವೀರಪ್ಪನ್ ಅಪಹರಣದಲ್ಲಿ ರಾಜ್ಯದ ಆಡಳಿತ ಪಾರ್ಶ್ವಪೀಡಿತವಾಗಿ ಕಾಲಹರಣಮಾಡಿದ್ದು ಎಲ್ಲರಿಗೂ ನೆನಪಿದೆ. ಭೀಕರ ಬರದ ಬಗೆಗಾಗಲಿ, ಮು ಗೇಳುತ್ತಿರುವ ಬಾಗಲಕೋಟೆಯ ಜನರ ಬ ಳಾಗಲೀ, ಕಾಡಿನಿಂದ ಕಾಡಿನಲ್ಲೇ ಕೊಳೆಯುತ್ತಿರುವ ನಾಗಪ್ಪನವರ ಬಗೆಗಾಗಲಿ ಕಾಳಜಿ ತೋರಿಸಲು ಸಮಯವೆಲ್ಲಿ? ಕಪಟ ಕೃಷ್ಣನ ಕುರ್ಚಿಯಾತ್ರೆಯಲ್ಲಿ ಪ್ರಸಾದ ನಿರೀಕ್ಷಿಸುವವರ ಪಟ್ಟಿಯೇ ದೊಡ್ಡದಿದೆ.

ಮುಖ್ಯಮಂತ್ರಿ ಕೃಷ್ಣರವರ ಪಾದಯಾತ್ರೆಯೀಗ 12 ರಂದು ಮಂಡ್ಯದಲ್ಲಿ ಬಹಿರಂಗ ಸಭೆ ನಡೆದು ಕಾರು-ಜೀಪ್ ಯಾತ್ರೆಯಾಗಿ 'ಪರಿವರ್ತನೆ' ಗೊಂಡಿದೆ. ಮೂರು ವರುಷ ತುಂಬುತ್ತಿರುವ ಕೃಷ್ಣರವರ ಸರ್ಕಾರದ ಬಡಾಯಿ ಕೊಚ್ಚಿದ ಸಭೆಯೂ ಕೂಡ.

ರಾಜಕೀಯ ದುರ್ಲಭಕ್ಕಾಗಿ ಎಂತಹ ಸ್ಫೂರ್ತಿ!

'ಕಾವೇರಿ ನದಿ ನೀರು ಬಿಡಲಾಗದು' ಅದು ಪ್ರಾಧಿಕಾರದ ಆಜ್ಞೆಯೇ - ಸುಪ್ರಿಂಕೋರ್ಟ್‌ನ ನಿರ್ದೇಶನವೋ. ನಾನೂ 'ಮಣ್ಣಿನ ಮಗ' ಚಳುವಳಿ ನಿರತ ನಿಮ್ಮೊಂದಿಗೆ ಎಂದು ಸಚಿವ ಸಂಪುಟ ಸಭೆ ಮುಗಿಸಿ ಹೊರಬಂದು ಹೇಳಿದ ಕೃಷ್ಣರವರು ಒಕ್ಕೂಟ ವ್ಯವಸ್ಥೆಯ ಸಂವಿಧಾನಿಕ ನೀತಿ ನಿಯಮ ನಿರ್ದೇಶನಗಳೆದುರು ಸಂಘರ್ಷಿಸಲು ಸಿದ್ಧವೆಂದು ಘೋಷಿಸಿದರು. ಅಂದು ಸರ್ವಪಕ್ಷಗಳ ಸಭೆಯೂ ಜರುಗಿತ್ತು.

ಅದೇ ದಿನ 'ಮಧ್ಯರಾತ್ರಿಯಲ್ಲಿ' ಚಳುವಳಿ ನಿರತ ರೈತರತ್ತ ಪಾದಯಾತ್ರೆ ನಡೆಸುವುದಾಗಿ ಏಕಾಏಕಿ ಪ್ರಕಟಿಸಿದರು. ಈ 'ಮಧ್ಯರಾತ್ರಿ' ಕೃಷ್ಣರವರು ಸತತವಾಗಿ ಸರ್ವ ಪಕ್ಷಗಳ ಸಭೆ ನಡೆಸಿ, ವಿವಿಧ ಪಕ್ಷಗಳ ಅಭಿಪ್ರಾಯ ಪಡೆದು, ಸಲಹೆ ಸ್ವೀಕರಿಸಿಯೇ - ಇಲ್ಲದೆಯೇ ಕಾರ್ಯವೆಸಗುತ್ತಿದ್ದು ನಡೆದುಬಂದ ವಿಧಾನವಾಗಿತ್ತು. ಹೀಗೆ 'ಯಾತ್ರೆ'ಯೊಂದನ್ನು ಕೈಗೊಳ್ಳುವ ಕೃಷ್ಣರ ನಿರ್ಧಾರ ವಿರೋಧ ಪಕ್ಷಗಳನ್ನು (ಅವರೊಂದಿಗೆ ಸಹಮತವಿದ್ದವರಿಗೂ) ಕೆರಳಿಸಿತು. ಇದ್ದಕ್ಕಿದ್ದಂತೆ ಕೃಷ್ಣ 'ಕಾವೇರಿಯ ಜಲ ವಿವಾದವನ್ನು ರಾಜಕೀಯವಾಗಿ ಮಧ್ಯರಾತ್ರಿಯಿಂದಲೇ ಅಪಹರಿಸಿ, ದುರ್ಲಾಭ ಗಿಟ್ಟಿಸಿಕೊಳ್ಳುವ ಯತ್ನ ಬಯಲಾಯಿತು. ಮರುದಿನ ಟೀಕೆಗಳ ಸುರಿಮಳೆ ಎದುರಿಸಿದ ಕೃಷ್ಣ ತಮ್ಮದನ್ನು 'ಶಾಂತಿಯಾತ್ರೆ'ಯೆಂದು ಕರೆದುಕೊಂಡರು. ಮತ್ತು ಎಲ್ಲರೂ ಸೇರಬೇಕೆಂದು 'ಆಹ್ವಾನ'ದ ನುಡಿ ತೇಲಿಬಿಟ್ಟರು. ಕಾವೇರಿ ಪ್ರಶ್ನೆಯ ರಾಜಕೀಯ ಎಲ್ಲ ಲಾಭ ತಮಗೇ ಸಿಗಬೇಕೆಂದು ಹುನ್ನಾರದ ಬಗ್ಗೆ ಅನುಮಾನ ಉಳಿಯಲಿಲ್ಲ.

ಇಂದಿನ ಸಂಕಷ್ಟ ಪರಿಸ್ಥಿತಿಯಲ್ಲಿ ಕಾವೇರಿ ಕಣಿವೆಯ ರೈತರ ಮತ್ತು ಕರ್ನಾಟಕದ ಜನತೆಯ ದೀರ್ಘಾವಧಿ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಳ್ಳುವ ಬದಲಾಗಿ, ಆಳುವ ಕಾಂಗ್ರೆಸ್ ಪಕ್ಷದ ರಾಜಕೀಯ ಲಾಭವನ್ನು ಗಮನದಲ್ಲಿರಿಸಿ, ಕಾವೇರಿ ನದಿ ನೀರಿನ ಕುರಿತಾಗಿ ಸರ್ಕಾರದ ನೀತಿಯು ನಿರ್ಧಾರಿತವಾಗಿತ್ತೆಂಬುದು ಸ್ಪಷ್ಟ. ಈ ಹಿಂದೆ ಇತರೆ ವಿರೋಧ ಪಕ್ಷಗಳಿಗಿಂತ ಭಿನ್ನವಾದ, ವಾಸ್ತವಿಕ ಸಲಹೆ, ಸೂಚನೆಗಳನ್ನು ಸಿಪಿಐ(ಎಂ) ನೀಡುತ್ತಾ ಬಂದಾಗ ಸಭೆಯಲ್ಲಿಯೂ ಮತ್ತು



ಖಾಸಗಿಯಾಗಿ ಸ್ವೀಕರಿಸುತ್ತಾ ನಂತರ ಸರ್ಕಾರದ ಮುಂದಿದ್ದ ಪ್ರಾಯೋಗಿಕ ಆಯ್ಕೆಗಳನ್ನು ಧಿಕ್ಕರಿಸುತ್ತಾ ಇಕ್ಕಟ್ಟಿನಿಂದ ಬಿಕ್ಕಟ್ಟಿನತ್ತ ಸಾಗಿದ್ದನ್ನು ನೋಡಿದ್ದೇವೆ. ಮುಖ್ಯಮಂತ್ರಿಗಳ 'ಭಾಜಾಭಜಂತ್ರಿ' ಭರಾಟೆಯ 'ಯಾತ್ರೆ'ಯೇ ಇದನ್ನು ಸಾಬೀತು ಪಡಿಸುತ್ತದೆ.

ಕೃಷ್ಣರ ಈ ಪಾದಯಾತ್ರೆಯನ್ನು ತಡೆಯುವುದಾಗಿ ಬೆದರಿಕೆ ಒಡ್ಡಿದವರು ಅವರದೇ ಪಕ್ಷದ ನಾಯಕ, ಮಾಜಿ ಸಂಸದ ಮಾದೇಗೌಡರು (ವ್ಯಕ್ತಿಗತ ರಾಜಕೀಯ ಸ್ಪರ್ಧೆಯಂತೆ?). ತಲಕಾವೇರಿಯಿಂದ ತಾವು ಒಂದು ಪ್ರತಿ ಜಾಥಾ-ಜನಜಾಗೃತಿ ಅಭಿಯಾನ ಆರಂಭಿಸಿ ತಡೆಯುವುದಾಗಿ ದೇವಗೌಡರಾಗಿಯಾಗಿ ಜನತಾದಳ(ಎಸ್) ನಾಯಕರು ಘೋಷಣೆ, ಜನತಾದಳ(ಯು) ನವರ ಸೋಗಿತೆ,. ದೇವೇಗೌಡರು ಹಾಗೇ ನೋಡಿದರೆ ಮೊದಲಿನಿಂದಲೂ ಸ್ವಲ್ಪವಾದರೂ ನೀರು ಬಿಡಬೇಕಾಗುವುದು ಎಂದು ಒಂದು ಸಮಚಿತ್ತದ ನಿಲುವು ಪ್ರತಿಪಾದಿಸುತ್ತಾ ಬಂದಿದ್ದಾರೆ. ಆದರೆ ರಾಜ್ಯದ ಜನತಾದಳ(ಎಸ್) ಮುಖಂಡರದ್ದು ಬಿಡಲೇಬಾರದು ಎಂಬ ನಿಲುವು. ಅವರಿಗೂ 'ಬಾಚಿ'ಕೊಳ್ಳುವ ಆತುರ. ರೈತ ಸಂಘದ ಕೆ.ಎಸ್.ಪುಟ್ಟಣ್ಣಯ್ಯ, ಬಿಜೆಪಿ... ಎಲ್ಲರೂ ಸ್ಪರ್ಧೆಗೆ ನುಗ್ಗುವವರೆ. ಇದು ಒಂದು ಹಂತದಲ್ಲಿ ತೀವ್ರ ಸಂಘರ್ಷ ನಡೆಯುವ, ಹಿಂಸಾತ್ಮಕ ಸ್ವರೂಪ ತಾಳುವ ಶಂಕೆಯೂ ಉದ್ಭವಿಸಿತ್ತು. ಜನರ



ಭಾವೋದ್ರೇಕ ಕೆರಳಿಸಿ, 'ಸಂಕುಚಿತವಾದದ ಸ್ಪರ್ಧೆ'ಯಲ್ಲಿ ರಾಜಕೀಯ ದುರ್ಲಾಭ ಹೊಡೆಯಲು ಈ ಪಕ್ಷಗಳಲ್ಲಿ ಅದೆಂತಹ ಪೈಪೋಟಿ. ಅತ್ತ ತಮಿಳುನಾಡಿನಲ್ಲಿಯೂ ಇಂತಹದೇ ಸ್ಪರ್ಧೆ.

ನ್ಯಾಯಾಂಗ ನಿಂದನೆಯ ತೂಗುಕತ್ತಿ

ಕೃಷ್ಣರ ಸರ್ಕಾರ ಈಗಾಗಲೇ ಸುಪ್ರೀಂಕೋರ್ಟ್‌ನಲ್ಲಿ ತಮಿಳುನಾಡು ಸರ್ಕಾರ ಹೂಡಿರುವ 'ನ್ಯಾಯಾಂಗ ನಿಂದನೆ' ಯ ಎರಡು ಮೊಕದ್ದಮೆಗಳನ್ನು ಎದುರಿಸುತ್ತಿದೆ. ಈ ಬಗ್ಗೆ 22 ರೊಳಗೆ ಅಫಿಡೆವಿಟ್ ಸಲ್ಲಿಸಬೇಕೆಂದು ನ್ಯಾಯಾಲಯ ಕರ್ನಾಟಕಕ್ಕೆ ನಿರ್ದೇಶನ ನೀಡಿದೆ. 24 ರಂದು ತೀರ್ಪು ನೀಡುವುದಾಗಿ ಪ್ರಕಟಿಸಿದೆ. ಆ ತೀರ್ಪು ಏನಿರಬಹುದು, ಎಂತದ್ದಿರಬಹುದು ಎಂಬ ಕುತೂಹಲವಿದ್ದರೂ,ಅದಕ್ಕೆ ತಕ್ಕ ರೀತಿಯಲ್ಲಿ ವಾದ ಹೂಡಿ, ಪಾರಾಗುವುದಾಗಿ ಕೃಷ್ಣ ಹೇಳಿಕೊಳ್ಳುತ್ತಿದ್ದರೂ, ನ್ಯಾಯಾಂಗ ನಿಂದನೆಯಾಗಿದೆಯೆಂದು ಕೋರ್ಟ್‌ಅಭಿಪ್ರಾಯ ಪಟ್ಟರೆ ರಾಜ್ಯ ಸರ್ಕಾರವನ್ನು ರಾಜೀನಾಮೆ ಇಲ್ಲವೇ ವಜಾ ಆಗಬೇಕಾದ ಸಂಭವದ ಬಗ್ಗೆ ಆತಂಕವಂತು ಇದ್ದೇ ಇದೆ. ಅಷ್ಟರೊಳಗೆ 'ಬಲ' ಕ್ರೋಢೀಕರಿಸಿಕೊಳ್ಳಲು ಕೃಷ್ಣ ಮುಂದಾಗಿದ್ದಾರೆ.

ಭಾರತ ದೇಶ ವಿವಿಧ ರಾಜ್ಯಗಳಿಗೆ ಸಮಾನ ಸ್ಥಾನಮಾನವಿರುವ, 'ಒಕ್ಕೂಟ'ದ ವ್ಯವಸ್ಥೆಯೆಂಬುದು ಸಂವಿಧಾನದ ಅಂಶ. ಅಂದರೆ

ಎಸ್.ಎ



ಸಂಕಷ್ಟ ಅರಿಯಲೋ... ಸಂಭ್ರಮ ಪಡಲೋ..

ಕಾವೇರಿ ನದಿ ನೀರಿನ ಬಿಕ್ಕಟ್ಟು : ಸಿಪಿಐ(ಎಂ) ಪೊಲಿಟ್ ಬ್ಯೂರೋ ಅಕ್ಟೋಬರ್ 7 ರಂದು ನವದೆಹಲಿಯಲ್ಲಿ ನೀಡಿದ ಪತ್ರಿಕಾ ಹೇಳಿಕೆ

ಕಾವೇರಿ ನದಿ ನೀರಿನ ಹಂಚಿಕೆಯ ವಿವಾದವನ್ನು ಬಳಸಿಕೊಂಡು ಕರ್ನಾಟಕ ಮತ್ತು ತಮಿಳುನಾಡಿನ ಜನತೆಯಲ್ಲಿ ಪ್ರಾದೇಶಿಕ ದುರಭಿಮಾನವನ್ನು ಕೆರಳಿಸುವ ಪ್ರಯತ್ನಗಳ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತೀವ್ರ ಆತಂಕವನ್ನು ವ್ಯಕ್ತಪಡಿಸುತ್ತದೆ. ಕಾವೇರಿ ಪ್ರದೇಶದಲ್ಲಿ ಮುಂಗಾರು ಮಳೆಯ ಅಭಾವವು ನೀರಾವರಿ ಹಾಗೂ ಕುಡಿಯುವ ನೀರಿನ ತೀವ್ರ ಕೊರತೆಗೆ ಕಾರಣವಾಗಿದೆ. ಸಂಕಷ್ಟದ ವರ್ಷದಲ್ಲಿ ನೀರನ್ನು ಹಂಚಿಕೊಳ್ಳುವ ಸೂತ್ರದ ಆಧಾರದಲ್ಲಿ ತಮಿಳುನಾಡಿಗೆ ನೀರನ್ನು ಬಿಡುವಂತೆ ಸರ್ವೋಚ್ಚ ನ್ಯಾಯಾಲಯವು ಮತ್ತು ನಂತರ ಕಾವೇರಿ ನದಿ ಪ್ರಾಧಿಕಾರವು ಕರ್ನಾಟಕಕ್ಕೆ ಆದೇಶ ನೀಡಿದವು. ಜಲಾಶಯಗಳಿಗೆ ನೀರಿನ ಹರಿವು ಇಳಿಮುಖವಾಗಿರುವುದರ ಮತ್ತು ರೈತರು ಹಿಂಸಾತ್ಮಕ ಚಳುವಳಿ ನಡೆಸುತ್ತಿರುವುದರ ಕಾರಣ ನೀಡಿ ಕರ್ನಾಟಕ ಸರ್ಕಾರವು ನೀರನ್ನು ಬಿಡಲು ನಿರಾಕರಿಸುತ್ತಿದೆ.

ಇನ್ನೊಂದೆಡೆ, ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಅವರು, ಕರ್ನಾಟಕದ ಎಸ್.ಎಂ.ಕೃಷ್ಣ ಸರ್ಕಾರವು ನೀರು ಬಿಡಲು ನಿರಾಕರಿಸುವುದನ್ನು ಮುಂದುವರೆಸಿದರೆ, ಅದನ್ನು ವಜಾಮಾಡಬೇಕೆಂದು ಒತ್ತಾಯಿಸಿದ್ದಾರೆ. ಪ್ರತಿಕಾರದ ಕ್ರಮವಾಗಿ ಕರ್ನಾಟಕಕ್ಕೆ ವಿದ್ಯುತ್ ನೀಡುವುದನ್ನು ನಿಲುಗಡೆ ಮಾಡಬೇಕೆಂದು ತಮಿಳುನಾಡಿನಲ್ಲಿ ಕೆಲವು ವಿಭಾಗಗಳು ಒತ್ತಾಯಿಸುತ್ತಿವೆ. ಪ್ರಾದೇಶಿಕ ದುರಭಿಮಾನವು ಎರಡೂ ರಾಜ್ಯಗಳಲ್ಲಿ ಆಳವಾಗುತ್ತಿದ್ದು ಬಿಜೆಪಿ ಮತ್ತು ಕಾಂಗ್ರೆಸ್ ಅಂತಹ ಕೆಲವು ರಾಷ್ಟ್ರೀಯ ರಾಜಕೀಯ ಪಕ್ಷಗಳು ವಿರೋದಾಭಾಸದ ಸಮಯಸಾಧಕ ನಿಲುವುಗಳನ್ನು ತೆಗೆದುಕೊಳ್ಳುತ್ತಿರುವುದು ದುರದೃಷ್ಟಕರವಾಗಿದೆ.

ಸರ್ವೋಚ್ಚ ನ್ಯಾಯಾಲಯ ಮತ್ತು ಕಾವೇರಿ ನದಿ ಪ್ರಾಧಿಕಾರದ ನಿರ್ದೇಶನಗಳ ಹೊರತಾಗಿಯೂ ನೀರನ್ನು ಬಿಡುವುದಿಲ್ಲ ಎಂಬ ಕರ್ನಾಟಕ ಸರ್ಕಾರದ ನಿಲುಮೆಯು ನಮ್ಮ ದೇಶದ ಒಕ್ಕೂಟ ವ್ಯವಸ್ಥೆಯ ಮೇಲೆ ಗಂಭೀರ ಸ್ವರೂಪದ ಪರಿಣಾಮವನ್ನು ಬಿರುವಂತಹದ್ದಾಗಿದೆ. ತಮಿಳುನಾಡು ಸರ್ಕಾರವೂ ಸಹ ಕಾವೇರಿ ನದಿ ಪ್ರಾದಿಕಾರದ ಜತೆ ಸಹಕಾರದಿಂದ ವರ್ತಿಸುವ ಮನೋಭಾವನೆಯನ್ನು ಹೊಂದಿದೆ. ಕರ್ನಾಟಕ ಸರ್ಕಾರವು ಸರ್ವೋಚ್ಚ ನ್ಯಾಯಾಲಯದ ಹಾಗೂ ಕಾವೇರಿ ನದಿ ಪ್ರಾಧಿಕಾರದ ನಿರ್ದೇಶನಗಳನ್ನು ಪಾಲಿಸಬೇಕು ಮತ್ತು ತೊಂದರೆಗಳೇನಾದರೂ ಇದ್ದರೆ, ಅವುಗಳನ್ನು ಕಾವೇರಿ ನದಿ ಪ್ರಾಧಿಕಾರದ ಗಮನಕ್ಕೆ ತರಬೇಕು.

ಕಾವೇರಿ ನದಿ ನೀರಿನ ವಿವಾದವನ್ನು ಇತ್ಯರ್ಥಪಡಿಸುವಲ್ಲಿ ತಾನು ಯಶಸ್ವಿಯಾಗಿರುವುದಾಗಿ ವಾಜಪೇಯಿ ಸರ್ಕಾರವು 1998ರಲ್ಲಿ ಹೇಳಿಕೊಂಡದ್ದು ಎಷ್ಟು ಸುಳ್ಳು ಎಂಬುದು ಈಗ ಬಯಲಾಗಿದೆ. ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹೆಚ್ಚುತ್ತಿರುವ ಪ್ರಕ್ಷುಬ್ಧತೆಯನ್ನು ಶಮನಗೊಳಿಸಲು ಕೇಂದ್ರ ಸರ್ಕಾರವು ಕೂಡಲೇ ಕ್ರಮ ಕೈಗೊಂಡು ನೀರಿನ ಹಂಚಿಕೆಯ ವಿವಾದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕು.

ಉಭಯ ರಾಜ್ಯಗಳ ಜನತೆ ಸಂಯಮದಿಂದ ವರ್ತಿಸಿ ಪ್ರಾದೇಶಿಕ ದುರಭಿಮಾನವನ್ನು ಕೆರಳಿಸಲು ಹೊರಟಿರುವ ಅವಕಾಶವಾದಿ ಶಕ್ತಿಗಳ ಆಟಕ್ಕೆ ಬಲಿ ಬೀಳದಂತೆ ಎಚ್ಚರಿಕೆವಹಿಸಬೇಕೆಂದು ಸಿಪಿಐ(ಎಂ) ಪೊಲಿಟ್ ಬ್ಯೂರೊ ಮನವಿ ಮಾಡಿಕೊಂಡಿದೆ.

ಯುದ್ಧೋ ಮುಸಲತ್ತು

ೂಕದ್ದಮೆಗಳು ತೂಕುತ್ತಿವೆ. ಬಿಕ್ಕಟ್ಟಿನ ಎಡವುತ್ತಲೇ ಬಂದ ಕೃಷ್ಣ ಸರ್ಕಾರ ೊಳ್ಳಲು ಹಲವು ಕಸರತ್ತಿಗೆ ಇಳಿದಿದೆ. ಿದು ನಿಂತಿದೆ. ಸಂಕುಚಿತತೆಯ ಬೇಳೆ ಸ್ಪರ್ಧೆಗೆ ಸಜ್ಜಾಗು ನುಗ್ಗಿದೆ. ಇವರಿಗೆ



ೃಗಳು ಒಟ್ಟಾಗಿ ಬಾಳಬೇಕು. ಸಂವಿಧಾನದ ರಚನೆಗಳಿಗೆ ಮಾನ್ಯತೆ ನೀಡಬೇಕು. ಪ್ರೀಂಕೋರ್ಟ್, ಟ್ರಿಬ್ಯೂನಲ್, ಕಾವೇರಿ ಧಿಕಾರ) ಯಾವಾಗಲೂ ಎರಡೂ ರಾಜ್ಯಗಳಿಗೆ ಸೂಕ್ತವೆನಿಸುವಂತಹ ತೀರ್ಪು ಬರಲಿಕ್ಕಿಲ್ಲ. ಇಂತಹ ತೀರ್ಪುಗಳಲ್ಲಿ ಒಂದು ವರ್ಗಕ್ಕೆ ಅತೃಪ್ತಿ ಇರುತ್ತದೆ.

ಇದು ಸಂಘರ್ಷಕ್ಕೆ, ಕನಿಷ್ಟ ಸಹಬಾಳ್ವೆಯ ತತ್ವಕ್ಕೆ ಂಜಲಿಯಿಡುತ್ತದೆ. ಹೇಗೆ? ಎರಡೂ ಗಳಲ್ಲಿಯೂ ದುಡಿವ ಜನತೆಯು ಗಳಿರುವಾಗ.. ಇಂತಹ ಸಂಘರ್ಷ ತಪ್ಪಿದಲ್ಲಿ ೂಟ ವ್ಯವಸ್ಥೆ ಉಳಿಯುತ್ತದೆ. ರಾಷ್ಟ್ರೀಯ ವೆಂದುಕೊಳ್ಳುವ 'ಕಾಂಗ್ರೆಸ್' ಪಕ್ಷ ಇಂದು ವಿಧಾನಾತ್ಮಕ ಸಂಸ್ಥೆ, ತತ್ವಗಳನ್ನು ಧಿಕ್ಕರಿಸಿ ಕುಚಿತವಾದದಲ್ಲಿ ಮುಳುಗೇಳುತ್ತಿರುವುದು, ಕಾರಕ್ಕೆ ಅಂತಹದ್ದನ್ನು ಆಶ್ರಯಿಸುವುದು, ಅದು ುತ್ತಿರುವ ಅವನತಿಯನ್ನು ತೋರಿಸುತ್ತದೆ. ಘಪರಿವಾರವು ಸತತವಾಗಿ ಸಂವಿಧಾನದ ೇಲೆ ಸತತ ದಾಳಿ ನಡೆಸುತ್ತಿರುವಾಗ ಕೃಷ್ಣ ರ್ಕಾರದ ನಿಲುವುಗಳು ಎಂತಹ ಪರಿಣಾಮ ರುತ್ತವೆ ಎಂಬುದನ್ನು ಕೊಂಚವಾದರೂ ೋಚಿಸಿದೆಯೇ? ಇಂತಹುದೇ ಸ್ಥಿತಿಯಲ್ಲಿ ುಳುನಾಡು. ಕರ್ನಾಟಕದಲ್ಲಿ ಸಿನಿಮಾ ಗದವರು, ಟಿ.ವಿ. ಕೇಬಲ್ ಜಾಲದವರು



ಪ್ರಸಾರ ನಿಲ್ಲಿಸುವುದ್ದಾಗಿ ರ‍್ಯಾಲಿ-ಪ್ರತಿ ರ‍್ಯಾಲಿ ನಡೆಸುತ್ತಾ ತಮ್ಮ 'ವ್ಯಾಪಾರಿ ಸ್ಪರ್ಧೆ'ಗಾಗಿ ಈ ಸಂದರ್ಭವನ್ನೇ ಬಳಸುತ್ತಿದ್ದಾರೆ.

ಡೋಲಾಯಮಾನದಲ್ಲಿ ಸಿಪಿಐ

ಭಾರತ ಕಮ್ಯುನಿಸ್ಟ್ ಪಕ್ಷವೂ ಸಹ ಅಂತಹ ಸಂಕುಚಿತವಾದದ ಅಲೆಗೆ ಸಿಗದೇಹೋಗಲಿಲ್ಲ. ಒಂದು ಹನಿ ನೀರು ಬಿಡಲಾಗದೆಂದು ಘೋಷಿಸಿದ ನಿಲುವನ್ನು ಮನದುಂಬಿ ಶ್ಲಾಘಿಸಿತು ಸಿಪಿಐ. ಅತ್ತ ತಮಿಳುನಾಡು ಘಟಕದ ಇನ್ನೊಂದು ನಿಲುವು. ಇನ್ನು ಕೇಂದ್ರ ನಾಯಕತ್ವದ್ದು ಮತ್ತೊಂದು ನಿಲುವು. ನದಿ ನೀರಿನಂತಹ ಪ್ರಶ್ನೆಗಳಲ್ಲಿ ಭೂಮಾಲೀಕ-ಬಂಡವಾಳಗಾರರ ಬೂರ್ಷ್ವಾ ಪಕ್ಷಗಳಂತೆ ನಿಲುವು ತೆಗೆದುಕೊಂಡರೇ ಹೇಗೆ?

ದೀರ್ಘಾವಧಿ ಹಿತದತ್ತ ಗಮನವಿರಲಿ..

ಕರ್ನಾಟಕದ ಮತ್ತು ಕಾವೇರಿ ಕಣಿವೆಯ ರೈತರ ದೀರ್ಘಕಾಲೀನ ಹಿತಗಳಿಗೆ ಹಾನಿಯನ್ನುಂಟು ಮಾಡುತ್ತಿರುವವರೇ ಇಂದು 'ಹೀರೋ' ಗಳಂತೆ 'ಪೋಸು' ಕೊಡುತ್ತಿರುವುದು ವಿಸ್ಮಯಕಾರಿ ಸಂಗತಿಯಾಗಿದೆ. ಅವರು ಕಾವೇರಿ ಕಣಿವೆಯ ರೈತರ ಹಿತಕ್ಕೆ ಮಾತ್ರವಲ್ಲದೆ, ದೇಶದ ಐಕ್ಯತೆ ಮತ್ತು ಒಕ್ಕೂಟ ವ್ಯವಸ್ಥೆಗೆ ತೀವ್ರ ಧಕ್ಕೆ ತರುತ್ತಿದ್ದಾರೆ. ಇದರಿಂದ ಪ್ರಾಂತೀಯವಾದದ ಕಿಚ್ಚು ಹಚ್ಚಲೂ ಕಾರಣವಾಗುತ್ತದೆ. ತಮಿಳುನಾಡು ಮುಖ್ಯಮಂತ್ರಿಯವರ ವರ್ತನೆಯು ಸಹ ಪ್ರಜಾಪ್ರಭುತ್ವದ ಗಡಿಯನ್ನು ಮೀರಿದ್ದು, ಪ್ರಾಂತೀಯ ವಾದಕ್ಕೆ ಕಾರಣವಾಗಿದೆ.

ಕಾವೇರಿ ನದಿ ವಿವಾದದ ಟ್ರಿಬ್ಯುನಲ್ ಇನ್ನು ಕೆಲವೇ ತಿಂಗಳುಗಳಲ್ಲಿ ತನ್ನ ಅಂತಿಮ ವರದಿಯನ್ನು ನೀಡುವುದರಲ್ಲಿದ್ದು, ಕಾವೇರಿ ನದಿ ಪ್ರಾಧಿಕಾರ, ಕೇಂದ್ರ ಸರ್ಕಾರ ಮತ್ತು ಸರ್ವೋಚ್ಚ ನ್ಯಾಯಾಲಯದ ನಿರ್ದೇಶವನ್ನು ಪಾಲಿಸದೆ ಇರುವುದರಿಂದ ಮುಂದೆ ದಶಕಗಳ ಕಾಲ ಕರ್ನಾಟಕಕ್ಕೆ ತೊಂದರೆ ಆಗುವ ಸಂಭವ ಇದೆ. ಎರಡು ರಾಜ್ಯಗಳ ಸರ್ಕಾರಗಳು ಮತ್ತು ಜನತೆ ಸಂಘರ್ಷದಲ್ಲಿರುವಾಗ ಕೇಂದ್ರ ಸರಕಾರದ ನಿಷ್ಕ್ರಿಯತೆಯೂ ಕೂಡ ಖಂಡನಾರ್ಹವಾಗಿದೆ.

ಯಾತ್ರೆ ನಿಲ್ಲಿಸಬೇಕು

ಮುಖ್ಯಮಂತ್ರಿಗಳು ಕೂಡಲೇ ಪಾದಯಾತ್ರೆಯನ್ನು ನಿಲ್ಲಿಸಿ, ಆಡಳಿತ ನಡೆಸುವತ್ತ ಗಮನ ನೀಡಬೇಕೆಂದೂ, ಕಾವೇರಿ ನದಿ ಪ್ರಾಧಿಕಾರದ ಸಭೆಗೆ ಒತ್ತಾಯಿಸಿ, ಹಿಂದಿನ ಆಜ್ಞೆಯ ಮರು ಪರಿಶೀಲನೆಗೆ ಒತ್ತಾಯಿಸಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಒತ್ತಾಯಿದೆ. ಕಾವೇರಿ ನದಿ ಪ್ರಾಧಿಕಾರದ ಸಭೆ ಸೇರಿಸುವಲ್ಲಿ ಸಾಕಷ್ಟು ವಿಳಂಬವಾಗಿರುವುದರಿಂದ ಈಗಾಗಲೇ ಸಾಕಷ್ಟು ಹಾನಿಯಾಗಿದ್ದು, ಈ ಕೂಡಲೇ ಪ್ರಾಧಿಕಾರದ ಸಭೆ ಕರೆಯಬೇಕೆಂದು ಸಿಪಿಐ(ಎಂ) ಪ್ರಧಾನ ಮಂತ್ರಿಯವರನ್ನು ಮತ್ತೆ ಆಗ್ರಹಪಡಿಸಿದೆ.

ಭತ್ತದ ಕಣಜದಲ್ಲೀಗ ತುತ್ತಿಗೂ ಹಾಹಾಕಾರ

ಕಾವೇರಿಯ ಒಂದು ಹನಿ ನೀರನ್ನು ಬಿಡಲಾಗದು ಎಂದು ಎಲ್ಲಿ ಬುಗಿಲೆದ್ದ ಚಳುವಳಿ ಅಲ್ಲಿ ತಮಿಳುನಾಡಿನಲ್ಲಿಯೂ ಭೀಕರ ಬರದ ಹಾವಳಿ. ಭತ್ತದ ಕಣಜವೆಂದೇ ಖ್ಯಾತವಾಗಿರುವ ಕಾವೇರಿ ನದಿ ಹರಿವಿನ ತಂಜಾವೂರು ಪ್ರದೇಶದಲ್ಲಿ ಬರದ ಅಟ್ಟಹಾಸಕ್ಕೆ ದುಡಿವ ಜನ ಜೀವನ ಬಲಿ. ನೀರು ಬಿಡುವುದಿಲ್ಲವೆಂದು ಪಾದಯಾತ್ರೆ, ನೀರು ಬಿಡದಿದ್ದರೆ ವಿದ್ಯುತ್ ಕೊಡುವುದಿಲ್ಲ, ವಿದ್ಯುತ್ ಕೊಡದಿದ್ದರೆ ಸಿನಿಮಾ ಓಡಿಸಲು ಬಿಡುವುದಿಲ್ಲವೆಂದು ವಾದ ಪ್ರತಿವಾದ ಹೂಡಿ ಜನರ ಭಾವೋದ್ರೇಕ ಬಡಿದೆಬ್ಬಿಸಲು ನಾಯಕರು ತೊಡಗಿರುವಾಗ ವಾಸ್ತವತೆಯತ್ತ ಇಣುಕಲು ಅವರಿಗೆ ಸಮಯ ಇದ್ದೀತೆ? ಅತ್ತ ತಮಿಳುನಾಡಿನಲ್ಲಿ ಸ್ಥಿತಿ ಏನಿದೆ ಎಂಬ ಬಗ್ಗೆ ಹರಿಯಲು ಜನರಿಗೆ ತಿಳಿಸಲು ಮನಸ್ಸಿದೆಯೆ? ಪ್ರಜಾಪ್ರಭುತ್ವ ಆಧಾರ ಸ್ಥಭಗಳೆಂದು ಕರೆಯುವ ಪತ್ರಿಕೆ, ಟಿ.ವಿ. ಮಾಧ್ಯಮಗಳು ಪರಿಸ್ಥಿತಿಯ ಚಿತ್ರಣ ನೀಡಲು ಅಂಧಾಭಿಮಾನದ ಆಟದಲ್ಲಿ ತೊಡಗಿದೆ. ಹಸಿವಿನಿಂದಾಗಿ ಬಾಲಕ ಪ್ರಕಾಶಕ ಸಾವು ಏನನ್ನು ಹೇಳುತ್ತದೆ? ವಾಸ್ತವ ಚಿತ್ರಣ ನೀಡುವ ವರದಿ ಇಲ್ಲಿದೆ.

ಈ ಭಾರಿ ಕಾವೇರಿ ಜಲಾಯನ ಪ್ರದೇಶದಲ್ಲಿ ಉಂಟಾಗಿರುವ ಬರ ಪರಿಸ್ಥಿತಿ ಅತ್ಯಂತ ಭೀಕರವಾದುದು. ಕಳೆದ 70 ವರ್ಷಗಳಲ್ಲಿ ಎಂದೂ ಕಂಡರಿಯದ ಬರಗಾಲಕ್ಕೆ ಈ ಪ್ರದೇಶದ ರೈತರು ತುತ್ತಾಗಿದ್ದಾರೆ.

ಪ್ರತಿವರ್ಷ ಸಾಮಾನ್ಯವಾಗಿ 2.05ಲಕ್ಷ ಎಕರೆ ಭೂಮಿಯನ್ನು ವ್ಯವಸಾಯಕ್ಕೆ ಬಳಸಲಾಗುತ್ತಿತ್ತು. ಆದರೆ ಈಗ ಕೇವಲ 50,000 ಎಕರೆ ಭೂಮಿಯನ್ನು ಮಾತ್ರ ವ್ಯವಸಾಯಕ್ಕೆ ಬಳಸಲಾಗಿದೆ. ನೈಋುತ್ಯ ಮಾನ್‌ಸೂನ್ ಮಳೆ ಕೈಕೊಟ್ಟಿದೆ. ಕಾವೇರಿ ನದಿ ನೀರು ಹಂಚಿಕೆ ವಿವಾದ ಹಾಗೂ ನೀರು ಶೇಖರಣೆಯ ಕೊರತೆಯ ಫಲವಾಗಿ ಸುಮಾರು 800 ಕೋಟಿ ರೂ ಬೆಲೆಯ ಬೆಳೆ ನಾಶವಾಗಿದೆ.

ಈ ಒಟ್ಟು ಪರಿಸ್ಥಿತಿಯಿಂದಾಗಿ ಈ ಪ್ರದೇಶದ ಹಳ್ಳಿಗಳಲ್ಲಿ ಗ್ರಾಮೀಣ ಆರ್ಥಿಕತೆಯ ಮೇಲೆ ತೀವ್ರ ದುಷ್ಪರಿಣಾಮ ಉಂಟಾಗಿದೆ. ತಮಿಳುನಾಡಿನ ಬಹುತೇಕ ಜಿಲ್ಲೆಗಳು ಬರಕ್ಕೆ ತುತ್ತಾಗಿದ್ದರೂ "ಭತ್ತದ ಕಣಜವೆಂದೇ ಪ್ರಸಿದ್ಧಿಯಾದ ತಂಜಾವೂರಿನ ಪ್ರದೇಶಗಳೂ ಭೀಕರ ಬರಕ್ಕೆ ಬಲಿಯಾಗಿವೆ.

ಕಳೆದ 3 ತಿಂಗಳಿನಿಂದ ಇಲ್ಲಿಯ ಲಕ್ಷಾಂತರ ಕೃಷಿ ಕೂಲಿಕಾರರಿಗೆ, ತೋಟದ ಕಾರ್ಮಿಕರಿಗೆ ಮಹಿಳೆಯರಿಗೆ ಉದ್ಯೋಗಗಳೇ ಇಲ್ಲವಾಗಿದೆ. ಆದಾಯವೇ ಇಲ್ಲದ ಪರಿಣಾಮವಾಗಿ ಆಹಾರ ಧಾನ್ಯಗಳು ಮಾತ್ರವಲ್ಲ ಕುಡಿಯಲು ನೀರು ಸಹ ಇಲ್ಲದೆ ಹಸಿವು ಎಲ್ಲೆಲ್ಲೂ ತಾಂಡವವಾಡುತ್ತಿದೆ.

ಆದಾಯ ನಷ್ಟಕ್ಕೊಳಗಾದ ತಂಜಾವೂರು ತಾಲೂಕಿನ ಸಾವಿರಾರು ಕುಟುಂಬಗಳು ತೀವ್ರ ಸಂಕಷ್ಟಕ್ಕೆ ಗುರಿಯಾದವು. ಹಲವು ವಾರಗಳಿಂದ ಉದ್ಯೋಗವೇ ಇಲ್ಲದೆ ಜರ್ಜರಿತವಾಗಿದ್ದ ಚಂದ್ರಶೇಖರ್ ಎಂಬ ಬಡಕೂಲಿಕಾರನ ಪತ್ನಿ ರೇಣುಕಾ ಮತ್ತು 5 ಮಕ್ಕಳ ಕುಟುಂಬ ಹಸಿವನ್ನು ತಾಳಲಾರದೆ ಹತ್ತಿರದ ಟೀ ಹೊಟೇಲ್ ಮಾಲೀಕನ ಬಳಿ ಕೆಲಸ ಮಾಡುವುದಾಗಿ ಹೇಳಿ ಟೀ ಮತ್ತು ಬ್ರೆಡ್‌ನ್ನು ಮಕ್ಕಳಿಗೆ ತಂದುಕೊಟ್ಟರು. ಹಲವು ದಿನಗಳಿಂದ ಹಸಿವಿನಿಂದ ಬಳಲಿದ್ದ ಮಕ್ಕಳ ಆರೋಗ್ಯ ಮತ್ತಷ್ಟು ಹದಗೆಟ್ಟಿತು.

ಮಕ್ಕಳು ಶಾಲೆಗೆ ಹೋದರೆ ಮಧ್ಯಾಹ್ನದ ಊಟವಾದರೂ ದೊರೆಯಬಹುದೆಂದು ಚಂದ್ರಶೇಖರ್, ರೇಣುಕಾ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿದರು. ಹಣದ ಸಮಸ್ಯೆಯಿಂದಾಗಿ ಹಲವು ದಿನಗಳಿಂದ ಶಾಲೆಗೆ ಹೋಗಿರದಿದ್ದ ಮಕ್ಕಳು ಶಾಲೆಗೆ ಹೋಗುವಾಗ 7 ವರ್ಷದ ಪ್ರಕಾಶ್ ತಲೆತಿರುಗಿ ಮೈದಾನದಲ್ಲೇ ಬಿದ್ದ. ಇತರರ ಸಹಾಯದಿಂದ ವಾಪಸ್ಸಾದ ಪ್ರಕಾಶ್‌ಗೆ ಆಗಾಗ ಪ್ರಜ್ಞೆ ತಪ್ಪುತ್ತಿತ್ತು. ಇತರೆ ಮಕ್ಕಳ ಪರಿಸ್ಥಿತಿಯೂ ಹಾಗೆಯೇ ಇತ್ತು.

ನೆರೆಹೊರೆಯ ಜನರು ತಲಾ 25 ಪೈಸೆ 50 ಪೈಸೆಯಂತೆ ಸಂಗ್ರಹಿಸಿ 40 ರೂಗಳನ್ನು ಚಂದ್ರಶೇಖರ್ ಕುಟುಂಬಕ್ಕೆ ಕೊಟ್ಟರು. ಕೂಡಲೇ ಮಕ್ಕಳನ್ನು ಮನ್ನಾರ್‌ಗುಡಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಸಮರ್ಪಕ ಚಿಕಿತ್ಸೆಯಿಲ್ಲದೆ, ಆರೈಕೆಯ ಕೊರತೆಯಿಂದಾಗಿ ಮಕ್ಕಳ ಆರೋಗ್ಯ ಉತ್ತಮಗೊಳ್ಳಲಿಲ್ಲ. ಆಸ್ಪತ್ರೆಯಲ್ಲಿ ಯಾವುದೇ ಪ್ರಯೋಜನ ಆಗದೆ ವಾಪಸ್ಸಾದ ನಂತರ ಕಳೆದ ಆಗಸ್ಟ್ 29ರಂದು 7 ವರ್ಷದ ಬಾಲಕ ಪ್ರಕಾಶ್ ಪ್ರಾಣಬಿಟ್ಟ.

ಈ ಘಟನೆಯ ನಂತರ ಅಲ್ಲಿಯ ಆಡಳಿತವು ಕೂಡಲೇ ಕ್ರಮವಹಿಸುವ ಬದಲು ಇಡೀ ಪ್ರಕರಣವನ್ನೇ ಮುಚ್ಚಿಹಾಕುವ ಪ್ರಯತ್ನ ನಡೆಸಿತು. ಜಿಲ್ಲಾಧಿಕಾರಿಗಳು, ತಹಶೀಲ್ದಾರ್, ಡಿ.ಎಸ್.ಪಿ, ರೆವೆನ್ಯೂ ಅಧಿಕಾರಿಗಳೆಲ್ಲರೂ ಇದು ಹಸಿವಿನ ಸಾವು ಎಂಬುದನ್ನು ನಿರಾಕರಿಸಿ ವರದಿ ಸೃಷ್ಟಿಸುವುದರಲ್ಲಿ ತಲೆಕೆಡಿಸಿಕೊಂಡಿದ್ದರು. ಪಡಿತರ ಅಂಗಡಿ ಮೂಲಕ 20 ಕೆ.ಜಿ ಅಕ್ಕಿ ವಿತರಣೆಗೆ ಕ್ರಮ ಕೈಗೊಂಡಿರುವುದಾಗಿ ಹೇಳಿಕೆ ಕೊಟ್ಟರು. ಸಂಪೂರ್ಣ ಕೊಳ್ಳುವ ಶಕ್ತಿಯನ್ನೇ ಕಳೆದುಕೊಂಡಿದ್ದ ಜನರಿಗೆ ಇದು ಯಾವ ಪ್ರಯೋಜನ ನೀಡಲಿಲ್ಲ. 7 ವರ್ಷದ ಬಾಲಕ ಪ್ರಕಾಶ್ ಸಾವಿಗೆ ಆತನ ತೀವ್ರ ಹೊಟ್ಟೆನೋವು, ಅನಾರೋಗ್ಯವೇ ಕಾರಣ ಎಂದು ವರದಿ ಸೃಷ್ಟಿಸಿದರು. ನಿಜ ಸಂಗತಿಯನ್ನು ಮುಚ್ಚಿಹಾಕಲು ಎಲ್ಲ ಅಧಿಕಾರಿಗಳು ಕೈಜೋಡಿಸಿದರೂ ಅಧಿಕಾರಿಗಳ ಈ ಸುಳ್ಳನ್ನು ಬಯಲು ಮಾಡಲು, ಸತ್ಯವನ್ನು ಬೆಳಕಿಗೆ ತರಲು ಅಲ್ಲಿಯ ಎ.ಐ.ಡಿ.ಡಬ್ಲ್ಯು.ಎ ಕಾರ್ಯದರ್ಶಿ ಚಂದ್ರ, ಉಮೇರಿ, ಎಸ್.ಎಫ್.ಐ ನ ಶಣ್ಮುಗಂ ಹಳ್ಳಿಗೆ ಭೇಟಿ ಕೊಟ್ಟು ಘಟನೆಗೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಿದರು. ಅಲ್ಲಿಯ ವಾರ್ಡ್ ಕೌನ್ಸಿಲರ್ ಸೆಲ್ವೇರಿಯವರನ್ನು ಸಂದರ್ಶಿಸಿದರು. ಆಕೆಯ ಪ್ರಕಾರ ಸಾವಿನ ಸುದ್ದಿ ತಿಳಿದೊಡನೆ ಚಂದ್ರಶೇಖರ್ ಮನೆಗೆ ಭೇಟಿಕೊಟ್ಟ ಮನೆಯ ಪಾತ್ರೆಗಳನ್ನೆಲ್ಲ ಹುಡುಕಿದರೂ ಒಂದು ಆಹಾರ ಧಾನ್ಯವೂ ಸಿಗಲಿಲ್ಲ. ಅವರು ಖಚಿತವಾಗಿಯೇ ಹೇಳಿದರು. "ಅನುಮಾನವೇ ಇಲ್ಲ. ಇದು ಹಸಿವಿನ ಸಾವು"


ಎ.ಐ.ಡಿ.ಡಬ್ಲ್ಯು.ಎ ಮತ್ತು ಎಸ್.ಎಫ್.ಐ ನ ಸತ್ಯಶೋಧನ ಸಮಿತಿಯು ಸ್ಥಳೀಯ ಮಹಿಳಾ ಸ್ವಸಹಾಯ ಗುಂಪು ಇತರೆ ಅಲ್ಲಿಯ ನಾಗರೀಕರನ್ನು ಸಂದರ್ಶಿಸಿತು. ಈ ಸಮಿತಿಯು ಸರ್ಕಾರದ.ಅಧಿಕಾರಿಗಳ ಸುಳ್ಳು ವರದಿಯನ್ನು ಬಹಿರಂಗಪಡಿಸಿತು. ಮಾತ್ರವಲ್ಲ ಬರದ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣ ವಿಫಲವಾಗಿದೆ. ಕೂಲಿಕಾರರು, ಮಹಿಳೆಯರು ಮಕ್ಕಳು ಆದಾಯವೇ ಇಲ್ಲದೆ ತೀವ್ರ ಹಸಿವಿಗೆ ತುತ್ತಾಗಿ ಪರಿಸ್ಥಿತಿ ಬದಲಾಯಿಸಿತು.

ಈ ಪರಿಸ್ಥಿತಿಯಲ್ಲಿ ಸಾಮರ್ಥ್ಯವಿದ್ದವರು ಉಳಿದರು, ಸಾಮರ್ಥ್ಯವಿಲ್ಲದ ಬಡ ಪ್ರಕಾಶನಂತವರು ಪ್ರಾಣ ಬಿಟ್ಟರು.

ರಾಜ್ಯದ ಸಿಪಿಐ(ಎಂ) ಮತ್ತು ಇತರೆ ಪ್ರಜಾಸತ್ತಾತ್ಮಕ ಶಕ್ತಿಗಳ ಒತ್ತಾಯದಿಂದಾಗಿ ಕೇಂದ್ರವು ಬಿಡುಗಡೆ ಮಾಡಿದ ಬರಪರಿಹಾರ ನಿಧಿ ಮತ್ತು ಆಹಾರ ಧಾನ್ಯಗಳು ಪರಿಸ್ಥಿತಿಯನ್ನು ಹತೋಟಿಗೆ ತರಲು ಸಹಾಯಕವಾಗಲಿಲ್ಲ.

ಒಟ್ಟಾರೆಯಾಗಿ ಅಮಾಯಕ ಬಾಲಕ ಪ್ರಕಾಶನ ಅಮಾನವೀಯ ಹಸಿವಿನ ಸಾವಿನ ವಿಷಯದಲ್ಲಿ ರಾಜ್ಯ-ಕೇಂದ್ರ ಸರ್ಕಾರಗಳೆರಡೂ ಅಪರಾಧಿಗಳು.

– ಎನ್. ಗುಣಶೇಖರನ್



ಕಥೆ 3

ಒಂದು ಮಂಚದ ಕಥೆ

ಡಾ.ಆರ್.ವಿ.ಭಂಡಾರಿ

ನಾಗೇಶ ಮನೆಕಟ್ಟಿದ, ಮನೆಗೊಂದು ಹಸುವನ್ನೂ ಕಟ್ಟಿದ, ಅವರವ್ವನ ಆಸೆ ಕೈಗೂಡಿಸಿದ, ತನ್ನ ಸಣ್ಣಕ್ಕನ ಮದುವೆಗಾಗಿ ತಾನೂ ಮದುವೆಯಾದ ನಂತರ ಸಂಸಾರ, ಅದರ ತೊಳಲಾಟ ಮುಂದೆ ಓದಿ.

ಆದರೆ ಗಂಡನಿಗಿಂತ ಹೆಚ್ಚು ಕಲಿತವಳೆಂಬ ಜಂಬ ಅವಳದಾಗಿರಲಿಲ್ಲ. ಅಡಿಗೆ ಊಟದಲ್ಲಿ ಚೊಕ್ಕ, ರುಚಿಯಾಗಿ ಮಾಡುತ್ತಿದ್ದಳು. ಮೀನ ಪಳ್ದಿ ಮಾಡುವುದರಲ್ಲೂ ಎತ್ತಿದ ಕೈ. ಪೇಟೆಯವಳಲ್ಲವೆ?

ವಸ್ತ್ರ, ಒಡವೆಗಳನ್ನು ಚೆನ್ನಾಗಿ ಇಡುತ್ತಿದ್ದಳು. ಅವ್ವ ಇರುವವರೆಗೂ ಅವಳನ್ನು ಪ್ರೀತಿಯಿಂದಲೇ ಕಂಡಳು. ಅವ್ವಗೆ ತೀರಾ ಕಾಯಿಲೆಯಾದಾಗ, ಅವಳ ಹೇಲುಚ್ಚೆಯನ್ನು ಸಹ ಬಳಿದಳು.

ನಾನು ಮಲಗುವ ಮನೆಗೆ ಬಂದಾಗ ಒಮ್ಮೊಮ್ಮೆ ಅಸ್ವಸ್ಥನಾಗುತ್ತಿದ್ದೆ. ಅದನ್ನು ರಮಾ ಅರಿಯುತ್ತಿದ್ದಳು. ಅದರ ಕಾರಣ ಕೇಳಿದಾಗ ನನ್ನ 'ಮಂಚದ ಬಾಲ್ಯ'ವನ್ನೆಲ್ಲ ಹೇಳಿದ್ದೆ. ಅವಳಿಗೂ ಕರುಳು ಚುರುಕ್ ಅನ್ನಿಸಿತ್ತು. 'ನೋಡ್ವ, ನಸೀಬ ಇದ್ದರೆ ನಾವೂ ಮಾಡಿಸುವ' ಎಂದಿದ್ದಳು. ಅವಳೂ ಬೇರೆ ಮನೆಯ ಕೆಲಸಕ್ಕೆ ಹೋಗುವುದನ್ನು ರೂಢಿಸಿಕೊಂಡಿದ್ದಳು.

ಮಧ್ಯೆ ಸಣ್ಣಕ್ಕನ ಬಾಣಂತನವನ್ನು ನಾವೇ ಮಾಡಬೇಕಾಯಿತು. ಹೆಣ್ಣುಮಕ್ಕಳ ತೊಡಬಾಳಂತನವನ್ನು ಅಪ್ಪನ ಮನೆಯವರೇ ಮಾಡಬೇಕಂತ, ನನ್ನ ಅವ್ವನ ಆಸೆಯಂತೆ ಪದ್ಧತಿಯನ್ನು ನಾನೇನೂ ರಮನ ಅಪ್ಪನ ಮೇಲೆ ಹೇರಲಿಲ್ಲ.

ಈ ಮಧ್ಯೆ ರಮ ಬಸಿರಾದಳು. ಆದರೆ ಏಳು ತಿಂಗಳಿಗೇ ಇಳಿದುಹೋಯಿತು. ಇದು ಅವ್ವನ ಕಾಯಿಲೆ ಹೆಚ್ಚಿಸಿತು. ಕೈಲಾದ ಮದ್ದನ್ನೆಲ್ಲ ಮಾಡಿಸಿದೆ. ಹಣ ಖರ್ಚಾಯಿತು. ಆದರೆ ಅವ್ವ ತೀರಿಕೊಂಡಳು. ಇದರಿಂದ ರಮಾಳ ಜವಾಬ್ದಾರಿ ಹೆಚ್ಚಿತು. ಮನೆಯನ್ನು ನೋಡಿಕೊಂಡೇ ಸಾಕಾಗುತ್ತಿತ್ತು. ಅವಳ ಹೊರ ಕೆಲಸ ನಿಂತಿತು. ಅದರಲ್ಲೂ, ಅವಳು ಮುಂದೆ ಒಂದೇ ವರ್ಷದಲ್ಲಿ ಹಡೆದಳು. ಹೆಣ್ಣು, ಹೆಣ್ಣೊ, ಗಂಡೊ, ಮಕ್ಕಳು ಮಕ್ಕಳೆ. ಸಂತೋಷಪಡಲು ಅವ್ವ ಇದ್ದಿರಲಿಲ್ಲ. ಅದರ ಒತ್ತಿತ್ತಿಗೆ ಮತ್ತೆ ಅವಳು ಬಸರಾದಳು. ಆದರೆ ಇಳಿದುಹೋಯಿತು. ವಿಪರೀತ ಅಶಕ್ತತೆಯಾಯಿತು. ಆರು ತಿಂಗಳು ಹಸೆಯಿಂದೇಳಲಿಲ್ಲ. ನಂತರ ಅವಳಿಗೆ ಕ್ಷಯ ಎಂದು ಡಾಕ್ಟರು ಹೇಳಿದರು. ಅದಕ್ಕೆ ಉಪಚಾರವಾಯಿತು. ಒಂದು ವರ್ಷದಲ್ಲಿ ಅದು ಗುಣವೇನೋ ಆಯಿತು. ಆದರೆ ಅವಳಿಗೆ ಮೊದಲಿನ ತಾಕತ್ತು ಬರಲಿಲ್ಲ. ಮೇರಿಗೆ ಬಂದಾಗ ಒಮ್ಮೊಮ್ಮೆ ಏನೋ ನೋಡುತ್ತಾ ನಿಂತು ಬಿಡುತ್ತಿದ್ದಳು. 'ಹೀಗೇಕೆ?' ಎಂದು ಕೇಳಿದರೆ, ಜನ್ಮದಲ್ಲೇ ನಮ್ಮಿಂದ ಮಂಚ ಮಾಡಿಸಲಾಗದೆಂದು, ಅದಕ್ಕೆ ತನ್ನ ಕಾಯಿಲೆಯೇ ಕಾರಣ ಎಂದು ಅತ್ತುಬಿಡುತ್ತಿದ್ದಳು. "ನಿನಗೇನು ಮಳ್ಳಾ, ಮಂಚ ಹೆಚ್ಚೊ, ಮನುಷ್ಯರು ಹೆಚ್ಚೊ, ಮಂಚದ ಮೇಲೆ ಮಲಗಿದ್ರೆ ಮಾತ್ರ ಜನ್ಮ ಸಾರ್ಥಕವಾ, ನಂಗೇನು ಅಂಥಾ ದುಃಖ ಇಲ್ಲ" ಎಂದು ಸಮಾಧಾನಪಡಿಸುತ್ತಿದ್ದೆ.

ಮಗಳು ಚೆನ್ನಾಗಿಯೇ ಬೆಳೆದಳು. ಅವಳನ್ನು ಓದಿಸಬೇಕೆಂಬ ಹುಚ್ಚು ನನಗೆ. ಸಾಧ್ಯವಾದಷ್ಟು ದುಡಿದೆ.

ಈಗ ನಮ್ಮ ದುಡಿತ ಮೊದಲಿನಂತಿರಲಿಲ್ಲ. ನಮ್ಮ ತಂಡದಲ್ಲಿ ಏಕಮತ ಇರಲಿಲ್ಲ. ಎಲ್ಲರಿಗೂ ಸಂಸಾರ ಬೆಳೆದಿತ್ತು. ಆ ಕಾಲಕ್ಕೆ ಮನಸ್ಸು ಬೇರೆ ಆಗಿರುತ್ತಿತ್ತು. ನಾವು ಬೇರೆ ಬೇರೆಯೇ ಗೆಯ್ಯಲು ಹೋಗುತ್ತಿದ್ದೆವು. ಗುತ್ತಿಗೆ ಕೆಲಸ ಹಿಡಿಯುತ್ತಿರಲಿಲ್ಲ. ಹೀಗಾಗಿ ಗಳಿಕೆ ಕಡಿಮೆಯಾಗುತ್ತಿತ್ತು.

ಒಂದೆರಡು ದಿನದಲ್ಲಿ ರಮಾನನ್ನು ಡಾಕ್ಟರ ಬಳಿ ಕರೆದುಕೊಂಡು ಹೋಗಬೇಕಿತ್ತು. ಕಡಿಮೆಯೆಂದರೂ ನೂರು ರೂಪಾಯಿ ಬೇಕು. ಕೈಯಲ್ಲಿ ಕಾಸೂ ಇಲ್ಲ. ಆಗ ನನ್ನ ಹಳೇ ದೋಸ್ತ ನಾರಾಯಣನ ಮನೆಗೆ ಹೋದೆ. ನನ್ನ ಪರಿಸ್ಥಿತಿ ಹೇಳಿದೆ. ದುಡಿದಷ್ಟೂ ಸಾಲೂದಿಲ್ಲ ಎಂದೆ. 'ಹೌದು ಮಾರಾಯ, ಎಷ್ಟು ದುಡಿದ್ರೂ ಹೊಟ್ಟೆ ತುಂಬೂದಿಲ್ಲ' ಎಂದ.

"ನಿಂಗೆ ಒಂದು ಮಾತ ಹೇಳ್ತೇ ಕೇಳತ್ಯಾ?" ಎಂದ.

"ಹೇಳು."

"ಈಗ ನಮಗೆ ದಿನ ಇಡೀ ಗೆಯ್ದರೆ ಎಷ್ಟ ಸಂಬಳ ಸಿಕ್ತದೆ ಹೇಳು?"

"ಇಪ್ಪತ್ತು ರೂಪಾಯಿ?"

"ನಲ್ವತ್ತು ಕೊಡ್ವಲ್ಲಿ ಕರೆದ್ರೆ ಬರತ್ಯಾ?"

"ಎಲ್ಲಿ ಮಾರಾಯ, ಉಪಕಾರ ಆಗೂದು ಹೇಳು."

"ಈಗ ನಾನು ಹಗಲ ಕೆಲ್ಸನೂ ಬಿಟ್ಟಿದ್ದೆ."

"ಮತ್ತೆ?"

"ಜಯರಾಮ ವೈದ್ಯರ ಗೊತ್ತಲ್ಲ?"

ಜೈರಾಮ ವೈದ್ಯರು ಯಾರಿಗೆ ಪರಿಚಯ ಇಲ್ಲ? ಮಾತೋಬಾರಿ ಜನ ಎಂದು ಹೆಸರಾದವರು. ದೇವರು ದಿಂಡರಲ್ಲಿ ಭಾಳ ಭಕ್ತಿ. ವರ್ಷೆ ವರ್ಷೆ ದೇವಸ್ಥಾನದಲ್ಲಿ ಮಾಡುವ ಕಾರ್ತಿಕ ಪೂಜೆಗೆ ಊರ ಜನರೆಲ್ಲ ಬರುತ್ತಿದ್ದರು. ಬ್ರಾಹ್ಮಣ ಕೇರಿಯನ್ನು ವಾದ್ಯದ ಸಮೇತ ಕರೆಯುತ್ತಿದ್ದರು. ನವರಾತ್ರಿಯಲ್ಲಿ ಒಂಬತ್ತು ದಿನ ಪೂಜೆ. ಇದಕ್ಕೊಂದು ಕಜ್ಜಾಯ. ಇತರ ಕೆಲಸದ ನಾಲ್ಕೈದು ಜನ ದಿನಾ ಊಟಕ್ಕೆ ಸೇರುತ್ತಿದ್ದರು. ಅವರು ನಮ್ಮೂರ ಸೊಸೈಟಿಯ ಚೇರ್ಮನ್ನರೂ ಆಗಿದ್ದರು. ಎಂಥವರಿಗೂ ಆಗದಿದ್ದವರು ಇದ್ದೇ ಇರುತ್ತಾರೆ. ಅವರು ಚೇರಮನ್ನರಾಗಿ ಸೊಸೈಟಿ ದಿವಾಳಿ ಹತ್ತಿಸಿದರು ಎಂದು ವದಂತಿಯನ್ನು ಹರಡಿದ್ದಾರೆ. ಸತ್ಯ ಬಲ್ಲವರಿಗೇ ಗೊತ್ತು. ಅವರು ಪಂಚಾಯತ ಚುನಾವಣೆಗೂ ನಿಂತಿದ್ದರು. ಆರಿಸಿ ಬಂದಿದ್ದರು; ಅವರಿಗೆ ಮೇಲಿನ ಅಧಿಕಾರಿಗಳ ಕೈ ಇದೆಯಂತೆ. ಎಂ.ಎಲ್.ಎ ಗಳಿಗೂ ಅವರಿಗೂ ಗಳಸ್ಯ ಕಂಠಸ್ಯ ಎಂದು ಜನ ಹೇಳಿಕೊಳ್ಳುತ್ತಾರೆ. ಈಗಿತ್ತ ಅವರು ಕಳ್ಳ ನಾಟು ವ್ಯವಹಾರ ಮಾಡುತ್ತಾರಂತೆ. ರಾತ್ರಿ ಬೆಟ್ಟದಲ್ಲಿ ಕೆಲಸ.

"ನಾನು ಈಗ ಸುಮಾರು ದಿನ ಆಯ್ತು. ನಾಲ್ವತ್ತೇನು, ರಾತ್ರಿಗೆ ಹೋದ್ರೆ ಐವತ್ತು ಕೊಡ್ತಾರೆ"

"ಸಿಕ್ಕಿ ಬಿದ್ದರೆ?"

"ಅವರೇ ನೋಡ್ಕೊತಾರೆ".

"ಆದರೂ"

"ನಿನ್ನ ವೇದಾಂತ ಹೇಳ್ಬೇಡ, ಅಂಥಂಥ ದೊಡ್ಡ ಜನರಿಗೇ ಆಗ್ತದೆ, ನಮಗೆ, ಕೂಳು ಹೆಕ್ಕಿ ತಿನ್ನುವವರಿಗೆ ಆಗದಾ? ಅವರ ಹಿಂದೆ ಎಂಎಲ್ಲೆಗಳೂ ಅವ್ರೆ."

"ಆದರೂ, ಆದರೂ ಪಾಪ ಅಲ್ವ?"

"ಪಾಪ ಪುಣ್ಯ, ಮೊದ್ಲ ಪೋಟೊಬಾ (ಹೊಟ್ಟೆ) ನಂತರ ವಿಠೋಬ. ನಿಂಗೆ ಮುಂತಾಗಿ ದುಡ್ಡು ಬೇಕೊ ಹೇಂಗೆ? ವೈದ್ಯರತ್ತ ಹೇಳಿ ತೆಗೆಸಿಕೊಡ್ತೆ, ಹೆಂಡ್ತಿ ಬದಸ್ಕ".

ನನಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಎರಡನೇ ದಿನದಲ್ಲಿ ನೂರು ರೂಪಾಯಿ ಅಷ್ಟಂತೂ ಬೇಕೆ ಬೇಕು.

"ಆಯ್ತು ಬರ್ತೆ".

ಎರಡು ದಿನ ರಾತ್ರಿ ಬೆಟ್ಟಕ್ಕೆ ಹೋದೆ. ಎಂಟು-ಹತ್ತು ಜನ ದುಡಿಯುತ್ತಿದ್ದರು. ದೂರದಲ್ಲಿ ಮರಗಳ ಹೆಣ ಬಿದ್ದಿತ್ತು. ಆ ಖಂಡಿಯನ್ನು ಕೊಯ್ದು, ಹಲಗೆ ಮಾಡಲು ದಡ ಕಟ್ಟಬೇಕಾಗಿತ್ತು. ಮೂರು-ನಾಲ್ಕು ಲಾಟೀನು, ಮೂರು ಸೆಲ್ಲಿನ ನಾಲ್ಕೈದು ಬ್ಯಾಟ್ರಿ. ಕೆಲಸ ಮಾಡಿದೆವು. ಎರಡೇ ದಿನಕ್ಕೆ ದಡೆ ಸಿದ್ಧವಾಯಿತು. ಇನ್ನ ಕರಗಸದವರ ಕೆಲಸ.

ನನ್ನ ಕೆಲಸದ ವಿಚಾರವೇನೂ ಹೆಂಡತಿಗೆ ಗೊತ್ತಿರಲಿಲ್ಲ. ಆದರೆ ಮನಸ್ಸು ಸ್ವಸ್ಥವಿರಲಿಲ್ಲ. ಇಡೀ ಬೆಟ್ಟವನ್ನು ಬೋಳು ಮಾಡಿದ್ದರು. ನಮಗೆ ಎರಡರಷ್ಟು ಸಂಬಳ, ಎರಡು ಪಟ್ಟಿಗಿಂತ ಹೆಚ್ಚು. ಆದರೆ ಮನಸ್ಸಿನ ಕಳವಳ ಹೇಳತೀರದು.

ಮದ್ದು ಮಾಡಿದ್ದಾಯಿತು. "ದುಡ್ಡು ಎಲ್ಲಿಂದ ತಂದಿರಿ?" ಎಂದು ರಮಾ ಕೇಳಿದಳು. ಮೊದಲು ಹೇಳದಿದ್ದರೂ ನಂತರ ಒಳಕುದಿ ತಡೆಯಲಾರದೆ ಹೇಳಿದೆ. ರಮಾ ಬೆಚ್ಚಿಬಿದ್ದಳು. ಅಂಥ ಕೆಲಸ ಬೇಡ ಎಂದಳು. ಸಿಕ್ಕಿಬಿದ್ದರೆ ಗತಿಯೇನು ಎಂಬುದು ಅವಳ ಚಿಂತೆ. ನನ್ನ ಎದೆಗುದಿ ಬೇರೆ. ಅದು ನನಗೇ ಅರ್ಥವಾಗದ್ದು.

"ಇಲ್ಲ, ಇನ್ನು ಮೇಲೆ ಹೋಗುವುದಿಲ್ಲ. ಮಂಚವೂ ಬೇಡ ಗಿಂಚವೂ ಬೇಡ".

ನನ್ನ ಬಾಯಿಂದ ಮಂಚದ ಹೆಸರು ಬಂದದ್ದು ಅವಳಿಗೆ ಮಾತ್ರವಲ್ಲ, ನನಗೂ ಆಶ್ಚರ್ಯ. ನಾನು ಅದನ್ನು ನೆನೆಸಿದವನೂ ಅಲ್ಲ. ಮಂಚವನ್ನು ಮರೆತು ಎಷ್ಟೋ ವರ್ಷಗಳೇ ಆಗಿದ್ದವು. ಒಮ್ಮೆಲೆ ಹೇಳಿದ ನನ್ನ ಮಾತಿಗೆ ನಾನೇ ನಾಲಿಗೆ ಕಚ್ಚಿಕೊಂಡೆ.

ಮತ್ತೆ ವೈದ್ಯರಿಂದ ಕರೆಬಂತು. ಬರುವುದಿಲ್ಲ ಎಂದಿದ್ದೆ. ಆದರೆ ಅವರಿಗೆ ಸಂಶಯ. ಹೆಚ್ಚು ಸಂಬಳ ಕೊಡುತ್ತೇನೆ ಎಂದು ಹೇಳಿಕಳಿಸಿದರು. ಆಗದು ಎಂದೆ. ಅವರಿಗೆ ಸಂಶಯ ಹೆಚ್ಚಾಯಿತು. ನಾನೇನಾದರೂ ಸುದ್ದಿ ಹಾಕಬಹುದೊ, ಅಧಿಕಾರಿಗಳಿಗೆ ಹೇಳಬಹುದೊ ಎಂದಿರಬೇಕು. ಎಷ್ಟೇ ಕೈ ಉದ್ದ ಇದೆ ಎಂದರೂ ಕಳ್ಳನ ಮನಸ್ಸು ಹುಳ್ಳುಳ್ಳಗೆ. ಕೊನೆಗೆ, ಏನಾದರೂ ಸುದ್ದಿ ಹಾಕಿದರೆ ಕೊಲ್ಲಿಸಿ ಬಿಡುತ್ತೇನೆ ಎಂದು ಹೇಳಿಕಳಿಸಿದ್ದರು.

> **ಅನಿಸಿಕೆ ಬರೆದು ಕಳಿಸಿ**
>
> ಈ ಕಥೆಯ ಬಗ್ಗೆ ವಿಮರ್ಶೆ, ಅಭಿಪ್ರಾಯಗಳನ್ನು ಆಹ್ವಾನಿಸುತ್ತೇವೆ. ಕಥೆ ಪೂರ್ಣ ಪ್ರಕಟಗೊಂಡ ಬಳಿಕ ಚಿಕ್ಕದಾಗಿ ಚೊಕ್ಕವಾಗಿ ಬರೆದು ಕಳಿಸಿ.
>
> - ಸಂ.

ಮುಪ್ಪು ರಮಾ ಸತ್ತುಹೋದಳು. ನನಗೆ ಬೇಗ ಮುಪ್ಪು ಬಂದುಬಿಟ್ಟಿತ್ತು ಅಥವಾ ಮಳೆಗಾಲದಲ್ಲಿ ಬರುವ ಮೋಡದ ಹಾಗೆ ಆವರಿಸತೊಡಗಿತು.

ರಮಾ ಮತ್ತೆ ಬಸಿರು ಕಳೆದುಕೊಂಡ ಮೇಲೆ ನಾನು ಕುಟುಂಬ ಯೋಜನೆ ಮಾಡಿಕೊಳ್ಳಬಯಸಿದ್ದೆ. ಡಾಕ್ಟರರಲ್ಲಿ ಹಾಗೆ ಹೇಳಿದೆ. ಆಗ 'ಎರಡು ಬೇಕು, ಒಂದು ಸಾಕು' ಎಂಬ ಕಾಲವಾಗಿರಲಿಲ್ಲ. 'ಮೂರು ಬೇಕು, ಎರಡು ಸಾಕು' ಎಂಬ ಕಾಲವಾಗಿತ್ತು. ನಾನು, 'ಒಂದು ಬೇಕು, ಒಂದೇ ಸಾಕು' ಎಂಬುದನ್ನು ಆಚರಿಸಿದೆ. ಡಾಕ್ಟರರಿಗೆ ಸಂತೋಷವಾಯಿತು. ಮತ್ತೆ ಅವಳು ಬಸಿರಾದರೆ ಬದುಕಲಿಕ್ಕಿಲ್ಲ ಎಂದು ನನಗೆ ಅನ್ನಿಸಿತ್ತು. ಡಾಕ್ಟರರ ಅಂಬೋಣಕ್ಕೂ ನನ್ನದಕ್ಕೂ ತಾಳೆ ಹೋಯಿತು.

ರಮಾ ತನಗೇನು ಕೊರತೆ ಎಂದು ಹೇಳಲೇ ಇಲ್ಲ. ನನ್ನ ಕೊರತೆಯನ್ನು ತುಂಬಲು ಬಯಸುತ್ತಿದ್ದಳು. ಅವಳು ಹೆಚ್ಚಿನದನ್ನೇನೂ ಬಯಸಲಿಲ್ಲ. ಅವಳಿಗೆ ತಾನು ಒಂದು ಚಿನ್ನದ ಕರಿಮಣಿ ಹಾಕಬೇಕೆಂಬ ಆಸೆಯಿತ್ತು. ಅದನ್ನು ನಾನು, ಮಗಳ ಮದುವೆಯ ಸಂದರ್ಭದಲ್ಲಿ ನೆರವೇರಿಸಿದೆ. ಆದಷ್ಟು ಕಡಿಮೆ ಖರ್ಚಿನಲ್ಲಿ ಎಂದು ಬೇರೆ ಹೇಳಬೇಕಾಗಿಲ್ಲ. ಹೆಚ್ಚಿನದೇನೂ ಇದ್ದಿರಲಿಲ್ಲ. ಒಂದೆರಡು ಉತ್ತಮ ಸೀರೆ ಇದ್ದವು.

ಎಷ್ಟೇ ಕಷ್ಟದಿಂದಿರಲಿ, ಅವಳು ಪೇಟೆಯಲ್ಲಿ ಬೆಳೆದವಳು. ಆದರೆ ಅವಳು ನಮ್ಮ ಹಳ್ಳಿಗೆ ಹೊಂದಿಕೊಂಡಳು. ಹೊಂದಿಕೊಂಡಳು ಮಾತ್ರವಲ್ಲ, ಏಕರಸವಾದಳು. ನಮ್ಮ ಕೇರಿಯವರಿಗೆಲ್ಲ ಅವಳೇ ಮಾರ್ಗದರ್ಶಕಳು. ಅವಳ ಮಾತಿನ ಬಗ್ಗೆ ಅಷ್ಟೊಂದು ಗೌರವ.

ಪೇಟೆಯವಳಾದರೂ ಅವಳು ಸಿನೇಮ ಗಿನಿಮ ಎನ್ನುತ್ತಿರಲಿಲ್ಲ. ನನಗೂ ಸಿನೇಮಾದ ಗೀಳು ಇಲ್ಲ. ನಾವು ನಾವು ಸಿನೇಮಾ ನೋಡಿದ್ದಿದ್ದರೆ ಕುಟುಂಬ ಯೋಜನೆಯವರು ತೋರಿಸಿದ್ದು ಅಷ್ಟೆ. ಆದರೆ ಆಟ ನೋಡಿದ್ದೇವೆ. ಜಾತ್ರೆಗೆ ಹೋಗಿದ್ದೇವೆ.

ನಮ್ಮ ಹತ್ತಿರ ಇರುವ ರೇಡಿಯೋವೇ ನಮ್ಮ ಹೆಚ್ಚಿನ ಮನೋರಂಜನೆಯ ಸಾಧನ. ನಾವು ಇಬ್ಬರೂ ಕುಳಿತು ಸಿನೇಮಾ ಹಾಡು ಕೇಳುತ್ತಿದ್ದೆವು. ಜಾನಪದ ಗೀತೆ ಕೇಳುತ್ತಿದ್ದೆವು. ಶಹನಾಯಿ ಕೇಳುವುದೆಂದರೆ ಅವಳಿಗೆ ಖುಶಿಯೋ ಖುಶಿ. ಅವಳೂ ಚಲೋದಾಗಿ ಹಾಡು ಹೇಳುತ್ತಿದ್ದಳು. ಕೇರಿಯ ಹೆಣ್ಣುಮಕ್ಕಳಿಗೆ ಹಾಡು, ಭಜನೆ ಹೇಳಿಕೊಟ್ಟಿದ್ದಳು.

ಅವಳು ಹೇಳುವ ಹಾಡು ನನಗೆ ಈಗ ಕೇಳಿದಂತೆ ಆಗುತ್ತಿದೆ. ಮದುವೆಯಲ್ಲಿ ಜರೆಯುವ ಹಾಡನ್ನು ಭಾಳ ಸೊಗಸಾಗಿ ಹೇಳುತ್ತಿದ್ದಳು.

ಅವಳಿಗೆ ಹುಶಾರಿಲ್ಲದಿರುವಾಗ ನಾನು ಅವಳ ಸೇವೆ ಮಾಡುತ್ತಿದ್ದೆನೆಂದು ಅವಳಿಗೆ ವ್ಯಥೆ. ಆದರೆ ಈ ಏಕಾಂತದಲ್ಲಿ ನನಗೆ ಸಮಾಧಾನ ತರುವ ಸಂಗತಿ ಅದಾಗಿದೆ.

ಅವಳಿಗೆ ಮಗಳೆಂದರೆ ತೀರ ಮುದ್ದು. ಎರಡು ಬಸಿರು ಹೋದದ್ದಕ್ಕೆ, ಇದ್ದೊಬ್ಬಳ ಮೇಲೆ ಎಲ್ಲವನ್ನು ತೀರಿಸಿಕೊಳ್ಳಬೇಕಿತ್ತು. ನನಗೂ ಅಷ್ಟೆ. ನಾನು ಮಗಳನ್ನು ತೀರಾ ಹೆಚ್ಚಾಗಿ ಪ್ರೀತಿಸುತ್ತಿದ್ದೆ.

ಈಗ ರಮಾ, ನನ್ನ ಪ್ರೀತಿಯ ಹೆಂಡತಿ, ಎದುರಿಗೆ ಕುಳಿತಂತೆ ಕಾಣುತ್ತದೆ. ಅವಳೊಡನೆ ಕುಳಿತು ಯಕ್ಷಗಾನದ ಕತೆಯನ್ನು ಹೇಳುತ್ತಿದ್ದೆ. ಅವಳಿಗೆ ಎಷ್ಟೋ ಕತೆಗಳನ್ನು ಹೇಳಿದ್ದೇನೆ. ಅವಳು ಕೇಳಿ ಸಂತೋಷಪಡುತ್ತಿದ್ದಳು. ಅವರ ನಡವಳಿಕೆಯ ಬಗ್ಗೆ ಚರ್ಚಿಸುತ್ತಿದ್ದಳು, ಅವಳಿಗೆ ಹೇಳಿದ ಕತೆಗಳಲ್ಲಿ 'ಯೋಗಿಸಿ ಕಲ್ಯಾಣ'ದ್ದು ಒಂದು. ಆ ಕತೆಯಲ್ಲಿ ಶೂರ್ಪನಖಿ ಮಾಯಾವೇಷದಲ್ಲಿ ಸೀತೆಯ ಕಡೆ ಬರುತ್ತಾಳೆ. ತಾನು ಮುದುಕಿ; ದುಡಿಯಲು ಆಗುತ್ತಿಲ್ಲ, ರಾವಣನ ಒಂದು ಚಿತ್ರ ಬರೆಯ್ಕೊಟ್ಟು, ಅದನ್ನೇ ತೋರಿಸಿ ಭಿಕ್ಷೆ ಬೇಡಿ ಬದುಕುತ್ತೇನೆ ಎನ್ನುತ್ತಾಳೆ. ಕರುಣೆಯಿಂದ ಆ ಚಿತ್ರ ಬರೆಯುತ್ತಾಳೆ ಸೀತೆ. ಆ ಚಿತ್ರವನ್ನು ಹಾಗೇ ಬಿಟ್ಟು ಹೋಗಿಬಿಡುತ್ತಾಳೆ, ಮಾಯಾಶೂರ್ಪನಖಿ. ಅಷ್ಟೊತ್ತಿಗೆ ರಾಮ ಬಂದುಬಿಡುತ್ತಾನೆ. ಸೀತೆ ಗಾಬರಿಯಿಂದ ಮಂಚದ ಮೇಲಿನ ಹಾಸಿಗೆಯಡಿ ಬಚ್ಚಿಡುತ್ತಾಳೆ. ರಾಮ ಬಂದು ಕೂಡ್ರುತ್ತಾನೆ. ಪಟಕ್ಕೆ ಜೀವ ಬಂದು ಮಂಚ ಅಲಗುತ್ತದೆ. ರಾಮ ಸಂಶಯದಿಂದ ನೋಡಿದರೆ, ಚಿತ್ರ ರಾವಣನದ್ದು! ಸೀತೆ ರಾವಣನನ್ನು ಎಷ್ಟೊಂದು ಪ್ರೀತಿಸುತ್ತಿದ್ದಳು ಎಂಬ ಸಂಶಯ ಅವನದು.

ರಾಮ ದೇವರಲ್ಲವೆ? ಅವನಿಗೆ ತಿಳಿಯುವುದಿಲ್ಲವೆ? ಎಂದು ಅವಳ ಪ್ರಶ್ನೆ ದೇವರಾದರೂ ಗಂಡು ದೇವರಲ್ಲವೆ? ಎಂಬುದು ನನ್ನ ಉತ್ತರ. ಅವಳಿಗೆ ವಿಸ್ಮಯ. ಹೀಗೆ ನಾನು ಅನೇಕ ಕತೆಗಳಲ್ಲಿ ಮಂಚವನ್ನು ತಂದು ರಾಜಕುಮಾರ ಕುಮಾರಿಯರನ್ನು ಕುಳ್ಳಿರಿಸಿಬಿಡುತ್ತಿದ್ದೆ.

ರಮಾ ಭಾಳ ಚೆಂದಾಗಿ ರಂಗೋಲಿ ಬರೆಯುತ್ತಿದ್ದಳು. ಒಂದು ಸಲ, ನಮ್ಮ

ವೋರಿಯಲ್ಲಿ, ನಾವು ಮಲಗುವ ಜಾಗದಲ್ಲಿ ಸೊಗಸಾಗಿ ಒಂದು ಮಂಚದ ಚಿತ್ರ ಬರೆದಿದ್ದಳು. ನೀರಿನಲ್ಲಿ ಅದ್ದಿದ ಸೇಡಿಯಿಂದ ಬರೆದಿದ್ದಳು. ಅಂದು ನನಗೆ ಮನೆಗೆ ಬರಲೂ ತಡವಾಗಿತ್ತು. ಊಟ ಮುಗಿಸಿ ವೋರಿಗೆ ಹೋದರೆ, ನೆಲದ ಮೇಲೆ ಮಂಚ! ನನಗೆ ಕಣ್ಣೀರು ಬರುವಂತಾಯಿತು. ನಾನು ಅವಳನ್ನು ಮುದ್ದಾಡಿದೆ. ಆ ರಾತ್ರಿ ನಾವು 'ನೆಲಮಂಚ' (ರಂಗೋಲಿ)ದ ಮೇಲೆಯೇ ಮಲಗಿದೆವು. ಮುದ್ದಾಡಿದೆವು. ಸಂಭೋಗಿಸಿದೆವು. ಈ ಮುದಿತನದಲ್ಲೂ ಯಾಕೆ ಆ ಚಿತ್ರ ಕಣ್ಣಿಗೆ ಕಟ್ಟುತ್ತವೆಯಾ. ಇದೇ ನಮ್ಮ ಮಂಚ ಎಂದಿದ್ದಳು.

ಸಾಕು ತೃಪ್ತಿ ಎಂದುಕೊಂಡಿದ್ದೆ. ಮತ್ತೆ ಮಂಚದ ನೆನಪನ್ನು ಮಾಡಿರಲಿಲ್ಲ.

ರಮಾ ಹೋದ ಮೇಲೆ ನನ್ನ ದೇಹ ಸೋಲುತ್ತ ಹೋಯಿತು. ಮೊದಲಿನಂತೆ ಹೆಚ್ಚು ಕೆಲಸ ಮಾಡಲಾಗುತ್ತಿರಲಿಲ್ಲ. ಮಗಳು ತನ್ನ ಮನೆಗೇ ಬಂದುಳಿ ಹೇಳಿದಳು. ಅಳಿಯನೂ, ಆದರೆ ರಮಾ ಕೊಟ್ಟ 'ನೆಲಮಂಚ' ಇಲ್ಲಿತ್ತಲ್ಲ?' ಅಲ್ಲದೆ ಉಂಡಾಡಿ ಉಣ್ಣುವುದು ನನ್ನ ಗುಣವೇ ಆಗಿರಲಿಲ್ಲ. ಆದ್ದರಿಂದ ಗೊಬ್ಬರ ತೆಗೆಯುವುದು, ಎಲೆ ಕೊಯ್ಯುವುದು, ಬಾಳೆ ಕೊಯ್ಯುವುದು ಹೀಗೆ ಸಣ್ಣಪುಟ್ಟ ಕೆಲಸ ಮಾಡುತ್ತಿದ್ದೆ.

ಹೌದು, ಮಗಳು ಸುದ್ದಿ ಸಿಕ್ಕಿದೊಡನೆ ಗಾಬರಿಯಿಂದ ಬಂದಿದ್ದಳು. ನನಗೆ ಎದೆನೋವು ಶುರುವಾಯಿತು. ಅದು ತುಸು ತುಸು ಜಾಸ್ತಿಯಾಗುತ್ತಾ ಹೋಯಿತು. ನೆರಮನೆಯ ಹಣಕೂಸ ಬಂದು ನೋಡಿದವ, ಆಸ್ಪತ್ರೆಗೆ ಸಾಗಿಸಿದ. ಡಾಕ್ಟರರು ಹೇಳಿದರು, ಸ್ವಲ್ಪ ಹಾರ್ಟುಬೇನೆ ಆಗಿದೆ, ಎಚ್ಚರ, ಹೆಚ್ಚು ಭಾವನೆಗೆ ಒಳಗಾಗಬೇಡಿ. ಸಿಟ್ಟು ಮಾಡಬೇಡಿ. ಚಿಂತೆ ಮಾಡಬೇಡಿ.

ಆ ಸುದ್ದಿಯನ್ನು ಕೇಳಿದ ಮಗಳು, ಅಳಿಯ ಬಂದಿದ್ದರು. ಎಂಟು ದಿನ ಉಳಿದು ಉಪಚಾರ ಮಾಡಿದ್ದಳು. ಅಳಿಯ ತನ್ನ ಕೆಲಸಕ್ಕೆ ಮರಳಿದ್ದ.

'ಏನು ಚಿಂತೆ ಮಾಡಬೇಡ ಅಪ್ಪಾ' ಎಂದು ಅವಳೆಂದಾಗ, 'ನನಗೇನೂ ಚಿಂತೆ ಇಲ್ಲ ಬಿಡು; ನಿನ್ನ ಅವ್ವನ ನೆನಪೊಂದನ್ನು ಬಿಟ್ಟರೆ' ಎಂದು ಹೇಳಿದ ಮೇಲೆ ನನ್ನ ವೋರಿಯಲ್ಲಿದ್ದ 'ನೆಲಮಂಚ'ದ ಕುರಿತು ಎಲ್ಲವನ್ನು ವಿವರಿಸಿದ್ದೆ.

ಹೌದು ನಾನು ಹೇಳಿದ್ದು ಯಾವಾಗ? ಅವಳ ಮಕ್ಕಳು ಸೂಟಿಯನ್ನು ಕಳೆಯಲು ಬಂದಾಗ, ಅವರನ್ನು ವಾಪಾಸು ಕರೆದುಕೊಂಡು ಹೋಗಲು ಬಂದಿದ್ದರು. ಆಗಲೇ ಹೇಳಿದ್ದೆ. ಅದಾಗಿ ಈಗ ಆರು ತಿಂಗಳಷ್ಟೇ ಕಳೆದಿದೆ. ಅಪ್ಪನ ಆಶೆ ತೀರಿಸಲು ಮಂಚ ತಂದುಬಿಟ್ಟಿದ್ದಾಳೆ! ಕಡಿಮೆಯೆಂದರೂ ಹದಿನೆಂಟು ಇಪ್ಪತ್ತು ಸಾವಿರ ಬೇಕು.

ಮಂಚದ ಮೇಲೆ ಅಂಗಾತ ಮಲಗಿದ್ದ. ತಲೆಗೊಂದು ತಲೆದಿಂಬು. ಒಂದು ಕಾಲನ್ನು ಮೇಲಕ್ಕೆ ಎತ್ತಿ, ಡೊಂಕಾಗಿ ಪಾದವನ್ನು ಮಂಚಕ್ಕೆ ಊರಿ, ಮತ್ತೊಂದು ಕಾಲನ್ನು ಅದರ ಮೇಲೆ ಹೇರಿ, ಆ ಪಾದದ ತುದಿ ಹೆಜ್ಜೆಯನ್ನೊಮ್ಮೆ ಬೆರಳನ್ನೊಮ್ಮೆ ಕುಣಿಸುತ್ತ ಕನಸು ಕಾಣುತ್ತಿದ್ದ.

ಸಂತೋಷದಿಂದ ಅವನ ಎದೆ ತುಂಬಿಬಂದಿತ್ತು. ಕನಸು ಕನಸು; ಅದರಲ್ಲಿ ರಮೆಯೂ.

ಹೊರಗೆ ಹೊಳ್ಳಿಯ ಮೇಲೆ, ಮಗಳ ಜೊತೆ ನೆರಮನೆಯ ನಾಗವೇಣಿ ಮಾತಾಡುತ್ತಿದ್ದಳು.

"ಅಯ್ಯಾ, ಅಕ್ಕಾ ಎಂಥ ಚಂದ ಮಂಚ!"

"ಅಯ್ಯೋ ನಾಗವೇಣಕ್ಕ, ನಮ್ಮ ಅಪ್ಪನಿಗೆ ಮಂಚ ತೀರದ ಆಶೆ. ಅದೊಂದು ಪೂರೈಸಿದರೆ ಆತ ನೂರು ವರ್ಷ ಬದಕತ. ನನಗೆ ಇದು ತಿಳಿದಿತ್ತು. ಅದಕ್ಕಾಗಿ ನಾನು ತಂದೆ."

"ಹುಟ್ಟಿದರೆ ಇಂಥ ಮಕ್ಕಳು ಹುಟ್ಟಬೇಕಪ್ಪ. ಎಷ್ಟು ರೂಪಾಯಿ ಕೊಟ್ಟಿರಿ"

"ಅದೇನ ಕೇಳ್ತಿ. ಅದನ್ನು ಸರಿಯಾಗಿ ಮಾಡಿಸಿದ್ರೆ ಇಪ್ಪತ್ತು ಸಾವಿರ ಬೇಕಾಗ್ತದೆ ಅಂತ ನಮ್ಮನೆಯವರು ಹೇಳ್ತಾರೆ. ನಮ್ಮಲ್ಲಿ ಕಳ್ಳನಾಟಿನವರು ಮಾಡಿಸಿದ್ದು, ಅಗ್ಗಕ್ಕೆ ಸಿಕ್ತು.ಈಗೆಲ್ಲ ಅದೇ ಜಾಸ್ತಿ. ಐದು ಸಾವಿರಕ್ಕೆ"

ನಾಗೇಶನ ಕಿವಿ ನೆಟ್ಟಗಾಯಿತು. ಎಲ್ಲವೂ ಕೇಳಿತು. ಕಳ್ಳ ನಾಟು, ಐದುಸಾವಿರ... ಒಮ್ಮೆಲೇ ಉದ್ವೇಗಕ್ಕೆ ಒಳಗಾದ. ಎದೆನೋವು ತೀವ್ರವಾಯಿತು. ತಡೆದುಕೊಳ್ಳದಾದ.


"ನೋವು ನೋವು" ಎಂದು ಎದೆ ಹಿಡಿದುಕೊಂಡು ಉರುಳಿ, ಮಂಚದ ಕೆಳ ಬಿದ್ದುಬಿಟ್ಟ. ಮತ್ತೆ ಮುಂದಿನದು ಹೇಳುವುದು ಬೇಡ. ಎಷ್ಟು ಉಪಚಾರ ಮಾಡಿದರೂ ಆತ. ಬದುಕಲಿಲ್ಲ.

(ಮುಗಿಯಿತು)

ರಾಜ ಗ್ಯಾನೇಂದ್ರರ ಸರ್ವಾಧಿಕಾರ ನೇಪಾಳಿ ಪ್ರಧಾನಿಗೆ ಅರ್ಧಚಂದ್ರ

ನೇಪಾಳದಲ್ಲಿ ಚುನಾಯಿತ ಸರಕಾರದ ಪ್ರಧಾನ ಮಂತ್ರಿಯನ್ನು ಕಿತ್ತುಹಾಕಿದ ರಾಜ ಗ್ಯಾನೇಂದ್ರರವರ ಸರ್ವಾಧಿಕಾರಿ ಕ್ರಮದ ವಿರುದ್ಧ ಅಲ್ಲಿನ ಜನತೆ ಬೀದಿಗಿಳಿದಿದ್ದಾರೆ.

ದೀರ್ಘಕಾಲದ ಚಳುವಳಿಯ ನಂತರ 1990 ರಲ್ಲಿ ಅಂದಿನ ರಾಜ ಬೀರೇಂದ್ರರವರು ಅಧಿಕಾರದಲ್ಲಿದ್ದಾಗ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದಿತ್ತು. ನೇಪಾಳೀ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಅಲ್ಲಿನ ಪ್ರಮುಖ ರಾಜಕೀಯ ಪಕ್ಷಗಳಾಗಿ ಅಧಿಕಾರ ನಡೆಸಿದವು. ಕಳೆದ ಬಾರಿಯ ಚುನಾವಣೆಯ ನಂತರ ನೇಪಾಳೀ ಕಾಂಗ್ರೆಸ್ ಅಧಿಕಾರದಲ್ಲಿದ್ದು ನೇಪಾಳಿ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್) ಪ್ರಮುಖ ವಿರೋಧ ಪಕ್ಷವಾಗಿತ್ತು.



ಪದಚ್ಯುತರಾದ ಪ್ರಧಾನಮಂತ್ರಿ ಶೇರ್ ಬಹುದ್ದೂರ್ ದುಬಾ ಕಳೆದ 13 ತಿಂಗಳಿಂದ ಅಧಿಕಾರ ನಡೆಸುತ್ತಿದ್ದರು.

ಇತ್ತೀಚೆಗಷ್ಟೇ ಸರ್ವ ಪಕ್ಷಗಳ ಸಭೆ ನಡೆಸಿ ಚುನಾವಣೆ ಯಾವಾಗ ನಡೆಸಬೇಕೆಂಬ ಬಗ್ಗೆ ಚರ್ಚಿಸಲಾಗಿತ್ತು. ಚುನಾವಣೆಯನ್ನು ಕೆಲವು ತಿಂಗಳುಗಳ ಮಟ್ಟಿಗೆ ಮುಂದೂಡಬೇಕೆಂದು ನಿರ್ಧರಿಸಲಾಗಿತ್ತು. ಆದರೆ ರಾಜ ಗ್ಯಾನೇಂದ್ರರವರು 'ಅಸಮರ್ಥ ಪ್ರಧಾನಮಂತ್ರಿ' ಎಂದು ನೆಪವೊಡ್ಡಿ ದುಬಾ ಅವರನ್ನು ಪದಚ್ಯುತಗೊಳಿಸಿದ್ದು ಮಾತ್ರವಲ್ಲದೆ ಕಾರ್ಯಾಂಗದ ಅಧಿಕಾರವನ್ನು ಕೈಗೆ ತೆಗೆದುಕೊಂಡಿದ್ದಾರೆ. ಇದು ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡುತ್ತದೆ.

ಹಿಂದಿನ ರಾಜ ಬೀರೇಂದ್ರ ಮತ್ತು ಅವರ ಇಡೀ ಕುಟುಂಬ ಗುಂಡಿಗಾಹುತಿಯಾದ ಬೆನ್ನಲ್ಲೆ ರಾಜತ್ವ ವಹಿಸಿಕೊಂಡ ಗ್ಯಾನೇಂದ್ರ ಪ್ರಪಂಚದಲ್ಲೆಲ್ಲಾ ಸುದ್ದಿಯಾದರು. ಮಾವೋ ಭಯೋತ್ಪಾದಕರ ನೆಪವೊಡ್ಡಿ ಅಮೇರಿಕಾ ಸಂಯುಕ್ತ ಸಂಸ್ಥಾನವು ನೇಪಾಳಕ್ಕೆ 20 ಮಿಲಿಯ ಡಾಲರ್ (ಸಾಧಾರಣ 100 ಕೋಟಿ ರೂ) ಮಿಲಿಟರಿ ಸಹಾಯ ನೀಡಿತು. ಭಾರತ ಸರ್ಕಾರವೂ ಕೂಡಾ ಯುದ್ಧ ಸಾಮಗ್ರಿಗಳನ್ನು ಒದಗಿಸುತ್ತಿದೆ. ಇದೀಗ ಪ್ರಜಾಪ್ರಭುತ್ವವನ್ನೇ ಮೂಲೋತ್ಪಾಟನೆ ಮಾಡಿದ್ದು ಅಪಾಯದ ಸಂಕೇತ.

ಇಂತಹ ಸನ್ನಿವೇಶದಲ್ಲಿ ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ಪ್ರತಿಭಟನೆಯ ಮಹಾಪೂರ ಹರಿದು ಬರುತ್ತಿದೆ. ಕಮ್ಯುನಿಸ್ಟ್ ಪಕ್ಷ ಬೆಂಬಲಿತ ವಿದ್ಯಾರ್ಥಿ ಸಂಘಟನೆಯು ಈ ಪ್ರತಿಭಟನೆಯಲ್ಲಿ ಮುಂಚೂಣಿಯಲ್ಲಿದ್ದು ರಾಜನ ಸರ್ವಾಧಿಕಾರ ವನ್ನು ವಿರೋಧಿಸುತ್ತಿದೆ. 'ಪ್ರಜಾಪ್ರಭುತ್ವ ಚಿರಾಯುವಾಗಲಿ' 'ಬಹು ಪಕ್ಷಗಳ ಪದ್ಧತಿ ಬೇಕೇಬೇಕು', 'ಸರ್ವಾಧಿಕಾರವನ್ನು ಸಹಿಸೋದಿಲ್ಲ' ಎಂಬ ಘೋಷಣೆಗಳು ಮುಗಿಲುಮುಟ್ಟಿವೆ. ಈ ಚಳುವಳಿಯಲ್ಲಿ ನೇಪಾಳದ ಕಮ್ಯುನಿಸ್ಟ್ ಪಕ್ಷ(ಯುಎಂಎಲ್) ದ ಬೆಂಬಲಿಗರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕಠ್ಮಂಡುವಿನ ಗಲ್ಲಿಗಲ್ಲಿಗಳಲ್ಲಿ ಪ್ರತಿಭಟನೆ ನಡೆಸಿದ ಮೆರವಣಿಗೆಕಾರರು "ಇನ್ನು ಐದು ದಿನಗಳಲ್ಲಿ ಮಧ್ಯವರ್ತಿ ಸರಕಾರವನ್ನು ರಚಿಸದೆ ಹೋದಲ್ಲಿ 1990 ರಲ್ಲಿ ನಡೆದ ಹೋರಾಟ ಕ್ಕಿಂತಲೂ ತೀವ್ರವಾದ ಹೋರಾಟವನ್ನು ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದ್ದಾರೆ. ಭಾರತದಲ್ಲಿನ ಪ್ರಜಾಸತ್ತಾತ್ಮಕ ಜನತೆ ನೇಪಾಳದಲ್ಲಿನ ಪ್ರಜಾಪ್ರಭುತ್ವ ಬಲಗೊಳ್ಳಬೇಕೆಂದು ಬಯಸುತ್ತಾರೆ.

......ಅತಿಕ್ರಮಣದಾರರು-ಹೋರಾಟದ ಮಾರ್ಗದಲ್ಲಿ

ಪುಟ 2 ರಿಂದ

ಅರಣ್ಯವಾಗಲೀ ಅಥವಾ ಕಂದಾಯ ಭೂಮಿಯಾಗಲೀ ಅದನ್ನು ಭೂರಹಿತರಿಗೆ ಹಂಚಬೇಕು ಎಂದು ಮೊಟ್ಟಮೊದಲು ನಾವು ಹೋರಾಟ ಆರಂಭಿಸಿ(ಅಖಿಲ ಭಾರತ ಕಿಸಾನ್ ಸಭಾ) ಚಳುವಳಿ ರೂಪದಲ್ಲಿ ಮುಂದುವರಿಸಿದ್ದೇವೆ. ಯಾರಿಗಾಗಿ ಈ ಅರಣ್ಯ? ಎಂದು ಪ್ರಶ್ನಿಸಿದ ಅವರು ದೊಡ್ಡ ದೊಡ್ಡ ಕಂಪನಿ ಮಾಲಿಕರಿಗೆ ಸಹಸ್ರಾರು ಎಕರೆ ನೀಡುವ ಕೇಂದ್ರ-ರಾಜ್ಯ ಸರ್ಕಾರ ಬಡಕೂಲಿಕಾರರ ವಿರೋಧಿಯಾಗಿದೆ. ಅರಣ್ಯ ಬೆಳೆಸುವ ನೆಪದಲ್ಲಿ ಅರಣ್ಯ ಇಲಾಖೆ ದುಡ್ಡು ತಿಂದು ಹಾಕತೊಡಗಿದೆ. ದೇಶದ 4 ರಾಜ್ಯದಲ್ಲಿ ಅರಣ್ಯ ಅತಿಕ್ರಮಣ ಆದೇಶ ಗಂಭೀರ ರೂಪ ತಳೆಯಲಿದ್ದು ಸುಮಾರು 15 ಲಕ್ಷಕ್ಕೂ ಹೆಚ್ಚಿನ ಬಡ ಜನ ಬೀದಿ ಪಾಲಾಗುತ್ತಿದ್ದಾರೆ. ಇವರ ಪರ ಕಾಳಜಿ ಇದೆ ಎಂಬ ಸರಕಾರ ಇನ್ನೂ ಏಕೆ ಸುಗ್ರೀವಾಜ್ಞೆ ತರುತ್ತಿಲ್ಲ ಎಂದು ಪ್ರಶ್ನಿಸಿದ ಅವರು ಭೂಮಿಯ ಒಡೆತನದ ಹಕ್ಕು ದೊರೆಯುವ ತನಕ ನಮ್ಮ ಹೋರಾಟ ಮುಂದುವರಿಯಲಿದೆ ಎಂದರು.

ಸಭೆಯಲ್ಲಿ ಜಾತ್ಯಾತೀತ ಜನತಾದಳದ ಶ್ರೀ ಗಣಪಯ್ಯ ಗೌಡ, ಸಂಯುಕ್ತ ಜನತಾದಳದ ಶ್ರೀ ಪಿ.ಎಸ್.ಭಟ್ಟ, ಜಿ.ಪಂ. ಸದಸ್ಯ ಶ್ರೀ ಪಿ.ಬಿ.ನಾಯ್ಕ, ಕರ್ನಾಟಕ ಪ್ರಾಂತ ರೈತ ಸಂಘದ(KPRS) ಶಾಂತರಾಮನಾಯಕ, ಸಿಪಿಐ(ಎಂ)ನ ತಿಲಕಗೌಡ ಸಭೆಯಲ್ಲಿ ಮಾತನಾಡಿದರು. ಹಿತರಕ್ಷಣಾ ಸಮಿತಿಯ ಗೌರವಾಧ್ಯಕ್ಷ ಹೈದರ್ ಖಾನ್ ಅವರು ಅಧ್ಯಕ್ಷತೆ ವಹಿಸಿದ್ದರು. ಅತಿಕ್ರಮಣದಾರ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಎಂ.ಎನ್.ಸುಬ್ರಹ್ಮಣ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾರುತಿ ನಾಯ್ಕ ಈವರೆಗಿನ ಹೋರಾಟದ ವರದಿ ಓದಿದರು. ವೇದಿಕೆಯಲ್ಲಿ ರೈತ ಸಂಘದ ತಿಮ್ಮಣ್ಣ ಹೆಗಡೆ, ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಯ ಎಸ್.ಎಲ್.ಹೆಗಡೆ, ಎಸ್.ಎಂ.ನಾಯ್ಕ, ಡಿವೈಎಫ್ಐನ ಕೇಶವಶೆಟ್ಟಿ ಮುಂತಾದವರು ಹಾಜರಿದ್ದರು. ಡಿವೈಎಫ್ಐನ ಜಿಲ್ಲಾ ಕಾರ್ಯದರ್ಶಿ ಇಡೀ ಕಾರ್ಯಕ್ರಮವನ್ನು ನಿರ್ವಹಿಸಿದರು.

ಭಟ್ಕಳ ತಾಲೂಕಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಅಡಿಯಲ್ಲಿ ಸಾವಿರಾರು ಅತಿಕ್ರಮಣದಾರರು ಅಕ್ಟೋಬರ್ 3 ರಂದು ಮೆರವಣಿಗೆ ಹೋರಾಟ ನಡೆಸಿದರು.ಜಾತಿ ಧರ್ಮದ ಎಲ್ಲೆ ಮೀರಿ ಹೋರಾಟದಲ್ಲಿ ಪಾಲ್ಗೊಂಡರು.ಸಾವಿರಾರು ಜನ ಮುಸ್ಲಿಂ ಮಹಿಳೆಯರು, ಬುರ್ಕಾವನ್ನು ತೊಟ್ಟು ಹೋರಾಟದ ಮುಂಚೂಣಿಯಲ್ಲಿದ್ದರು. ಪುರಸಭಾ ಸದಸ್ಯ ಹಸನ್ ಸಾಬ ಮೊದಲಾದವರು ಮಾತಾಡಿದರು. ಸುಭಾಷ್ ಕೊಪ್ಪಿಕರ, ಶ್ರೀಧರ ಶೆಟ್ಟಿ, ವಸೀ ಉಲ್ಲಾ ಶೇಖ್, ನಾಗರತ್ನ ಪಡಿಯಾರ್ ಮೊದಲಾದವರು ಹೋರಾಟದ ನೇತೃತ್ವ ವಹಿಸಿದ್ದರು. ಅಕ್ಟೋಬರ್ 7,8 ರಂದು ವಿವಿಧ ಆರ್‌ಎಫ್‌ಓ ಕಛೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಕೂಡಾ ಸಾವಿರಾರು ಜನ ಭಾಗವಹಿಸಿ ಹೋರಾಟ ತೀವ್ರಗೊಳಿಸಿದ್ದರು.

'ಸುಗ್ರೀವಾಜ್ಞೆ ತನ್ನಿ' - ಕೇಂದ್ರಕ್ಕೆ ಆಗ್ರಹ ಕೈಗೊಂಡ ನಿರ್ಣಯಗಳು

- ಅರಣ್ಯ ಕಾಯ್ದೆಗೆ ಅಗತ್ಯ ತಿದ್ದುಪಡಿ ಸುಗ್ರೀವಾಜ್ಞೆ ಹೊರಡಿಸಬೇಕು.
- ಅಲ್ಲಿಯವರೆಗೆ ಅರಣ್ಯ ಇಲಾಖೆಯವರು ಅತಿಕ್ರಮಣ ತೆರವುಗೊಳಿಸುವಂತೆ ಸರ್ಕಾರ ಆದೇಶಿಸಬೇಕು.
- ಅತಿಕ್ರಮಣ ಭೂಮಿಯ ಸ್ಥಿತಿಗತಿ, ಪ್ರಮಾಣ ಇತ್ಯಾದಿಗಳನ್ನು ಅಧ್ಯಯನ ಮಾಡಿ ಸಕ್ರಮಗೊಳಿಸಲು ಒಂದು ಸಮಿತಿ ನೇಮಿಸಬೇಕು.
- ಚಳುವಳಿಯನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ವಿಧಾನಸೌಧ ಚಲೋ ಕಾರ್ಯಕ್ರಮ ರೂಪಿಸಬೇಕು.
- ಎಲ್ಲಾ ಗ್ರಾಮದಲ್ಲಿ ಗ್ರಾಮ ಹೋರಾಟ ಸಮಿತಿ ರಚಿಸಿ ಹೋರಾಟ ತೀವ್ರಗೊಳಿಸಬೇಕು.

- ವರದಿಗಾರ



'ದೇಶಾಭಿಮಾನಿ' ಪತ್ರಿಕೆಗೆ 60 ವರ್ಷ

ಇ.ಕೆ.ಎನ್.ರಾಜನ್

1942 ರ ಸೆಪ್ಟೆಂಬರ್ 6 ರಿಂದ ದೇಶಾಭಿಮಾನಿ ಒಂದು ವಾರಪತ್ರಿಕೆಯಾಗಿ ಹೊರಬರಲು ಆರಂಭವಾಯಿತು. ದೇಶಾಭಿಮಾನಿ ಕಮ್ಯುನಿಸ್ಟ್ ಪಕ್ಷದ ಮುಖಪತ್ರಿಕೆಯಾಗಿ ಹೊರಬಂದಿತು. ದೇಶಾಭಿಮಾನಿ ಪತ್ರಿಕೆಯ ಚರಿತ್ರೆ ಕೇರಳದಲ್ಲಿ ಕಮ್ಯುನಿಸ್ಟ್ ಚಳುವಳಿಯ ಚರಿತ್ರೆಯೇ ಆಗಿದೆ. ಕಮ್ಯುನಿಸ್ಟ್ ಚಳುವಳಿ ಎದುರಿಸಿದ ಎಲ್ಲಾ ಅಗ್ನಿ ಪರೀಕ್ಷೆಗಳನ್ನು ದೇಶಾಭಿಮಾನಿ ಪತ್ರಿಕೆ ಸಹಾ ಎದುರಿಸಿ ಇಂದು ಬೆಳೆದು ನಿಂತಿದೆ. 'ಕಮ್ಯುನಿಸ್ಟ್ ಪತ್ರಿಕೆ ಎಂದರೆ ಏನು?' ಕಾಂ. ಇ.ಎಂ.ಎಸ್. ಹೀಗೆ ಹೇಳಿರುತ್ತಾರೆ - "ಒಂದು ಪತ್ರಿಕೆ ಕಮ್ಯುನಿಸ್ಟ್ ಪತ್ರಿಕೆ ಆಗಬೇಕಾದರೆ, ಒಬ್ಬ ಪತ್ರಕರ್ತ ಕಮ್ಯುನಿಸ್ಟ್ ಪತ್ರಕರ್ತನಾಗಬೇಕಾದರೆ ಲೆನಿನ್ ಅವರ ಮಾತುಗಳ/ ಮಾತ್ರಹೇಳಿದರೆ ಸಾಲದು. ಕಮ್ಯುನಿಸ್ಟ್ ಸಮುದಾಯವನ್ನು ಒಳ್ಳೆಯದು ಎಂದು ವಾದಿಸಿದರೆ ಮಾತ್ರ ಸಾಲದು, ಮತ್ತೇನು? ಕಮ್ಯುನಿಸಂಗೋಸ್ಕರ ಅಂತಿಮ ಹೋರಾಟಕ್ಕೆ ದುಡಿವ ಜನರನ್ನು ಸಜ್ಜುಗೊಳಿಸಲು ಬೇಕಾದ ಪ್ರಾಯೋಗಿಕ ಕೆಲಸಕ್ಕೆ ಸಹಾಯ ಒದಗಿಸುವುದು ಹಾಗೂ ಮುಖಂಡತ್ವ ನೀಡುವುದು. ಕೂಲಿ ಜಾಸ್ತಿ ಪಡೆಯಲಿಕ್ಕಾಗಿ, ಕೆಲಸದ ಅವಧಿ ಕಡಿಮೆಗೊಳಿಸಲಿಕ್ಕಾಗಿ, ಮೇಸ್ತ್ರಿಗಳ ಹಾಗೂ ಮ್ಯಾನೇಜರ್‌ಗಳ ನಡತೆ ವಿರುದ್ಧ, ತೆರಿಗೆ ಕಡಿಮೆ ಮಾಡುವುದಕ್ಕಾಗಿ, ಜಮೀನಿನಿಂದ ಜನರನ್ನು ಒಕ್ಕಲೆಬ್ಬಿಸುವುದರ ವಿರುದ್ಧ, ರೈತನ ಫಸಲಿಗೆ ಒಳ್ಳೆಯ ಬೆಲೆಗೋಸ್ಕರ, ಭ್ರಷ್ಟಾಚಾರ ತಡೆಗಟ್ಟಲು, ನಾಗರೀಕ ಹಕ್ಕುಗಳನ್ನು ಪಡೆಯಲು ಇತ್ಯಾದಿ ಸಾವಿರಾರು ವಿಷಯಗಳನ್ನು ಮುಂದಿಟ್ಟುಕೊಂಡು ಪ್ರತಿ ನಿಮಿಷವು ರಾಜ್ಯದ ಜನತೆ ನಡೆಸುವ ಹೋರಾಟಗಳ ಮುಂಚೂಣಿಯಲ್ಲಿ ಕಮ್ಯುನಿಸ್ಟ್ ಪತ್ರಿಕೆ ಇರಬೇಕಾಗಿದೆ. ಎಲ್ಲೆಲ್ಲಿ ಜನರು ಆಕ್ರಮಗಳಿಗೆ ಹಾಗೂ ಜೀತಕ್ಕೆ ಒಳಗಾಗುತ್ತಾರೋ ಹಾಗೂ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಾರೋ, ಆ ಜನರ ಜೊತೆನಿಂತು ತನ್ನ ಲೇಖನಿಯನ್ನು ಜನರ ಪರವಾಗಿ ಉಪಯೋಗಿಸುವವನು ಮಾತ್ರ ಕಮ್ಯುನಿಸ್ಟ್ ಪತ್ರಕರ್ತನಾಗಲು, ಪತ್ರಿಕೆ ರೂಪುಗೊಳ್ಳಲು ಸಾಧ್ಯ. ಈ ದಿಕ್ಕಿನಲ್ಲಿ ನೋಡಿದರೆ ದೇಶಾಭಿಮಾನಿ ಪತ್ರಿಕೆ ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ಕಳೆದ 6 ದಶಕಗಳಿಂದ ನಿರ್ವಹಿಸಿದೆ.

ಕೇರಳದ ಮೊದಲನೇ ಕಮ್ಯುನಿಸ್ಟ್ ಪತ್ರಿಕೆಯಾಗಿ ಹೊರಹೊಮ್ಮಿದ್ದು ಪ್ರಭಾತಂ ವಾರ ಪತ್ರಿಕೆ. ಈ ಪ್ರಭಾತಂ ಪತ್ರಿಕೆ ಕಮ್ಯುನಿಸ್ಟ್ ಗುಂಪು ಕೇರಳದಲ್ಲಿ ಆರಂಭವಾಗುವ ಮೊದಲೇ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಪತ್ರಿಕೆಯಾಗಿತ್ತು. ಈ ಪತ್ರಿಕೆ ಎಲ್ಲಾ ರೀತಿಯಲ್ಲಿಯೂ ಒಂದು ಕಮ್ಯುನಿಸ್ಟ್ ಪತ್ರಿಕೆಯಾಗಿತ್ತು. 1935 ಜನವರಿಯಿಂದ ಸೆಪ್ಟೆಂಬರ್ ವರೆಗೆ ಕೇರಳದ ಕೋರನೂರಿನಿಂದ ಈ ಪತ್ರಿಕೆ ಹೊರಡುತ್ತಿತ್ತು. ಪ್ರಭಾತಂ ಆರಂಭವಾಗುವ ಮೊದಲು 1934 ರಲ್ಲಿ ಪಾಟ್ನಾದಲ್ಲಿ ನಡೆದ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಸಮ್ಮೇಳನದಲ್ಲಿ ಭಾಗವಹಿಸಿದ ಕಾಂ. ಇ.ಎಂ.ಎಸ್. ಹಾಗೂ ಅವರ ಇತರೆ ಸಂಗಾತಿಗಳು ಹಿಂದಿರುಗಿ ಬರುವಾಗ ತಮಗೆ ಒಂದು ಪತ್ರಿಕೆ ತರಬೇಕು ಎಂಬ ದೃಢ ನಿರ್ಧಾರದೊಂದಿಗೆ ಬಂದರು. ಪ್ರಭಾತಂ ಪತ್ರಿಕೆ ಬ್ರಿಟಿಷ್ ಸರ್ಕಾರಕ್ಕೆ ಒಂದು ತಲೆನೋವಾಗಿತ್ತು. ಇದರ ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರನ್ನು ಅಂದಿನ ಬ್ರಿಟಿಷ್ ಕಲೆಕ್ಟರ್ ಹಲವಾರು ಬಾರಿ ಕರೆಸಿ ಎಚ್ಚರಿಕೆ ಕೊಟ್ಟಿದ್ದರು. ಭಗತ್‌ಸಿಂಗರನ್ನು ನೇಣಿಗೆ ಏರಿಸಿದ ದಿನ ಪ್ರಭಾತಂ ಪತ್ರಿಕೆಯಲ್ಲಿ ಭಗತ್‌ಸಿಂಗರ ಬಗ್ಗೆ ಒಂದು ಕವನ ಪ್ರಕಟವಾಗಿತ್ತು. ಈ ಕವನದ ಹೆಸರು 'ಆತ್ಮನಾದಂ'. ಇದಕ್ಕಾಗಿ ಮದ್ರಾಸ್ ಪ್ರಾಂತ ಸರಕಾರ ಆ ಕಾಲದಲ್ಲಿ ಪ್ರಭಾತಂ ಪತ್ರಿಕೆಗೆ ಎರಡು ಸಾವಿರ ರೂಪಾಯಿ ದಂಡ ವಿಧಿಸಿತ್ತು ಹಾಗೂ ದಂಡ ತೆರದಿದ್ದರೆ ಪತ್ರಿಕೆ ಮುಟ್ಟುಗೋಲು ಹಾಕುವುದಾಗಿ ಹೇಳಿತ್ತು. ಹಣ ಕಟ್ಟಿದರೂ ಸಹಾ ಮುಂದೆ ಪತ್ರಿಕೆ ನಡೆಸಲು ಸರಕಾರ ಬಿಡುವುದಿಲ್ಲ ಎಂದು ಮನದಟ್ಟಾಗಿ 1935 ರ ಸೆಪ್ಟೆಂಬರ್‌ನಲ್ಲಿ ಪ್ರಭಾತಂ ಪತ್ರಿಕೆಯನ್ನು ನಿಲ್ಲಿಸಲಾಯಿತು.

ಕೇರಳದಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಅಡಿಪಾಯ ಕಟ್ಟುವ ಕೆಲಸದಲ್ಲಿ ಪ್ರಭಾತಂ ಪತ್ರಿಕೆ ಬಹಳ ಕೆಲಸ ಮಾಡಿದೆ. ನಂತರದಲ್ಲಿ ಕಲ್ಲಿಕೋಟೆಯಿಂದ ಪುನಃ ಪ್ರಭಾತಂ 1937 ರಲ್ಲಿ ಪ್ರಾರಂಭವಾಯಿತು. ಇದೇ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷದ ಕೇಂದ್ರವಾದ ಮುಂಬೈಯಿಂದ ನ್ಯಾಷನಲ್ ಫ್ರಂಟ್ ಎಂಬ ಆಂಗ್ಲ ಪತ್ರಿಕೆ ಸಹಾ ಆರಂಭವಾಯಿತು.1940 ರಲ್ಲಿ ಎರಡನೇ ವಿಶ್ವ ಮಹಾಯುದ್ಧ ಆರಂಭವಾದಾಗ ಕಮ್ಯುನಿಸ್ಟ್ ಪಕ್ಷದ ಮೇಲೆ ನಿಷೇಧ ಹೇರಲಾಯಿತು. 1942 ರಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲಿನ ನಿಷೇಧವನ್ನು ಬ್ರಿಟಿಷ್ ಸರಕಾರ ಹಿಂತೆಗೆಯಿತು. ಆ ಸಮಯದಲ್ಲಿ ಸೆರೆಯಲ್ಲಿದ್ದ ಹಾಗೂ ಭೂಗತರಾಗಿದ್ದ ಕಮ್ಯುನಿಸ್ಟ್ ಮುಖಂಡರು ಆಚೆ ಬಂದರು. ಆ ಕೂಡಲೇ ಪಕ್ಷಕ್ಕಾಗಿ ಒಂದು ಪತ್ರಿಕೆ ಆರಂಭ ಮಾಡುವುದು ಅನಿವಾರ್ಯವೆಂದು ತೀರ್ಮಾನಿಸಲಾಯಿತು. ಹೀಗೆ 1942 ರ ಸಪ್ಟೆಂಬರ್ 6 ರಂದು ದೇಶಾಭಿಮಾನಿ ಒಂದು ವಾರಪತ್ರಿಕೆಯಾಗಿ ಹೊರಬಂದಿತು. ಭೂಗತರಾಗಿದ್ದ ಕಾಂ. ಎ.ಕೆ.ಜಿ./ ಸಿಲೋನ್, ಬರ್ಮಾ, ಸಿಂಗಾಪೂರ್ ಮುಂತಾದೆಡೆಗಳಿಂದ ಸಂಗ್ರಹಿಸಿದ್ದ ನಿಧಿ ಹಾಗೂ ಭೂಗತ ಜೀವನದಿಂದ ಹೊರಬಂದ ಕಾಂ. ಇ.ಎಂ.ಎಸ್. ರವರು ಆಸ್ತಿಯನ್ನು ಮಾರಾಟ ಮಾಡಿ ಆ ಕಾಲದಲ್ಲಿ ನೀಡಿದ 50 ಸಾವಿರ ರೂಪಾಯಿಗಳನ್ನು ಮೊದಲನೇ ಬಂಡವಾಳವಾಗಿಟ್ಟು ದೇಶಾಭಿಮಾನಿ ಪತ್ರಿಕೆ ಪ್ರಾರಂಭಿಸಲಾಯಿತು.



ದೇಶಾಭಿಮಾನಿ ಆರಂಭಗೊಂಡಾಗ ಬಹಳ ವಿರೋಧಗಳನ್ನು ಎದುರಿಸಬೇಕಾಗಿ ಬಂತು. ಪ್ರವಾಹಕ್ಕೆ ಎದುರಾಗಿ ಈಜುವ ಸಾಹಸಿಂದಾಗಿಯೇ ದೇಶಾಭಿಮಾನಿ ಬೆಳೆದು ಬಂದಿತು.

1943 ರ ಮಾರ್ಚ್ 29 ರಂದು ಕಯ್ಯೂರು ವೀರರನ್ನು ನೇಣುಗಂಬಕ್ಕೆ ಏರಿಸಿದಾಗ ದೇಶಾಭಿಮಾನಿಯಲ್ಲಿ ಅಂದು ಒಂದು ಸಂಪಾದಕೀಯ ಬರೆಯಲಾಗಿತ್ತು. ಇದರ ಶೀರ್ಷಿಕೆ 'ನೇಣುಗಂಬದ ಕೂಗು' ಎಂದಾಗಿತ್ತು. ಇದು ಅಂದಿನ ಆಳುವ ಮದ್ರಾಸ್ ಪ್ರಾಂತ್ಯದ ಸರಕಾರವನ್ನು ಕೆರಳಿಸಿತು. ಕೂಡಲೇ ಸರಕಾರ 1000 ರೂ.ಗಳನ್ನು ಜುಲ್ಮಾನೆಯಾಗಿ ಕೇವಣೆ ಇಡಬೇಕು ಎಂದು ಆಜ್ಞೆ ಮಾಡಿತು. ಈ ಸಾವಿರ ರೂಪಾಯಿಗಳನ್ನು ಅಂದು ಜನರು ಕೆಲವೇ ನಿಮಿಷಗಳಲ್ಲಿ ಸಂಗ್ರಹಿಸಿ ಕೇವಣೆ ಇಟ್ಟರು. ಇದೇ ರೀತಿಯಲ್ಲಿ ಹಲವು ವಿರೋಧಗಳನ್ನು ಸ್ವಾತಂತ್ರ್ಯಪೂರ್ವದ ಕಾಲಘಟ್ಟದಲ್ಲಿ ದೇಶಾಭಿಮಾನಿ ಪತ್ರಿಕೆ ಎದುರಿಸಬೇಕಾಯಿತು. ಆದರೆ ಸ್ವಾತಂತ್ರ್ಯ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ಸಹ ಬ್ರಿಟಿಷ್ ದಬ್ಬಾಳಿಕೆಯನ್ನು ಮುಂದುವರಿಸಿತು. 1948 ರ ಏಪ್ರಿಲ್ 12 ರಂದು ದೇಶ ರಕ್ಷಣೆ ಕಾನೂನು ನೆಪದಲ್ಲಿ ದೇಶಾಭಿಮಾನಿಯನ್ನು ನಿಷೇಧ ಮಾಡಲಾಯಿತು. ಹಾಗೂ ನಂತರದಲ್ಲಿ 45 ತಿಂಗಳ ನಂತರ ದೇಶಾಭಿಮಾನಿ ನಿಷೇಧದಿಂದ ಹೊರ ಬಂದು ಪುನಃ ಪ್ರಕಟವಾಯಿತು. ಆದರೆ ಈ ನಿಷೇಧದ ಅವಧಿಯಲ್ಲಿ ದೇಶಾಭಿಮಾನಿ ಹಲವು ಹೆಸರುಗಳಲ್ಲಿ ಜನರ ಕೈ ಸೇರುತ್ತಿತ್ತು. ಕಾಂಗ್ರೆಸ್ ಸರಕಾರದ ಜನವಿರೋಧಿ ಧೋರಣೆಗಳನ್ನು ವಿರೋಧಿಸಿ ನಡೆದ ಜನ ಚಳುವಳಿಯಲ್ಲಿ ಜೊತೆಗೂಡಿ ದೇಶಾಭಿಮಾನಿ ಪತ್ರಿಕೆ ಮುನ್ನಡೆಯಿತು. 1957 ರಲ್ಲಿ ಕಮ್ಯುನಿಸ್ಟ್ ಸರಕಾರವನ್ನು ಕೇರಳದಲ್ಲಿ ಅಧಿಕಾರಕ್ಕೆ ತರುವಲ್ಲಿ ದೇಶಾಭಿಮಾನಿಯ ಪಾತ್ರ ಅತಿದೊಡ್ಡದು.

1964 ರಲ್ಲಿ ಕಮ್ಯುನಿಸ್ಟ್ ಪಕ್ಷ ಇಬ್ಭಾಗವಾದಾಗ ದೇಶಾಭಿಮಾನಿ ಪ್ರಗತಿಗಾಮಿಗಳ ಕೈ ಸೇರಿತ್ತು. ಇದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಪತ್ರಿಕೆಯಾಗಿ ಮಾರ್ಪಾಟು ಮಾಡುವಲ್ಲಿ ಆವೇಶದಿಂದ ಕೂಡಿದ ಒಂದು ಚರಿತ್ರೆಯೇ ಇದೆ. ದೇಶಾಭಿಮಾನಿ ಕಲ್ಲಿಕೋಟೆಯಿಂದ ದಿನ ಪತ್ರಿಕೆಯಾಗಿ ಹೊರಹೊಮ್ಮಿದಾಗ ಅಲ್ಲಿಯ ಪ್ರೆಸ್ ಕೆಲಸಗಾರರು, ವರದಿಗಾರರು ರಾತ್ರಿ ಪತ್ರಿಕೆ ಮುದ್ರಣವಾದಾಗ ಒಂದೊಂದು ಕಟ್ಟು ಪತ್ರಿಕೆಯನ್ನು ಹೊತ್ತುಕೊಂಡು, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಹಾಗೂಮಾರುಕಟ್ಟೆ ಪ್ರದೇಶದಲ್ಲಿ ಪತ್ರಿಕೆ ಮಾರಾಟ ಮಾಡಿದ ನಂತರವೇ ಮನೆಗೆ ತೆರಳುತ್ತಿದ್ದರು ಹಾಗೂ ಪಕ್ಷದ ಮುಖಂಡರು ಭಾಗವಹಿಸುವ ಸಭೆಗಳ ವಿವರಗಳು, ಸಭೆಯಲ್ಲಿ ಹಾಡು ಹೇಳಿದವರ ಹೆಸರು, ಸಭೆಯ ತೀರ್ಮಾನ ಇತ್ಯಾದಿ ವಿಷಯಗಳನ್ನು ಬರೆದು ಮುದ್ರಣಕ್ಕೆ ನೀಡಿದ ನಂತರವೇ ಇವರು ಬೇರೆ ಕೆಲಸಗಳಿಗೆ ತೆರಳುತ್ತಿದ್ದರು. ಒಂದು ಸಲ ಪತ್ರಿಕೆಯ ಮೇಲೆ ಸರಕಾರ ನಿಷೇಧ ಹೇರಿದಾಗ ಸಂಗಾತಿಗಳು ದಲಿತರೊಬ್ಬರ ಮನೆಯಲ್ಲಿ ಸಭೆ ಸೇರಿ ಸರಕಾರ ಹೇರಿದ ಜುಲ್ಮಾನೆ ಕೇವಣೆ ಇಡುವ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಆ ಸಭೆ ನಡೆಯುತ್ತಿದ್ದ ಮನೆಯ ದಲಿತ ಮಹಿಳೆ ತನ್ನ ಜೀವನ ನಡೆಸುವ ಆಧಾರವಾಗಿದ್ದ ಹಸುವಿನ ಕತ್ತಿನ ಹಗ್ಗವನ್ನು ಕಾಂ.ಇ.ಎಂ.ಎಸ್. ರವರ ಕೈಯಲ್ಲಿ ನೀಡಿ ಮಾರಾಟ ಮಾಡಲು ತಿಳಿಸಿ ಯಾವ ಕಾರಣಕ್ಕಾಗಿ ಪತ್ರಿಕೆ ನಿಲ್ಲಬಾರದು ಎಂದು ವಿನಂತಿಸಿದರು.

ಹೀಗೆ ಆರಂಭಗೊಂಡ ಪತ್ರಿಕೆಯ ಎರಡನೇ ಆವೃತ್ತಿ 1968 ರಲ್ಲಿಕೊಚ್ಚಿನ್ ನಲ್ಲಿ ಆರಂಭವಾಯಿತು. 1989 ರಲ್ಲಿ ತಿರುವನಂತಪುರಂನಿಂದ ಮೂರನೇ ಆವೃತ್ತಿ ಹೊರಟಿತು. 1994 ರಲ್ಲಿ ಕಣ್ಣೂರಿನಿಂದ 4ನೇ ಆವೃತ್ತಿ ಹಾಗೂ 1997 ರಲ್ಲಿ ಕೊಟ್ಟಾಯಂನಿಂದ 5ನೇ ಆವೃತ್ತಿ ಆರಂಭವಾಯಿತು. 2000 ರ ವರ್ಷದಲ್ಲಿ ತ್ರಿಶೂರಿನಿಂದ 6ನೇ ಆವೃತ್ತಿ ಹೊರಡಿತು. ಹಾಗೂ ಇದೀಗದೇಶಾಭಿಮಾನಿ 7ನೇ ಆವೃತ್ತಿ ಮುಂಬೈನಿಂದ ಹೊರಡಲು ತಯಾರಿ ಆರಂಭವಾಗಿದೆ.

ಹೀಗೆ ಕಳೆದ 60 ವರ್ಷಗಳ ಚರಿತ್ರಾರ್ಹ ಬೆಳವಣಿಗೆಯನ್ನು ದೇಶಾಭಿಮಾನಿ ಪತ್ರಿಕೆ ಕಂಡಿದೆ.

ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ ಇಂದು ಜಗತ್ತಿನ ಕಮ್ಯುನಿಸ್ಟ್ ಚಳುವಳಿಯಲ್ಲಿ ಒಂದು ಪ್ರಮುಖ ಪಕ್ಷ. ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ನ ಸರ್ಕಾರದಲ್ಲಿ ಭಾಗವಹಿಸುತ್ತಿರುವುದರ ಮೂಲಕ, ದಕ್ಷಿಣ ಆಫ್ರಿಕಾದ ಮುನ್ನಡೆಯ ಹಾದಿಯ ಮೇಲೆ ಗಣನೀಯ ಪ್ರಭಾವ ಇರುವ ಪಕ್ಷ. ಈ ಪಕ್ಷದ 11ನೇ ಮಹಾಧಿವೇಶನ ರಾಸ್ತೆನ್ ಬರ್ಗ್(ಜೋಹಾನ್ಸ್ ಬರ್ಗ್ ನಿಂದ 130 ಕಿ.ಮಿ. ದೂರ ಇರುವ ಪಟ್ಟಣ) ದಲ್ಲಿ ಯಶಸ್ವಿಯಾಗಿ ನಡೆಯಿತು. ಈ ಮಹಾಧಿವೇಶನದಲ್ಲಿ 32 ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು ಭಾಗವಹಿಸಿದ್ದವು. ಸಿಪಿಐ(ಎಂ) ಪರವಾಗಿ ಪಾಲಿಟ್‌ಬ್ಯೂರೋ ಸದಸ್ಯ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಮತ್ತು 'ಗಣಶಕ್ತಿ'ಯ ಉಪಸಂಪಾದಕ ಅವಿಶ್ ದತ್ತ(ಪಕ್ಷದ ರಾಜ್ಯ ಸಮಿತಿಯ ಸದಸ್ಯರು ಸಹ) ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ಅವರ ಲೇಖನ ಆಧಾರಿತ ವರದಿ ಮಹಾಧಿವೇಶನದ ಬಗ್ಗೆ.

ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಹನ್ನೊಂದನೇ ಮಹಾಧಿವೇಶನ

ಸಮಾಜವಾದವೇ ಭವಿಷ್ಯ, ಅದನ್ನು ಈಗಲೇ ಕಟ್ಟೋಣ ಬನ್ನಿ

ಶರತ್‌ಚಂದ್ರ

ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಹನ್ನೊಂದನೇ ಮಹಾಧಿವೇಶನ ರಾಸ್ತೆನ್ ಬರ್ಗ್‌ನ ಪುರಭವನದಲ್ಲಿ ನಡೆಯಿತು. 337 ಶಾಖೆಗಳು 19,385 ಸದಸ್ಯರು ಆರಿಸಿದ ಸುಮಾರು 800 ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ನಾಟಾಲ್, ಪೂರ್ವ ಕೇಪ್, ವಾಯುವ್ಯ, ಪಶ್ಚಿಮ ಕೇಪ್ ಪ್ರಾಂತ್ಯಗಳಲ್ಲಿ ಪಕ್ಷಕ್ಕೆ ಹೆಚ್ಚಿನ ಬಲವಿದೆ. ಪಕ್ಷದ ಸದಸ್ಯರಲ್ಲಿ ಕಾರ್ಮಿಕವರ್ಗದ್ದೇ ಹೆಚ್ಚಿನ ಸಂಖ್ಯಾಬಲ. ವಿದ್ಯಾರ್ಥಿ-ಯುವ ಜನರು ಕಡಿಮೆ. ಇದನ್ನು ಸರಿಪಡಿಸಲು ಯುವ ಕಮ್ಯುನಿಸ್ಟ್ ಲೀಗ್ ಎಂಬ ಸಂಘಟನೆ ರಚಿಸಬೇಕು ಎಂಬುದು



ಮಹಾಧಿವೇಶನದ ಪ್ರತಿನಿಧಿಗಳು

ಮಹಾಧಿವೇಶನದ ನಿರ್ಣಯಗಳಲ್ಲೊಂದು.

ಈ ಮಹಾಧಿವೇಶನ ದಕ್ಷಿಣ ಆಫ್ರಿಕಾ ಮಾತ್ರವಲ್ಲ, ಅಂತರ್ರಾಷ್ಟ್ರೀಯವಾಗಿ ಭಾರಿ ಕುತೂಹಲ ಕೆರಳಿಸಿತ್ತು. ಇದಕ್ಕೆ ಮುಖ್ಯ ಕಾರಣ ಇತ್ತೀಚಿಗೆ ದಕ್ಷಿಣ ಆಫ್ರಿಕಾ ಮುನ್ನಡೆಯುವ ಹಾದಿ ಬಗ್ಗೆ ತ್ರಿಪಕ್ಷೀಯ ಒಕ್ಕೂಟದ(ಕಮ್ಯುನಿಸ್ಟ್ ಪಕ್ಷ, ಟ್ರೇಡ್ ಯೂನಿಯನ್ ಕೇಂದ್ರ ಮತ್ತು ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್) ಅಂಗಗಳ ನಡುವೆ ಕಂಡು ಬಂದ ಭಿನ್ನಾಭಿಪ್ರಾಯ. ಅದರಲ್ಲೂ ಮುಖ್ಯವಾಗಿ ಸರ್ಕಾರದ ಖಾಸಗೀಕಕರಣದ ಆರ್ಥಿಕ ನೀತಿಗಳ ಬಗ್ಗೆ.

ದಕ್ಷಿಣ ಆಫ್ರಿಕಾದ ಅಬೇಧ್ಯವೆನಿಸಿದ್ದ ವರ್ಣಬೇಧ ವ್ಯವಸ್ಥೆಯನ್ನು ಒಡೆದು ಹಾಕಿ ಪ್ರಜಾಸತ್ತಾತ್ಮಕ ಕ್ರಾಂತಿ ತಂದಿದ್ದು ಈ ಬಲಾಢ್ಯ ಒಕ್ಕೂಟದ ಬಲದಿಂದ ಒಕ್ಕೂಟಕ್ಕೆ ಈ ಮಹಾನ್ ಹೋರಾಟದಲ್ಲಿ ಸೈದ್ಧಾಂತಿಕ, ಮಿಲಿಟರಿ ನಿರ್ದೇಶನ ಒದಗಿಸಿ ನಾಯಕತ್ವ ಕೊಟ್ಟ ಹೆಗ್ಗಳಿಕೆ ಕಮ್ಯುನಿಸ್ಟ್ ಪಕ್ಷದ್ದು. ವರ್ಣಬೇಧವನ್ನು ಮತ್ತೆ ಸ್ಥಾಪಿಸಲು ಬಯಸುವ ದಕ್ಷಿಣ ಆಫ್ರಿಕಾದ ಶ್ರೀಮಂತ ಬಿಳಿಯರು ಒಂದು ಕಡೆ, ದಕ್ಷಿಣ ಆಫ್ರಿಕಾದ ಅಪಾರ ಸಂಪತ್ತಿನ ಮೇಲೆ ನಿಯಂತ್ರಣ ಮುಂದುವರೆಯಲು ಪ್ರಯತ್ನಿಸುವ ಸಾಮ್ರಾಜ್ಯಶಾಹಿ ಶಕ್ತಿಗಳು ಇನ್ನೊಂದು ಕಡೆ. ಈ ಎರಡೂ ಶಕ್ತಿಗಳು ತ್ರಿಪಕ್ಷೀಯ ಒಕ್ಕೂಟ ಒಡೆದು ಹೋಗಲಿ ಎಂದು ಹಾರೈಸುತ್ತಾ, ಒಕ್ಕೂಟದಲ್ಲಿ ಬಂದಿರುವ ಭಿನ್ನಾಭಿಪ್ರಾಯಗಳನ್ನು ಅತಿರಂಜಿತವಾಗಿ ತಮ್ಮ ನಿಯಂತ್ರಣದಲ್ಲಿರುವ ಸುದ್ದಿ ಮಾಧ್ಯಮಗಳ ಮೂಲಕ ಬಿಂಬಿಸಲು ಪ್ರಯತ್ನಿಸಿದವು. ಮಹಾಧಿವೇಶನದ ಮೊದಲು ಆಮೇಲೂ.

ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿ ಮುಂದೆ ಒಯ್ಯಿರಿ

ಹನ್ನೊಂದನೇ ಮಹಾಧಿವೇಶನ ಸಾರ್ವಜನಿಕ ಕ್ಷೇತ್ರದಲ್ಲಿರುವ ಕೈಗಾರಿಕೆಗಳು ಮತ್ತು ಇತರ ಸೇವೆಗಳನ್ನು ಬಲಗೊಳಿಸಬೇಕೆಂದು ಒತ್ತಾಯಿಸಿತು. ಶಿಕ್ಷಣ, ಆರೋಗ್ಯ, ನೀರು, ಸಾಗಾಣಿಕೆ, ಸಂಪರ್ಕಸಾಧನಗಳು, ಗಣಿಗಳು, ಗೃಹನಿರ್ಮಾಣ - ಈ ಕ್ಷೇತ್ರಗಳು ಸಾರ್ವಜನಿಕ ನಿಯಂತ್ರಣದಲ್ಲಿದ್ದು ಅವುಗಳಿಗೆ ಆದ್ಯತೆ ಕೊಡಬೇಕೆಂದು ಒತ್ತಾಯಿಸಲಾಯಿತು. ಈ ಬಗ್ಗೆ ತ್ರಿಪಕ್ಷೀಯ ಕೂಟ ಶೃಂಗಸಭೆ ನಡೆಸಿ ತಕ್ಕ ನಿರ್ಣಯ ಕೈಗೊಳ್ಳಬೇಕು. ಇದಕ್ಕಾಗಿ ಪಕ್ಷ ಸಾರ್ವಜನಿಕ ಒತ್ತಡ, ಪ್ರಚಾರ-ಪ್ರಕ್ಷೋಭೆ ನಡೆಸಬೇಕೆಂದು ಕರೆ ನೀಡಿತು.

ವರ್ಣಭೇದ ವ್ಯವಸ್ಥೆ ಕಿತ್ತುಹಾಕಿ ತ್ರಿಪಕ್ಷೀಯ ಕೂಟ ತಂದದ್ದು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿ. ಅದನ್ನು ಬಲಪಡಿಸಿ ಇನ್ನಷ್ಟು ಮುಂದೆ ತೆಗೆದುಕೊಂಡು ಹೋಗುವುದು ಪಕ್ಷದ ಆದ್ಯ ಕರ್ತವ್ಯ. ಇದಕ್ಕಾಗಿ ತ್ರಿಪಕ್ಷೀಯ ಕೂಟದ ಐಕ್ಯತೆ ಕಾಪಾಡುವುದರ ಮಹತ್ವವನ್ನು ಮಹಾಧಿವೇಶನ ಒತ್ತಿ ಹೇಳಿದೆ. ಎ.ಎನ್.ಸಿ. ಸರ್ಕಾರದಿಂದ ಹೊರಬಂದು ವಿರೋಧ ಪಕ್ಷವಾಗಿ ಕುಳಿತು ಕೊಳ್ಳಬೇಕು, ಎಎನ್‌ಸಿಯನ್ನು ಕರಿ-ಬೂರ್ಜ್ವಾ ಪಕ್ಷ ಎಂದು ಅರ್ಥೈಸುವ - ತಪ್ಪು ಧೋರಣೆಗಳನ್ನು ಮಹಾಧಿವೇಶನ ತೀವ್ರವಾಗಿ ಖಂಡಿಸಿತು. ಎ.ಎನ್.ಸಿ.ಯ ಸರ್ಕಾರ ಜನತೆಯ ಮುಖ್ಯ ಶತ್ರು ಅಲ್ಲ. ಮುಖ್ಯ ಶತ್ರು ಇನ್ನೂ ವರ್ಣಬೇಧ ವ್ಯವಸ್ಥೆ ಪುನಃ ಸ್ಥಾಪಿಸಬಯಸುವ ಆಳುವ ಬೂರ್ಜ್ವಾ ವರ್ಗ ದಕ್ಷಿಣ ಆಫ್ರಿಕಾದಲ್ಲಿ ದಮನಕಾರಿ ಬಂಡವಾಳಶಾಹಿ ವ್ಯವಸ್ಥೆ ಖಾಯಂ ಮಾಡಬಯಸುವ ಸಾಮ್ರಾಜ್ಯಶಾಹಿ ಜಾಗತೀಕರಣದ ಶಕ್ತಿಗಳು. ಇದನ್ನು ಬಿಡಬಾರದು ಎಂದು ಪಕ್ಷ ಹೇಳಿದೆ. ತ್ರಿಪಕ್ಷೀಯ ಕೂಟದ ಜನಬೆಂಬಲ, ಜನ-ಪರ ನೀತಿ ಉಳಿಸಿಕೊಳ್ಳಲು ಹೋರಾಡಬೇಕು. ಇದಕ್ಕಾಗಿ ಎ.ಎನ್.ಸಿ. ಜನ ಚಳುವಳಿಯಾಗಿ ಮುಂದುವರೆಯುವಂತೆ ಒತ್ತಡ ಹೇರಬೇಕು ಎಂದು ಮಹಾಧಿವೇಶನ ನಿರ್ಣಯ ಹೇಳಿದೆ.

ಹೊಸ ಬೆಳವಣಿಗೆ ಕಾರ್ಯವ್ಯೂಹ

ದಕ್ಷಿಣ ಆಫ್ರಿಕಾದ ಸ್ವಾಯತ್ತ ಬೆಳವಣಿಗೆಗೆ ಕಾರ್ಯವ್ಯೂಹ ರೂಪಿಸಬೇಕು. ಇದಕ್ಕಾಗಿ ತಕ್ಕ ಕೈಗಾರಿಕಾ ನೀತಿ, ಅರ್ಥ ನೀತಿ ರೂಪಿಸಬೇಕು. ಇದಕ್ಕಾಗಿ ಬೇಕಾದ ಸಂಪನ್ಮೂಲ ದೇಶದೊಳಗೆ ಹೊಂಚುವ ಪ್ರಯತ್ನ ನಡೆಯಬೇಕು. ಇದರ ಜತೆ ಬಡತನ ನಿರ್ಮೂಲನ, ಭೂಸುಧಾರಣೆ, ಉದ್ಯೋಗ ನಿರ್ಮಾಣಕ್ಕೂ ಯೋಜನೆ ಆಗಬೇಕು. ಇದಕ್ಕಾಗಿ ಒಂದು ಸಮಗ್ರ ನೀತಿ ರೂಪಿಸಿ, ಇದನ್ನು ತ್ರಿಪಕ್ಷೀಯ ಒಕ್ಕೂಟದೊಳಗೆ ಕೂಲಂಕುಷವಾಗಿ ಚರ್ಚೆ ನಡೆಸಿ ಜಾರಿ ಮಾಡುವುದು ಪಕ್ಷದ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಬೇಕು ಎಂದು ಮಹಾಧಿವೇಶನ ಹೇಳಿದೆ.

ದಕ್ಷಿಣ ಆಫ್ರಿಕಾದ ಅಧ್ಯಕ್ಷ ಮೆಬೇಕಿಯ ಮುತುವರ್ಜಿಯಿಂದ ರಚಿಸಲಾದ ಹೊಸ ಆಫ್ರಿಕನ್ ಒಕ್ಕೂಟ ಮತ್ತು ಆಫ್ರಿಕಾದ ಬೆಳವಣಿಗೆಗಾಗಿ ಹೊಸ ಪಾಲುದಾರಿಕೆ(NEPAD) ನ್ನು ಸ್ವಾಗತಿಸುತ್ತಾ ಅವುಗಳ ನಿಜವಾದ ಅರ್ಥವನ್ನು ದಿಕ್ಕೆಡಿಸುವ ಸಾಧ್ಯತೆಗಳ ಬಗ್ಗೆ ಎಚ್ಚರಿಸಿದೆ. ಆಫ್ರಿಕನ್ ಒಕ್ಕೂಟ ಜನ-ಪರ, ಜನ-ಕೇಂದ್ರಿತ ಪ್ರಜಾಪ್ರಭುತ್ವ ವ್ಯವಸ್ಥೆಗಾಗಿ ಹೋರಾಡಬೇಕಲ್ಲದೆ, ಸಾಮ್ರಾಜ್ಯಶಾಹಿ ಮತ್ತು ಪಾಶ್ಚಿಮಾತ್ಯರನ್ನು ಮೆಚ್ಚಿಸಲು ಅಲ್ಲ. ಅವರ 'ಸಹಾಯಧನ'ಕ್ಕೆ ಶರತ್ತಾಗಿ ಅಲ್ಲ. ಸ್ವಾಜಿಲ್ಯಾಂಡ್ ಮತ್ತು ಸಹಾರವಿ ರಿಪಬ್ಲಿಕನಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೆ ಆಫ್ರಿಕನ್ ಒಕ್ಕೂಟ ಪ್ರಯತ್ನಿಸಬೇಕೆಂದು ಒತ್ತಾಯಿಸಿದೆ. ಇದೇ ರೀತಿ NEPAD ಎಂಬ ಪಾಲುಗಾರಿಕೆ ಸಾಮ್ರಾಜ್ಯಶಾಹಿಗಳ ಯೋಜನೆ ಯನ್ನು ಆಫ್ರಿಕಾದ ದೇಶಗಳ ಮೇಲೆ ಹೇರಲು ಇನ್ನೊಂದು ವಾಹನ ಸಾಗದಂತೆ ಎಚ್ಚರ ವಹಿಸಬೇಕು. ಇದಕ್ಕಾಗಿ ಅದೊಂದು ಸಾಮೂಹಿಕ ಚಳುವಳಿ ಆಗುವಂತೆ ನೋಡಬೇಕು ಎಂದಿದೆ ಮಹಾಧಿವೇಶನ.

ಇವೆಲ್ಲವನ್ನು ಸಾಧಿಸಲು ಪಕ್ಷದ ಸ್ವತಂತ್ರ ಸಂಘಟನೆ, ನೀತಿ, ಬಲ ಹೆಚ್ಚಿಸಲು ಗಮನ ಕೊಡಬೇಕು. ಎಲ್ಲಾ ವಿಷಯಗಳಲ್ಲಿ ಪಕ್ಷದ ಸ್ವತಂತ್ರ ನೀತಿಯೂ ಜನಜನಿತಗೊಳಿಸಲು ಮುತುವರ್ಜಿ ವಹಿಸಬೇಕು. ಕೇಂದ್ರ ಸರ್ಕಾರದಿಂದ, ಸ್ಥಳೀಯ ಸರ್ಕಾರಗಳವರೆಗೆ ಎಲ್ಲಾ ಹಂತಗಳಲ್ಲಿ ಹಲವು ಇಲಾಖೆಗಳಲ್ಲಿ ಪದವಿಗಳಲ್ಲಿ ದುಡಿಯುತ್ತಿರುವ ಎಲ್ಲಾ ಪಕ್ಷದ ಸದಸ್ಯರು, ಪಕ್ಷದ ಕಣ್ಣೋಟವನ್ನು ಸರ್ಕಾರದ ನೀತಿ ಮತ್ತು ಅದರ ಜಾರಿಯ ಅಳವಡಿಸುವುದರಲ್ಲಿ ಮುತುವರ್ಜಿ ವಹಿಸಬೇಕು ಎಂದಿದೆ.

ಪ್ರಥಮ ಮಹಿಳಾ ಉಪಾಧ್ಯಕ್ಷೆ.

ಮಹಾಧಿವೇಶನ 25 ಸದಸ್ಯರ ಕೇಂದ್ರ ಸಮಿತಿಯನ್ನು ಆರಿಸಿತು. ಡಾ. ಬ್ಲೆಡ್ ಝಿಮಾಂದೆ ಮಹಾ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ಉಪಾಧ್ಯಕ್ಷೆಯಾಗಿ ಪಕ್ಷದ ಚರಿತ್ರೆಯಲ್ಲೇ ಮೊದಲ ಬಾರಿಗೆ ಒಬ್ಬ ಮಹಿಳೆ ಆರಿಸಿಬಂದರು. ಎ.ಎನ್.ಸಿ. ಸರ್ಕಾರದಲ್ಲಿ ಮಂತ್ರಿಗಳಾಗಿರುವ ಆರು ಜನರಲ್ಲಿ ಮೂವರು ಕೇಂದ್ರ ಸಮಿತಿಗೆ ಪುನರಾಯ್ಕೆಯಾಗಲಿಲ್ಲ. ಈ ಮೂವರ ಸರ್ಕಾರದಲ್ಲಿನ ಕಾರ್ಯವೈರಿ ಬಗ್ಗೆ ಮಹಾಧಿವೇಶನದಲ್ಲಿ ತೀವ್ರ ಟೀಕೆ ಕೇಳಿಬಂತು.ದಕ್ಷಿಣ ಆಫ್ರಿಕಾದ ಅಧ್ಯಕ್ಷ ಮೆಬೇಕಿ ಮೊದಲು ಎ.ಎನ್.ಸಿ.ಯ ಸೌಹಾರ್ದ ಪ್ರತಿನಿಧಿಯಾಗಿ ಮಹಾಧಿವೇಶನವನ್ನು ಉದ್ದೇಶಿಸಿ ಮಾತನಾಡಬೇಕಾಗಿದ್ದು, ಅವರು ಬರದೆಹೋದದ್ದು ಪತ್ರಿಕೆಗಳಲ್ಲಿ ಹಲವು ಊಹಾಪೋಹಗಳಿಗೆ ಕಾರಣವಾಯಿತು. ಅವರ ಬದಲು ಎ.ಎನ್.ಸಿ.ಯ ಪ್ರತಿನಿಧಿಯಾಗಿ ರಕ್ಷಣಾ ಮಂತ್ರಿಗಳು ಮಾತನಾಡಿದರು.

32 ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳಿಂದ ಸೌಹಾರ್ದ ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ಇವರಲ್ಲಿ 11 ಪಕ್ಷಗಳ ಪ್ರತಿನಿಧಿಗಳಿಗೆ ಮಾತ್ರ ಮಹಾಧಿವೇಶನ ಉದ್ದೇಶಿಸಿ ಮಾತನಾಡಲು ಅವಕಾಶ ಮಾಡಿಕೊಡಲಾಗಿತ್ತು. ಅವರಲ್ಲಿ ಸಿಪಿಐ(ಎಂ) ಪರವಾಗಿ ಮಾತನಾಡಿದ ಕಾಂ. ಬುದ್ಧದೇವ ಭಟ್ಟಾಚಾರ್ಯ ಒಬ್ಬರಾಗಿದ್ದರು. ○



ಕ್ರಿಸ್ ಹನಿ - ಕಮ್ಯುನಿಸ್ಟ್ ಹುತಾತ್ಮರ ವರ್ಷ

ಪಕ್ಷದ ಮಹಾಕಾರ್ಯದರ್ಶಿ ಆಗಿದ್ದ ಕ್ರಿಸ್ ಹನಿ ಹುತಾತ್ಮರಾಗಿ ಹತ್ತು ವರ್ಷಗಳು ಕಳೆದಿವೆ. ಈ ವರ್ಷವನ್ನು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯಹೋರಾಟದಲ್ಲಿ ಹುತಾತ್ಮರಾದವರ ನೆನಪಿನಲ್ಲಿ ಹುತಾತ್ಮ ವರ್ಷವನ್ನಾಗಿ ಆಚರಿಸುವುದು ಎಂದು ಮಹಾಧಿವೇಶನ ನಿರ್ಧರಿಸಿತು.

ಜಾಗತೀಕರಣದಿಂದ ಸಂವಿಧಾನದ ತತ್ವಗಳ ಉಲ್ಲಂಘನೆಯಾಗುತ್ತದೆ - ಬರಗೂರು ರಾಮಚಂದ್ರಪ್ಪ

ಅಧ್ಯಯನ ಪ್ರಕಾಶನ, ಶಿರಸಿ ಪ್ರಕಟಿಸಿರುವ ಮೂರು ಪುಸ್ತಕಗಳ ಬಿಡುಗಡೆ ಮತ್ತು ವಿಶೇಷ ಉಪನ್ಯಾಸದ ಕಾರ್ಯಕ್ರಮ ಇತ್ತೀಚೆಗೆ ಬೆಂಗಳೂರಿನ ಯವನಿಕಾದಲ್ಲಿ ನಡೆಯಿತು. ಶ್ರೀ ಎನ್.ಕೆ.ವಸಂತರಾಜ್ ರವರು ಬರೆದ ಪ್ರವಾಸ ಕಥನ 'ಅಮೆರಿಕದೊಳಗೊಂದು ಇಣುಕು', ವಿವಿಧ ಲೇಖಕರ ಲೇಖನಗಳ ಅನುವಾದ 'ಜಾಗತೀಕರಣದ ಸ್ವರೂಪ' ಮತ್ತು ಎಂ.ಎನ್.ಸುಂದರಂ ರವರು ಬರೆದ `Globle Finance Capial On Rampge' ಪುಸ್ತಕಗಳ ಬಿಡುಗಡೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು,ಬಂಡಾಯ ಸಾಹಿತಿಗಳೂ ಆದ ಪ್ರೊ. ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿ 'ಜಾಗತೀಕರಣ ಮತ್ತು ನಾವು' ಎನ್ನುವ ವಿಷಯದ ಬಗೆ ಮಾತನಾಡಿದರು.

ಅಮೇರಿಕಾದ ಕುರಿತ ಪ್ರವಾಸ ಸಾಹಿತ್ಯ ಮತ್ತು ಜಾಗತೀಕರಣದ ವಿವಿಧ ಮಗ್ಗಲುಗಳು, ಅಪಾಯಗಳನ್ನು ವಿವರಿಸುವ ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ಅರ್ಥಪೂರ್ಣ ಉಪನ್ಯಾಸ ನೀಡಿದ ಪ್ರೊ. ಬರಗೂರು ಅವರು 'ನಮ್ಮ ದೇಶದ ಸಂವಿಧಾನಕ್ಕೆ ಜಾಗತೀಕರಣ ಪರ್ಯಾಯ ಸಂವಿಧಾನವಾಗುತ್ತಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ, ವಿಶ್ವಆರ್ಥಿಕ ಪದ್ಧತಿಯ ಮೇರೆಯನ್ನು ಜಾಗತೀಕರಣ ಮೀರಿದ್ದರಿಂದ ನಮ್ಮ ಸಂವಿಧಾನದ ಉಲ್ಲಂಘನೆಯಾಗಿ' ಎಂದು ಹೇಳಿದರು. ಮುಂದುವರಿದು ಪ್ರಜಾಸತ್ತಾತ್ಮಕ ಸರಕಾರಳು ಜಾಗತೀಕರಣದ ಮುಂದೆ ಅಸಹಾಯಕವಾಗಿದೆ ಎಂದು ವಿಷಾಧಿಸಿದರು. ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಇಂತಹ ಅಸಹಾಯಕತೆ ತೀವ್ರಅಪಾಯ ಎಂದು ಎಚ್ಚರಿಸಿದರು.

ಸಂವಿಧಾನದ ಮೂರು ಮುಖ್ಯ ಅಂಶಗಳ ಸ್ಪಷ್ಟ ಉಲ್ಲಂಘನೆ ಆಗಿದೆ, ಮೊದಲನೆಯದಾಗಿ ಸಂವಿಧಾನವು ತನ್ನ ಪೀಠಿಕೆಯಲ್ಲಿ ಸಮಾಜವಾದದ ಪ್ರಸ್ತಾಪ ಮಾಡಿದೆ. ಸಮಾನತೆ, ಸಮಾನ ಹಂಚಿಕೆ, ಶೋಷಣಾ ರಹಿತ ಸಮಾಜದ ಬಗ್ಗೆ ಹೇಳುವ ಸಮಾಜವಾದದ ತತ್ವಕ್ಕೆ ಜಾಗತೀಕರಣ ಸಂಪೂರ್ಣ ವಿರುದ್ಧವಾಗಿದೆ. ಎರಡನೆಯದಾಗಿ ಮೀಸಲಾತಿಯ ಕಲ್ಪನೆ. ನಮ್ಮ ಸಂವಿಧಾನ ಮೀಸಲಾತಿಯನ್ನು ಒಪ್ಪಿಕೊಂಡು ಆಚರಣೆಗೆ ತಂದಿತ್ತು. ಆದರೆ ಸರ್ಕಾರದ ನೀತಿಯನ್ನು ಬಹುರಾಷ್ಟ್ರೀಯ ಕಂಪನಿಗಳು ಪಾಲಿಸಬೇಕಾಗಿಲ್ಲ. ಅವರಲ್ಲಿ ಬಂಡವಾಳ ಇದ್ದರೆ ಆಯಿತು. ಇಲ್ಲಿಯ ಗಾಳಿ, ನೀರು ಮತ್ತು ಎಲ್ಲಾ ಸೌಲತ್ತುಗಳನ್ನು ಬಳಸಿಕೊಂಡು ಲಾಭ ಮಾಡುತ್ತವೆ. ಆದರೆ ಇವರೆಲ್ಲಾ ಸ್ಥಳೀಯರಿಗೆ ಕೆಲಸವನ್ನು ನಿರಾಕರಿಸುತ್ತಿರುವಾಗಲೀ, ಸಂವಿಧಾನದ ಬದ್ಧವಾದ ಮೀಸಲಾತಿಯನ್ನು ವಿರೋಧಿಸುತ್ತದೆ. ಮೂರನೆಯದಾಗಿ ಇದು ಸಂವಿಧಾನದ ನಿರ್ದೇಶಕ ತತ್ವವನ್ನೇ ವಿರೋಧಿಸುತ್ತಾ ಮುನ್ನಡೆಯುತ್ತಿದೆ. ನಮ್ಮಲ್ಲಿಯ ಕಂನಿಗಳು ಈ ತತ್ವಗಳನ್ನು ಒಪ್ಪಿಕೊಳ್ಳದಿರುವಾಗ ಬಹುರಾಷ್ಟ್ರೀಯ ಕಂಪನಿಗಳು ಒಪ್ಪಿಕೊಳ್ಳುವುದು ಸಾದ್ಯವೇ?

ಜಾಗತೀಕರಣದ ಸಂದರ್ಭದಲ್ಲಿ ವಿದೇಶಿ ಕಂಪನಿಗಳು ಇಂದು 'ವಿಧಿ'ಯ ಸ್ಥಾನಕ್ಕೇರಿವೆ. ಏನೇ ನಡೆದರೂ ಅದು 'ವಿಧಿ' ಎಂದು ಹೇಳುವವರು ಇಂದು ಅದರ ಸ್ಥಳದಲ್ಲಿ 'ವಿದೇಶಿ ಕಂಪನಿ'ಯನ್ನು ಕೂಡಿಸಿದ್ದಾರೆ. ವಿದೇಶಿ ಬಂಡವಾಳ ತೊಡಗಿಸುವಿಕೆಯನ್ನು ವಿರೋಧ ಮಾಡಬೇಕಾಗಿಲ್ಲ. ಆದರೆ ಅವರ ಸಾರ್ವಭೌಮತ್ವವನ್ನು ವಿರೋಧಿಸಬೇಕು. ಸಂವಿಧಾನದ ಸಾರ್ವಭೌಮತ್ವವನ್ನು ಬಿಟ್ಟು ಕೊಡುವುದೆಂದರೆ ನಮ್ಮ ಪ್ರಜಾಸತ್ತೆಯನ್ನೇ ನಿರ್ನಾಣ ಮಾಡಿದಂತೆ. ಸರಕಾರಗಳ ಪ್ರಜಾಸತ್ತಾತ್ಮಕ ಅಸಹಾಯಕತೆಯಿಂದ ಹೊರಬರಲು ಬೇಕಾದ ಚಿಂತನೆ, ಹೋರಾಟ ಇಂದಿನ ಅಗತ್ಯ ಎಂದರು.

ಸರ್ಕಾರ ಉದ್ಯಮಪತಿಗಳನ್ನು ನೋಡಿಕೊಳ್ಳುತ್ತಿದೆಯೇ, ಉದ್ಯಮಪತಿಗಳು ಸರ್ಕಾರವನ್ನು ನೋಡಿಕೊಳ್ಳುತ್ತಿದ್ದಾರೋ ಎನ್ನುವ ಜಿಜ್ಞಾಸೆ ಸಾರ್ವಜನಿಕ ವಲಯದಲ್ಲಿದೆ. ವಾಸ್ತವವಾಗಿ ಉದ್ಯಮಪತಿಗಳೇ ಸರ್ಕಾರವನ್ನು ಪೋಷಿಸುತ್ತಿದ್ದಾರೆ.



ಅಮೆರಿಕ ಮತ್ತು ಭಯೋತ್ಪಾದನೆಯ ಕಡೆಗೆ ಗಮನಹರಿಸಿದ ಅವರು 'ಭಾರತ ಅಥವಾ ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಸುವ ವಿಧ್ವಂಸಕ ಕೃತ್ಯಗಳು ಅಮೆರಿಕಕ್ಕೆ ಭಯೋತ್ಪಾದನೆಯಾಗುವುದಿಲ್ಲ. ಅಮೆರಿಕಾದಲ್ಲಿ ವಿಶ್ವ ವಾಣಿಜ್ಯ ಕೇಂದ್ರದ ಮೇಲೆ ನಡೆದ ದಾಳಿ ಮಾತ್ರ ಭಯೋತ್ಪಾದನೆ ಆಗುತ್ತದೆ. ಭಯೋತ್ಪಾದಕರ ದಾಳಿಗೆ ಅಮರಿಕಾದವರು ಬಲಿಆದರೆ ಮಾತ್ರ ಅದು ಅಂತರ್ರಾಷ್ಟ್ರೀಯ ಭಯೋತ್ಪಾದನೆಯಾಗುತ್ತದೆ.

ಅಧ್ಯಯನ ಪ್ರಕಾಶನ, ಶಿರಸಿಯ ಮೂರು ಪುಸ್ತಕಗಳ ಬಿಡುಗಡೆ

1. ಅಮೆರಿಕದೊಳಗೊಂದು ಇಣುಕು
2. ಜಾಗತೀಕರಣದ ಸ್ವರೂಪ
3. Globle Finance Capital on Rampage

ಹಾಗಾಗಿ ಜಾಗತಿಕವಾದ ಪಟ್ಟ ಕಟ್ಟಿಕೊಳ್ಳಬೇಕಾದರೆ ಆತ ಅಮೆರಿಕದಲ್ಲೇ ಸಾಯಬೇಕು. ಜಗತ್ತು ಎಂದರೆ ಅಮೆರಿಕಾ ಎಂದು ನಾವು ತಿಳಿದುಕೊಂಡಿದ್ದೇವೆ. ಅಮೆರಿಕಾದ ವಸ್ತುಗಳು ದೇಶದೊಳಗೆ ಬಂದಾಗ ಮಾತ್ರ ಜಾಗತೀಕರಣವಾಗುತ್ತಿದೆ. ಯಾಕೆ ಚೈನಾ, ಕ್ಯೂಬಾ, ವಿಯೆಟ್ನಾಂ, ಹಂಗೇರಿಯಾ, ಪೋಲೆಂಡ್‌ಗಳಿಂದ ಬಂದಿದ್ದು ಜಾಗತೀಕರಣ ಅಲ್ಲ. ಹಾಗಾಗಿ ನಡೆಯುತ್ತಿರುವುದು ಜಾಗತೀಕರಣ ಅಲ್ಲ, ಅಮೆರಿಕೀಕರಣ. ಸಾಮ್ರಾಜ್ಯಶಾಹಿಯ ಈ ಕುತಂತ್ರವನ್ನು ವಿರೋಧಿಸಬೇಕಾಗಿದೆ ಎಂದರು. 'ಕೋಮುವಾದದ ಕರಾಳತೆ ಮತ್ತು ವಿದೇಶಿ ಆರ್ಥಿಕ ನಿಲುವುಗಳ ಆಕ್ರಮಣಶೀಲತೆ ಉದ್ಭವ ಆಗಿರುವ ಈ ದಿನಗಳಲ್ಲೂ ಅಧ್ಯಯನ ಪ್ರಕಾಶನ ಇಂತಹ ಮಹತ್ವದ ಪುಸ್ತಕವನ್ನು ಪ್ರಕಟಿಸುತ್ತಿರುವುದು ಶ್ಲಾಘನೀಯ. ಉತ್ತ ಕನ್ನಡ 'ಚಿಂತನ' ಬಳಗ ಆ ಪ್ರದೇಶದಲ್ಲಿ ತುಂಬಾ ಕ್ರಿಯಾಶೀಲವಾದ ಪ್ರಗತಿಪರ ಬಳಗ. ಸಮಕಾಲೀನ ವಿಷಯದಲ್ಲಿ ಸಂವಾದ ಮಾಡುವುದಷ್ಟೇ ಅಲ್ಲದೆ ಕಿರುಪುಸ್ತಕ ಹಾಗೂ ಅಧ್ಯಯನ ಪ್ರಕಾಶನದ ಹೆಸರಿನಲ್ಲಿ ದೊಡ್ಡ ಪುಸ್ತಕ ಪ್ರಕಟಿಸುತ್ತಾ ಬಂದಿದೆ. ಚಿಂತನ ಬಳಗದ ಕ್ರಿಯಾಶೀಲತೆಯನ್ನು ಬಹಳ ಹತ್ತಿರದಿಂದ ಬಲ್ಲವನಾದ ನನಗೆ ಅವರು ಪ್ರಕಟಿಸಿದ ಈ ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಲು ತುಂಬಾ ಸಂತೋಷವಾಗುತ್ತಿದೆ ಎಂದರು.

ಎನ್.ಕೆ.ವಸಂತರಾಜ ಅವರ ಪುಸ್ತಕ ಪರಿಚಯ ಮಾಡಿದ ಖ್ಯಾತ ಬಂಡಾಯ ವಿಮರ್ಶಕರಾದ ಎನ್.ಶಿವಾನಂದ ಮಾತನಾಡಿ "ಇದು ಪ್ರವಾಸ ಸಾಹಿತ್ಯ ಮಾತ್ರ ಅಲ್ಲ. ಅದಕ್ಕಿಂತ ಹೆಚ್ಚಿನ ವ್ಯಾಪ್ತಿ ಹೊಂದಿದೆ. ಒಂದು ರೀತಿಯಲ್ಲಿ ಇದು ಸಂಶೋಧನಾ ಪ್ರಬಂಧವಾಗಿದೆ. ಒಬ್ಬ ಇಂಜಿನಿಯರ್ ಆದ ಲೇಖಕರು ಇಡೀ ಪುಸ್ತಕವನನು 'ಕಾಂತಸಮ್ಮಿತ' ವಾದ ಶೈಲಿಯಲ್ಲಿ ವಿವರಿಸಿದ್ದಾರೆ ಎಂದರು. ಮುಂದುವರಿದು 'ಲೇಖಕರು ಅಮೆರಿಕಾದಲ್ಲಿ ಕಂಡ, ಕೇಳಿದ ವಿಷಯಗಳನ್ನು ಅದರಷ್ಟಕ್ಕೆ ವಿವರಿಸಿ ಬಿಡದೆ ಅದರ ಮೂಲವನ್ನು ಅರಸುತ್ತಾ ಹೋಗುವುದು ಹೆಚ್ಚು ಕುತೂಹಲಕಾರಿಯಾಗಿದೆ. ಅಮೆರಿಕಾದಲ್ಲಿ ಬೀದಿಯಲ್ಲಿ ಸಿಕ್ಕಿದ ಒಂದು ಸ್ಟಿಕರ್ ಕೂಡ ಅಮೆರಿಕದ ಬಗ್ಗೆ, ಅಲ್ಲಿಯ ಹಿಂಸಾಪ್ರಧಾನವಾದ ಆಡಳಿತದ ಬಗ್ಗೆ ವಿವರ ಕೊಡುತ್ತದೆ. ಪುಸ್ತಕದ ತುಂಬಾ ಬಳಸಿರುವ ಅರ್ಥಪೂರ್ಣ ಕಾರ್ಟೂನ್‌ಗಳು ಮತ್ತು ತೀರಾ ನವಿರಾದ ಹಾಸ್ಯ ಚಟಾಕಿಗಳು ಇಡೀ ಪುಸ್ತಕವನ್ನು ಒಂದೇ ಸಮನೆ ಮುಗಿಸುವಂತೆ ಮಾಡುತ್ತದೆ ಎಂದರಲ್ಲದೆ ಪ್ರವಾಸ ಸಾಹಿತ್ಯದ ಲೋಕದಲ್ಲಿಯೇ ಈ ಕೃತಿ ತೀರಾ ಭಿನ್ನವಾಗಿದೆ ಮತ್ತು ಹೆಚ್ಚು ವಿಶಿಷ್ಟವಾಗಿದೆ. ಅಮೆರಿಕಾದ ಬಗ್ಗೆ ಇರುವ ಭ್ರಮೆಯನ್ನು ಒಡೆದು ಅಲಲಿಯ ವಾಸ್ತವದ ಕಹಿಯನ್ನಿಲ್ಲಿ ಅವರು ವಿವರಿಸುತ್ತಾರೆ. ಯಾವುದೇ ವೈಭವೀಕರಣ ಇಲ್ಲಿ ಇಲ್ಲ. ವಾಸ್ತವವಾದಿ ಮಾರ್ಗದಲ್ಲಿ ಈ ಕೃತಿ ರೂಪಿತ ಆಗಿದೆ' ಎಂದರು.

'ಜಾಗತೀಕರಣದ ಸ್ವರೂಪ' ಪುಸ್ತಕದ ಬಗ್ಗೆ ಪರಿಚಯಿಸಿದ ಜೀವ ವಿಮಾ ನೌಕರರ ಸಂಘದ ಕಾರ್ಯದರ್ಶಿ ಚಂದನ್ ಅವರು ಮಾತನಾಡಿ ಈ ಎರಡು ಪುಸ್ತಕಗಳು ಜಾಗತೀಕರಣದ ವಿಭಿನ್ನ ಸ್ವರೂಪಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಹೆಚ್ಚು ಸಹಾಯಕ ಆಗುತ್ತದೆ. ಹರಿಕಿಶನ್ ಸಿಂಗ್ ಸುರ್ಜಿತ್, ಸೀತಾರಾಂ ಯೆಚೂರಿ, ಪ್ರಬಾತ್ ಪಟ್ನಾಯಕ್, ಉತ್ಸಾ ಪಟ್ನಾಯಕ್ ಮೊದಲಾದ ಆರ್ಥಿಕ ತಜ್ಞರ ಲೇಖನಗಳು ಮತ್ತು ಎನ್.ಎಂ. ಸುಂದರಂ ಅವರ ಪುಸ್ತಗಳು ಕರ್ನಾಟಕದ ಚಿಂತನಗಳಿಗೆ ಕೊಟ್ಟ ದೊಡ್ಡ ಕೊಡುಗೆ ಎಂದರು.

ಸಭೆಯ ಅದ್ಯಕ್ಷತೆಯನ್ನು ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಅವರು ಮಾತನಾಡಿ "ಗೋರೂರು, ಮೂರ್ತಿರಾಯ, ಕಾರಂತ ಮೊದಲಾದವರು ಈಗಾಗಲೇ ಅಮೆರಿಕಾಕ್ಕೆ ಹೋಗಿಬಂದ ಪ್ರವಾಸದನುಭವ ಕೊಟ್ಟಿದ್ದರು. ಆದರೆ ಅದಕ್ಕಿಂತ ಭಿನ್ನವಾಗಿ ಸೈದ್ಧಾಂತಿಕ ಕಣ್ನೋಟದ ಹಿನ್ನೆಲೆಯಲ್ಲಿ ವಸಂತರಾಜರವರ ಪುಸ್ತಕ ರೂಪಿತ ಆಗಿದೆ. ಅಮೆರಿಕಾ ಇಂದು ಸಾಮ್ರಾಜ್ಯಶಾಹಿ ದೇಶಗಳ ಮುಖಂಡತ್ವ ವಹಿಸಿ ಜಗತ್ತಿನ ಮೇಲೆ ಸವಾರಿ ಮಾಡಲು ಹೊರಟಿರುವ ಸಂದರ್ಭದಲ್ಲಿ ಮತ್ತು ಇಲ್ಲಿಯ ಸರ್ಕಾರಗಳು ಏಕಾಏಕಿಯಾಗಿ ಸಾಮ್ರಾಜ್ಯಶಾಹಿಗಳ ದಿವಾಳಿಕೋರ ನೀತಿಗಳಿಗೆ ಅಡಿಯಾಳಾಗಿ ವರ್ತಿಸಿ ದೇಶದ ಹಿತಾಸಕ್ತಿಯನ್ನು ಬಲಿಕೊಡುತ್ತಿರುವ ಸಂದರ್ಭದಲ್ಲಿ ಜಾಗತೀಕರಣದ ಬಗ್ಗೆ, ವೈಚಾರಿಕ ವಿವರ ಕೊಡುವ ಎರಡು ಕೃತಿ ಮತ್ತು ಇದೇ ಅಂಶಗಳ ಬಗ್ಗೆ ಸೃಜನಶೀಲ ಪ್ರಕಾರದಲ್ಲಿ ವಿವರಿಸುವ ವಸಂತರಾಜರ ಕೃತಿ ಬಿಡುಗಡೆ ಆಗುತ್ತಿರುವುದು ಮಹತ್ವದ ಅಂಶವಾಗಿದೆ ಎಂದರು. ಲೇಖಕರಾದ ಎನ್.ಕೆ.ವಸಂತರಾಜ್ ಅವರು ತಮ್ಮ ಅನಿಸಿಕೆ ಹೇಳಿದರು. ಶಿರಸಿಯ ಸಿ.ಆರ್. ಶಾನಬಾಗ್ ಎಲ್ಲರನ್ನು ಸ್ವಾಗತಿಸಿ ಅಧ್ಯಯನ ಪ್ರಕಾಶನದ ಸ್ವರೂಪವನ್ನು ಹೇಳಿದರು. ಚಿಂತನದ ಜಿಲ್ಲಾ ಸಂಚಾಲಕರಾದ ವಿಠ್ಠಲ ಭಂಡಾರಿ ಕಾರ್ಯಕ್ರಮ ನಿರೂಪಿಸಿದರು.

'ಇಣುಕಿ'ನಲ್ಲಿ ಪ್ರತಿಯೊಬ್ಬರೂ ಇಣುಕಬೇಕು

ನಾನೊಬ್ಬ ಸಾಫ್ಟ್‌ವೇರ್ ಕ್ಷೇತ್ರಕ್ಕೆ ಮತಾಂತರಗೊಂಡ ಎಂಜಿನಿಯರ್ ಎಂದು ತಮ್ಮನ್ನು ಬಣ್ಣಿಸಿಕೊಳ್ಳುವ ಎನ್.ಕೆ.ವಸಂತ ರಾಜ್ ಕನ್ನಡದ ಓದುಗರು ಮರೆಯಲಾಗದ ಪ್ರವಾಸ ಕಥನವನ್ನು ನೀಡಿದ್ದಾರೆ. ಈ ಮೂಲಕ ಅವರು ಸಾಹಿತ್ಯ ಕ್ಷೇತ್ರಕ್ಕೂ ಯಶಸ್ವಿಯಾಗಿ ಮತಾಂತರಗೊಂಡಿದ್ದಾರೆ. ಅಮೆರಿಕಾ ಬಗ್ಗೆ ಇನ್ನಿಲ್ಲದಷ್ಟು ಪ್ರವಾಸ ಕಥನಗಳು ಬಂದಿವೆ. ಆದರೆ ಎಂಜಿನಿಯರ್ ಬರೆದ ಪ್ರವಾಸ ಕಥನ ಬಂದಿಲ್ಲ. ವಸಂತರಾಜ್ ಅವರ 'ಅಮೆರಿಕದೊಳಗೊಂದು ಇಣುಕು' ಪ್ರವಾಸ ಕಥನದಲ್ಲೊಂದು ಮೈಲುಗಲ್ಲು. ತನ್ನ ಮಾಧ್ಯಮ ಶಕ್ತಿಯಿಂದಾಗಿ ಅಮೆರಿಕಾ ತನ್ನ ಬಗ್ಗೆ ಒಂದು ಭ್ರಮಾಲೋಕವನ್ನೇ ಸೃಷ್ಟಿಸಿದೆ. ಈ ಭ್ರಮೆಯ ಗುಳ್ಳೆ ಒಡೆಯಬೇಕಾದರೆ ವಂಸತರಾಜ್‌ರ ಈ 'ಇಣುಕಿ'ನಲ್ಲಿ ಪ್ರತಿಯೊಬ್ಬರೂ ಇಣುಕಬೇಕು.

ವಸಂತ್ ಅವರ ಒಳಗಣ್ಣು ಅಮೆರಿಕಾದ ಎಲ್ಲೆಲ್ಲಾ ಹರಿದಾಡಿದೆ ಎಂಬುದು ವಿಸ್ಮಯ ಹುಟ್ಟಿಸುತ್ತದೆ. ವಸಂತ್ ಅವರ ಹಾಸ್ಯಪ್ರಜ್ಞೆ, ರಾಜಕೀಯ ತಿಳಿವು, ಸಂಕೀರ್ಣವಾದದ್ದನ್ನೂ ಸರಳವಾಗಿ ಬಿಡಿಸಿಹೇಳುವ ಶೈಲಿ ಅವರನ್ನು ಇತರ 'ಪ್ರವಾಸ' ಕಥನಕಾರರಿಗಿಂತ ಭಿನ್ನವಾಗಿಸಿದೆ.

ಈ ಕಾರಣದಿಂದಾಗಿಯೇ ಅಮೆರಿಕಾ ಬಗ್ಗೆ ಇದುವರೆಗೂ ಮುಚ್ಚಿಹೋಗಿದ್ದ ಅನೇಕ ವಿವರಗಳು ಇಲ್ಲಿ ಮೊದಲ ಬಾರಿಗೆ ಹೊರ ಬಂದಿವೆ. ಸ್ವಾತಂತ್ರ್ಯ ದೇವಿಯ ಪ್ರತಿಮೆ ಆಗಸದೆತ್ತರ ಬೆಳೆದು ನಿಂತಿದ್ದರೂ ಪ್ರತಿಯೊಬ್ಬರ ಸ್ವಾತಂತ್ರ್ಯ ಪಾತಾಳ ಕಂಡಿರುವ, ತಾನು ನಡೆದದ್ದೇ ದಾರಿ ಎಂಬುದನ್ನು ಜಗತ್ತಿಗೆ ಮನದಟ್ಟು ಮಾಡಿಕೊಡಲು ಯತ್ನಿಸುತ್ತಿರುವ ಅಮೆರಿಕಾ ಈ ಇಣುಕುನೋಟದಲ್ಲಿ ಬಿಚ್ಚಿಕೊಂಡಿದೆ. ಒಂದು ಸ್ಟಿಕರ್, ಒಂದು ಜಾಹಿರಾತು, ಆಡಿದ ಒಂದು ಮಾತು, ಒಂದು ಕಟ್ಟಡದ ಮೂಲಕ ಇಡೀ ಅಮೇರಿಕಾದ ಚರಿತ್ರೆಯನ್ನೇ ಜಾಲಾಡುವ ರೀತಿ 'ಅಮೆರಿಕದೊಳಗೊಂದು ಇಣುಕು' ವನ್ನು ವಿಶಿಷ್ಟ ಅಮೆರಿಕಾ ಕಥನವನ್ನಾಗಿಸಿದೆ.

ಅಮೆರಿಕದವನು
ಭೂಮಂಡಲದ ಚೆಂಡನ್ನು
ಎತ್ತ ಒದ್ದರೂ ಗೋಲವನದೇ!

ಎಂಬ ಕವಿಮಾತಿಗೆ ಈ ಪುಸ್ತಕ ಸಮ್ಮತಿಯ ಮುದ್ರೆಯೊತ್ತುತ್ತದೆ.

- ಜಿ.ಎನ್.ಮೋಹನ್

PRBDECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH